60
ಸಂಚಿಕೆ

# ಸಾಹಿತ್ಯ ದಾಸೋಹ – 236

ಮೇ 2025 12.04.2025ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

# ನಮ್ಮ ಮಾತು

**ಇದು ಸಾಹಿತ್ಯ ದಾಸೋಹದ 60ನೆಯ ಸಂಚಿಕೆ.**

'ಸಾಹಿತ್ಯ ದಾಸೋಹ' - ಇದು ನಮ್ಮ 'ಸಮನ್ವಯ ಸಮಿತಿ ಕನ್ನಡವೇ ಸತ್ಯ' ವೇದಿಕೆಯ ಮುಖ್ಯಧಾರೆ. ಮೂಲತಃ 'ಬ್ಯಾಂಕಿಂಗ್ ಪ್ರಪಂಚ' ಹಾಗೂ ಬ್ಯಾಂಕಿಂಗ್ ಕಮ್ಮಟಗಳು ನಿಂತುಹೋದ ನಂತರ ಸಮನ್ವಯ ಸಮಿತಿಯ ಚಟುವಟಿಕೆಗಳು ಕಡಿಮೆಯಾದಾಗ, ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿಯ ಕಾರ್ಯಕರ್ತರನ್ನು ಒಗ್ಗೂಡಿಸಿ ಕನ್ನಡದಲ್ಲಿ ಬ್ಯಾಂಕಿಂಗ್ ಹಾಗೂ ಸಾಹಿತ್ಯಿಕ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗುವ ಉದ್ದೇಶದಿಂದ 26 ವರ್ಷಗಳ ಹಿಂದೆ ಅಂದರೆ 1999ರ ಆಗಸ್ಟ್ 15ರಂದು 'ಸಾಹಿತ್ಯ ದಾಸೋಹ' ಎಂಬ ಅನೌಪಚಾರಿಕ ವೇದಿಕೆ ಆರಂಭವಾಯಿತು.

ಮೊದಲ ದಾಸೋಹ ನಡೆದದ್ದು ಶ್ರೀ ವಿಠ್ಠಲ ಇಜೇರಿಯವರ ಮನೆಯಲ್ಲಿ. ನಂತರದ 150 ದಾಸೋಹಗಳು ಪ್ರತಿ ತಿಂಗಳೂ ವಿವಿಧ ಸದಸ್ಯರ ಮನೆಗಳಲ್ಲಿ ನಡೆದವು. ಆರಂಭದ 40 ದಾಸೋಹಗಳನ್ನು ಶ್ರೀ ಪರಶುರಾಮಪ್ಪನವರು, ಆಮೇಲಿನ ಕೆಲವು ದಾಸೋಹಗಳನ್ನು ಶ್ರೀಯುತ ರವಿ ಕುಸಬಿ, ಬಿ.ಎನ್.ನರಸಿಂಹ ಮೂರ್ತಿ ಮತ್ತು ಎಂ.ಜಿ.ವೆಂಕಟೇಶ ಮೂರ್ತಿಯವರು ಸಂಚಾಲಕರಾಗಿ ಮುನ್ನಡೆಸಿದರು. ನಂತರ ಶ್ರೀ ಬಿ.ಎಸ್.ಚಂದ್ರಶೇಖರ್ ಅವರ ಸಂಚಾಲಕತ್ವದಲ್ಲಿ 100ಕ್ಕೂ ಹೆಚ್ಚು ದಾಸೋಹಗಳು ನಡೆದುವು. ಶ್ರೀ ಕೆ.ಎನ್.ಮಹಾಬಲ ಅವರು ಸಂಚಾಲಕರಾದ ಮೇಲೆ, ಮನೆಗಳಲ್ಲಿ ನಡೆಯುತ್ತಿದ್ದ ದಾಸೋಹ ಬಿಎಂ.ಶ್ರೀ ಪ್ರತಿಷ್ಠಾನದ ಸಭಾಂಗಣಕ್ಕೆ ಸ್ಥಳಾಂತರಗೊಂಡಿತು. ಈವರೆಗಿನ ಒಟ್ಟು 236 ದಾಸೋಹಗಳ ಸಂಚಾಲಕತ್ವವನ್ನು ನಿರ್ವಹಿಸಿ, ದಾಸೋಹವನ್ನು ಯಶಸ್ವಿಯಾಗಿ ಮುನ್ನಡೆಸಿದ ಎಲ್ಲಾ ಸಂಚಾಲಕರಿಗೂ, ಮನೆಮನೆಯಲ್ಲಿನ ದಾಸೋಹದ ಆತಿಥ್ಯ ವಹಿಸಿದ ಎಲ್ಲರಿಗೂ ಧನ್ಯವಾದಗಳು.

ಫೆಬ್ರವರಿ 2020ರಲ್ಲಿ ಕರೋನಾ ಮಹಾಮಾರಿ ಇಡೀ ಜಗತ್ತನ್ನು ಆವರಿಸಿಕೊಂಡಾಗ, ದಾಸೋಹವನ್ನು ಮುಂದುವರಿಸುವುದು ಹೇಗೆಂಬ ಪ್ರಶ್ನೆ ಕಾಡತೊಡಗಿತು. ಆಗ ನೆರವಿಗೆ ಬಂದ ಶ್ರೀ ಎಚ್.ಎಲ್.ಗುರುಪ್ರಸಾದ್, ಅಂತರಜಾಲದ ಮೂಲಕ ದಾಸೋಹವನ್ನು ಮುನ್ನಡೆಸಲು ಸೂಚಿಸಿ, ಅದಕ್ಕೆ ಅಗತ್ಯವಾದ ತಾಂತ್ರಿಕ ಸಹಾಯವನ್ನೂ ಒದಗಿಸಿದರು.

ನಮ್ಮ ಸಾಹಿತ್ಯ ದಾಸೋಹ ಅಭಿಯಾನದಲ್ಲಿ ಇದುವರೆಗೆ 236 ದಾಸೋಹಗಳು ನಡೆದಿವೆ. ಆದರೆ ಮೊದಲ 176 ದಾಸೋಹಗಳಲ್ಲಿ ಪ್ರಸ್ತುತಪಡಿಸಲಾದ ಬರಹಗಳನ್ನು ಒಂದೆಡೆ ಸಂಗ್ರಹಿಸಲಾಗಿಲ್ಲ. ಅಂತರಜಾಲ ಮುಖೇನ 'ನೋಡಿಯೋ ಸಾಹಿತ್ಯ ದಾಸೋಹ' ವೇದಿಕೆಯಲ್ಲಿ ದಾಸೋಹಗಳು ನಡೆಯಲು ಆರಂಭವಾದ ನಂತರ ದಾಸೋಹದಲ್ಲಿ ಓದಿದ ಬರಹಗಳು ಮತ್ತು ಅವುಗಳ ಬಗ್ಗೆ ಅಧ್ಯಕ್ಷರ ಅವಲೋಕನವನ್ನು ಸಂಗ್ರಹಿಸಿ ಪಿಡಿಎಫ್ ರೂಪದಲ್ಲಿ ಪ್ರಕಟಿಸುವ ಸಲಹೆಯೂ ಶ್ರೀ ಗುರುಪ್ರಸಾದ್ ಅವರದ್ದೇ. ಆರಂಭದಲ್ಲಿ ಅವರೇ ಲೇಖನಗಳನ್ನು ತರಿಸಿಕೊಂಡು ಪಿಡಿಎಫ್ ಸಂಚಿಕೆಗಳನ್ನು ಸಿದ್ಧಪಡಿಸುತ್ತಿದ್ದರು. ನಂತರ ಶ್ರೀ ಗುರುರಾಜ ಶಾಸ್ತ್ರಿ ಮತ್ತು ಶ್ರೀ ಶೃಂಗೇಶ್ವರ ಶರ್ಮ ಅವರು ಈ ಕಾರ್ಯವನ್ನು ಮುಂದುವರೆಸಿದರು. ಇವರೆಲ್ಲರ ಸತತ ಶ್ರಮ, ಕ್ರಿಯಾಶೀಲತೆ ಹಾಗೂ ಸೃಜನಶೀಲತೆಯಿಂದಾಗಿ ದಾಸೋಹ ಸಂಚಿಕೆಗಳು ಯಾವುದೇ ಸಾಹಿತ್ಯಕ ಮಾಸಪತ್ರಿಕೆಗಳಂತೆ ಹೊರಬರುತ್ತಿದ್ದು, ಎಲ್ಲ ಸಂಚಿಕೆಗಳಲ್ಲೂ ಬಣ್ಣದ ಚಿತ್ರಗಳು ಮತ್ತು ಲೇಖನಗಳಿಗೆ ಅನ್ವಯವಾಗುವ ಸಾಂದರ್ಭಿಕ ಚಿತ್ರಗಳು ಸಂಚಿಕೆಯ ಭಾಗವಾಗಿ ಅದರ ಮೆರಗನ್ನು ಇಮ್ಮಡಿಗೊಳಿಸಿವೆ. ಸಂಪಾದಕೀಯ, ಪರಿವಿಡಿ ಎಲ್ಲವೂ ಮೆಚ್ಚುಗೆಯ ಮಹದಂಶಗಳಾಗಿವೆ. ಈ ಬಗ್ಗೆ ನಮ್ಮ ಅನೇಕ ಸದಸ್ಯರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆದರೆ ಇನ್ನೂ ಹೆಚ್ಚಿನ ಕ್ರಿಯಾಶೀಲತೆಯ ಅಗತ್ಯವಿದೆ. ದಯವಿಟ್ಟು ಸಂಚಿಕೆಯ ಲೇಖನಗಳನ್ನು ಆಳವಾಗಿ ವಿಮರ್ಶಿಸಲು ಪ್ರಯತ್ನಿಸಿ ಸಂಚಿಕೆಯನ್ನು ಹೆಚ್ಚು ಮೌಲ್ಯಯುತವನ್ನಾಗಿಸೋಣ.

ಈ ಸಂಚಿಕೆಯೂ ಸೇರಿದಂತೆ ಇದುವರೆಗೆ ಒಟ್ಟು 60 ಸಂಚಿಕೆಗಳು ಪ್ರಕಟವಾಗಿದ್ದು, ಇವುಗಳ ಪಟ್ಟಿ ಈ ಸಂಚಿಕೆಯ ಕೊನೆಯಲ್ಲಿದೆ. ಇಷ್ಟೇ ಅಲ್ಲದೆ ವೇದಿಕೆಯು ವಿಶೇಷವಾಗಿ ಹೊರತಂದ 'ಎಂಎಸ್ಸೆನ್ ನಗೆಹಾರ', 'ಹೋಳಿ ಹಬ್ಬಕ್ಕೆ ಮೆರಗಿನ ಭಾವ' ಹಾಗೂ 'ಮಹಿಳಾ ವಿಶೇಷಾಂಕ' ಸಂಚಿಕೆಗಳು ಸಹ ನಮ್ಮ ವೇದಿಕೆಯ ಜಾಲತಾಣದಲ್ಲಿ ಲಭ್ಯವಿವೆ. ಬರಹಗಳನ್ನು ಶಾಶ್ವತವಾಗಿ ದಾಖಲಿಸಲು ನೆರವಾದ ಶ್ರೀಯುತ ಎಚ್.ಎಲ್.ಗುರುಪ್ರಸಾದ್, ಗುರುರಾಜ ಶಾಸ್ತ್ರಿ ಮತ್ತು ಶೃಂಗೇಶ್ವರ ಶರ್ಮ ಇವರಿಗೆ ನಮ್ಮ ಕೃತಜ್ಞತೆಗಳು.

236ನೆಯ ದಾಸೋಹದ ಅಧ್ಯಕ್ಷತೆ ವಹಿಸಿ ಎಲ್ಲ ಪ್ರಸ್ತುತಿಗಳ ಬಗ್ಗೆಯೂ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ ಶ್ರೀ ಎನ್.ವಿ.ರಘುರಾಂ ಅವರಿಗೂ, ದಾಸೋಹದಲ್ಲಿ ಭಾಗವಹಿಸಿ ತಮ್ಮ ಬರಹಗಳನ್ನು ಮಂಡಿಸಿದ ಎಲ್ಲ ದಾಸೋಹಿಗಳಿಗೂ, ವೀಕ್ಷಕರಿಗೂ ಮತ್ತು ತಾಂತ್ರಿಕ ವರ್ಗದ ಸದಸ್ಯರಿಗೂ ವಂದನೆಗಳು. ಈ ಸಂಚಿಕೆಯ ಬಗೆಗಿನ ತಮ್ಮ ಮುಕ್ತ ಅಭಿಪ್ರಾಯಗಳಿಗೆ ಸ್ವಾಗತ.

*ಬೆಂ.ಶ್ರೀ. ರವೀಂದ್ರ*

**ಪ್ರಧಾನ ಸಂಚಾಲಕರು** **10.05.2025**

# ದಾಸೋಹದ ಪುಟಗಳಲ್ಲಿ...



**ಮುಖಚಿತ್ರ : ಪಹಲ್ಗಾಮ್ ಪ್ರಕೃತಿ ಸೌಂದರ್ಯ – ಚಿತ್ರಕೃಪೆ: ಅಂತರಜಾಲ**

## ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
## ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

# ಸಾಹಿತ್ಯ ದಾಸೋಹ – 236

### ಕಾರ್ಯಕ್ರಮ ವರದಿ: ಎಸ್. ಶೃಂಗೇಶ್ವರ ಶರ್ಮ

236ನೆಯ ಸಾಹಿತ್ಯ ದಾಸೋಹವು ದಿನಾಂಕ 12ನೆಯ ಏಪ್ರಿಲ್ 2025ರಂದು ಮಧ್ಯಾಹ್ನ 3.30ಕ್ಕೆ ಗೂಗಲ್ ಮೀಟ್‌ನಲ್ಲಿ ಅಂತರಜಾಲ ಮುಖೇನ ಆರಂಭವಾಯಿತು. ದಾಸೋಹದ ಅಧ್ಯಕ್ಷತೆಯನ್ನು ಶ್ರೀ ಎನ್.ವಿ. ರಘುರಾಂ ಅವರು ವಹಿಸಿದ್ದರು.

ಸಾಹಿತ್ಯ ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್. ಮಹಾಬಲ ಅವರು ಔಪಚಾರಿಕ ಮಾತುಗಳೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶ್ರೀಮತಿ ರೇಣುಕಾ ದೇಸಾಯಿಯವರು ಎಲ್ಲರನ್ನೂ ಸ್ವಾಗತಿಸಿ, ದಾಸೋಹದ ಅಧ್ಯಕ್ಷರಾದ ಶ್ರೀ ಎನ್.ವಿ. ರಘುರಾಂ ಅವರನ್ನು ಸಭೆಗೆ ಪರಿಚಯಿಸಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಪ್ರಧಾನ ಸಂಚಾಲಕ ಶ್ರೀ ಬೆಂ.ಶ್ರೀ.ರವೀಂದ್ರ ಅವರು, "30ನೆಯ ಮಾರ್ಚ್ 2025ರಂದು ವಿಶ್ವಾವಸು ಸಂವತ್ಸರದ ಚಾಂದ್ರಮಾನ ಯುಗಾದಿಯ ದಿನದಂದು ವೇದಿಕೆಯು ಒಂದು ದಿನದ ವಿಶೇಷ ಅಭಿಯಾನವನ್ನು ಹಮ್ಮಿಕೊಂಡಿತ್ತು. ಅಂದು ವೇದಿಕೆಯ ಸದಸ್ಯರು ತಮ್ಮ ಜೀವನದಲ್ಲಿ ಕಂಡುಂಡ ಸಿಹಿ ಕಹಿ ನೆನಪುಗಳನ್ನು ಕುರಿತು 350 ಪದಗಳಿಗೆ ಮೀರದಂತೆ ಪ್ರಬಂಧವನ್ನು ಬರೆದು ನಮ್ಮ ವಾಟ್ಸಾಪ್ ವೇದಿಕೆಯಲ್ಲಿ ಪ್ರಕಟಿಸಬೇಕೆಂದು ಕೋರಲಾಗಿತ್ತು. 'ಸ್ವಾನುಭವದ ಬೇವು ಬೆಲ್ಲ, ಕಿರು ಪ್ರಬಂಧಗಳ ಹೋಳಿಗೆ' ಎಂಬ ಈ ಅಭಿಯಾನದಲ್ಲಿ ಕೇವಲ ಒಂದು ದಿನದಲ್ಲಿ ನಮ್ಮ ವೇದಿಕೆಯ 37 ಸದಸ್ಯರು ಒಟ್ಟು 50 ಪ್ರಬಂಧಗಳನ್ನು ಪ್ರಸ್ತುತಪಡಿಸಿರುವುದು ಹೆಮ್ಮೆಯ ವಿಷಯ. ಅತಿ ಕಡಿಮೆ ಅವಧಿಯಲ್ಲಿ ಸ್ಪಂದಿಸಿದ ಎಲ್ಲ ಲೇಖಕರಿಗೂ ವೇದಿಕೆಯ ಪರವಾಗಿ ಕೃತಜ್ಞತೆಗಳು. ಈ ಎಲ್ಲ ಪ್ರಬಂಧಗಳನ್ನೂ ಒಳಗೊಂಡ ಒಂದು ಸಂಕಲನವನ್ನು ಪ್ರಕಟಿಸುವ ಬಗ್ಗೆ ಸಮಾಲೋಚನೆ ನಡೆಸಲಾಗುತ್ತಿದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಕ್ರಮೇಣ ತಿಳಿಸಲಾಗುವುದು" ಎಂದು ಹೇಳಿದರು.




ನಂತರ ದಾಸೋಹದಲ್ಲಿ ಒಟ್ಟು 17 ಲೇಖಕರು ಕತೆ, ಕವನ, ಪ್ರಬಂಧ, ಪ್ರವಾಸ ಕಥನ ಮುಂತಾದ ತಮ್ಮ

ಸ್ವರಚಿತ ಬರಹಗಳನ್ನು ಸ್ವತಃ ಓದುವುದರ ಮೂಲಕ ಪ್ರಸ್ತುತಪಡಿಸಿದರು. ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀ ಎನ್.ವಿ. ರಘುರಾಂ ಅವರು ಪ್ರತಿಯೊಂದು ಬರಹವನ್ನೂ ವಿಶ್ಲೇಷಿಸಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಅಧ್ಯಕ್ಷರ ಅನಿಸಿಕೆಗಳ ಪೂರ್ಣಪಾಠವನ್ನು ಈ ಸಂಚಿಕೆಯಲ್ಲಿ ಪ್ರತ್ಯೇಕವಾಗಿ ನೀಡಲಾಗಿದೆ.

ಕೊನೆಯಲ್ಲಿ ಶ್ರೀ ಗುರುರಾಜ ಶಾಸ್ತ್ರಿಯವರು ಅಧ್ಯಕ್ಷರು, ದಾಸೋಹಿಗಳು, ಸಭಿಕರು ಮತ್ತು ತಾಂತ್ರಿಕ ವರ್ಗದ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸುವುದರೊಂದಿಗೆ 236ನೆಯ ದಾಸೋಹ ಮುಕ್ತಾಯವಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಹೆಚ್. ಆರ್.ಗುರುರಾಜ ಶಾಸ್ತ್ರಿ
ಜಿ ಮೀಟ್ ಆತಿಥ್ಯ : ಶ್ರೀಮತಿ ರೇಣುಕಾ ದೇಸಾಯಿ
ವಿಡಿಯೋ ಸಂಸ್ಕರಣೆ : ಶ್ರೀ ರವಿ ಕುಸಬಿ
ಪಿಡಿಎಫ್ ಆವೃತ್ತಿ ತಯಾರಕರು : ಶ್ರೀ ಶೃಂಗೇಶ್ವರ ಶರ್ಮ ಎಸ್.

ಇಡೀ ದಾಸೋಹದ ಸಂಪೂರ್ಣ ಚಿತ್ರಣವು ವೇದಿಕೆಯ ಯುಟ್ಯೂಬ್ ವಾಹಿನಿ ಮತ್ತು ಜಾಲತಾಣದಲ್ಲಿ ಲಭ್ಯವಿದೆ.

***

# ತಿಂಗಳ ಬೆಳಕು - 14

**ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ**
**ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ**

# "ವಿಶ್ವ ಕರ ಸಮರ"


## ಉಪನ್ಯಾಸಕರು : ಶ್ರೀ ಟಿ.ಕೆ. ರಂಗನಾಥ್

**ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್**

ದಿನಾಂಕ 26ನೆಯ ಏಪ್ರಿಲ್ 2025ರಂದು ಶನಿವಾರ ಸಂಜೆ 5.30ಕ್ಕೆ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ "ವಿಶ್ವ ಕರ ಸಮರ" ವಿಷಯದ ಬಗ್ಗೆ ಶ್ರೀ ಟಿ.ಕೆ. ರಂಗನಾಥ್ ಅವರಿಂದ ಉಪನ್ಯಾಸ ಏರ್ಪಡಿಸಲಾಗಿತ್ತು.

ಅಂತರಜಾಲದ ಗೂಗಲ್ ಮೀಟ್ ಮುಖೇನ ನಡೆದ ಈ ಕಾರ್ಯಕ್ರಮದ ಆರಂಭದಲ್ಲಿ ತಿಂಗಳ ಬೆಳಕು ಸಂಚಾಲಕರಾದ ಶ್ರೀ ರವಿ ಕುಸಬಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿ ಉಪನ್ಯಾಸಕರಾದ ಶ್ರೀ ಟಿ.ಕೆ. ರಂಗನಾಥರನ್ನು ಪರಿಚಯಿಸಿದರು.

ಶ್ರೀ ರಂಗನಾಥ್ ಅವರು ತಮ್ಮ ಮಾತು ಆರಂಭಿಸಿ, ಸಾಮಾನ್ಯವಾಗಿ ಟ್ಯಾಕ್ಸ್ ಎಂಬ ಪದಕ್ಕೆ ಕನ್ನಡದಲ್ಲಿ ಕರ ಅಥವಾ ತೆರಿಗೆ ಎನ್ನುತ್ತೇವೆ. ಆಮದು-ರಫ್ತು ವ್ಯವಹಾರದಲ್ಲಿನ ಡ್ಯೂಟಿ ಎಂಬುದಕ್ಕೆ ಕನ್ನಡದಲ್ಲಿ ಸುಂಕ ಎಂಬ ಪದವನ್ನು ಬಳಸುತ್ತೇವೆ. ಇಂದಿನ ವಿಷಯ ಬಹುತೇಕ ಸುಂಕಕ್ಕೆ ಸಂಬಂಧಿಸಿರುವುದರಿಂದ ನಾನು ಇಂದಿನ ಉಪನ್ಯಾಸದಲ್ಲಿ 'ವಿಶ್ವ ಸುಂಕ ಸಮರ' ಎಂದು ಪರಿಗಣಿಸುತ್ತೇನೆ ಎಂದರು. ಅವರ ಉಪನ್ಯಾಸದ ಕೆಲವು ಮುಖ್ಯ ವಿಚಾರಗಳು ಹೀಗಿವೆ:




ಯಾವುದೇ ವ್ಯವಹಾರದಲ್ಲಿ ನಾವು ಬೇರೆ ದೇಶಗಳನ್ನೇಕೆ ಅವಲಂಬಿಸಬೇಕು, ನಾವೇಕೆ ಸ್ವಾವಲಂಬಿಗಳಾಗಿರಬಾರದು ಎಂಬ ಪ್ರಶ್ನೆ ಮೂಡುವುದು ಸಹಜ. ಇದಕ್ಕೆ ಕಾರಣ ಹಲವು. ನೈಸರ್ಗಿಕ ಸಂಪನ್ಮೂಲಗಳ ಅಲಭ್ಯತೆ, ವಿವಿಧ ದೇಶಗಳ ನಡುವಿನ ಆರ್ಥಿಕ ಅಸಮಾನತೆ, ಮಾನವ ಸಂಪನ್ಮೂಲ ಹಾಗೂ ನೈಪುಣ್ಯತೆಯ ಅಂತರ, ತಾಂತ್ರಿಕತೆಯ ಗುಣಮಟ್ಟದ ಅಂತರ, ಹವಾಮಾನ ಹಾಗೂ ಕಾಯಕ ಸಂಸ್ಕೃತಿಯ ನಡುವಿನ ಅಂತರ ಇತ್ಯಾದಿ ಕಾರಣಗಳಿಂದ ದೇಶ ವಿದೇಶಗಳ ನಡುವೆ ಅವಲಂಬನೆ ಅನಿವಾರ್ಯವಾಗುತ್ತದೆ. ಉದಾಹರಣೆಗೆ ಆಭರಣ ಮಾಡುವ ಕುಶಲತೆ ಗುಜರಾತಿನ ಸೂರತ್‌ನಲ್ಲಿರುವುದರಿಂದ ಅಲ್ಲಿ ವಜ್ರದ ಕೈಗಾರಿಕೆ ಉನ್ನತ ಸ್ಥಿತಿಯಲ್ಲಿದೆ. ಆದರೆ ಅಲ್ಲಿ ವಜ್ರದ ಲಭ್ಯತೆಯಿಲ್ಲ. ಆದುದರಿಂದ ಕಚ್ಚಾ ವಜ್ರವನ್ನು ಆಮದು ಮಾಡಿಕೊಂಡು ಆಭರಣಗಳನ್ನು ಸಿದ್ಧಪಡಿಸಿ ರಫ್ತು ಮಾಡಬೇಕಾಗುತ್ತದೆ. ಹಾಗೆಯೇ ಕೆಲವೆಡೆ ಆರ್ಥಿಕ ಅಸಮಾನತೆ ಮತ್ತು ಹವಾಗುಣದಿಂದಾಗಿ ಆಹಾರ ಉತ್ಪನ್ನಗಳ ಕೊರತೆ ಇದೆ. ಇನ್ನು ಕೆಲವು ದೇಶಗಳ ಹವಾಮಾನ ಬೆಳೆ ಬೆಳೆಯಲು ಪೂರಕವಾಗಿರುತ್ತದೆ. ಭಾರತದಲ್ಲಿ ಮಾವು ಹೆಚ್ಚಾಗಿ

ಬೆಳೆಯುತ್ತದೆ. ಶ್ರೀಲಂಕಾದಲ್ಲಿ ಚಹಾ ಹೆಚ್ಚಾಗಿ ಉತ್ಪನ್ನವಾಗುತ್ತದೆ. ಹವಾಮಾನ ಆಧಾರಿತ ಬೆಳೆಗಳನ್ನು ಬೆಳೆದು ಇತರ ದೇಶಗಳಿಗೆ ರಫ್ತು ಮಾಡಲಾಗುತ್ತದೆ. ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಹೊಸ ಹೊಸ ಆವಿಷ್ಕಾರಗಳು ಆಗುತ್ತಿರುತ್ತವೆ. ಫ್ರಾನ್ಸ್ ಮತ್ತು ಅಮೆರಿಕದಲ್ಲಿ ಬೋಯಿಂಗ್ ಹಾಗೂ ಏರ್ ಬಸ್ ತಯಾರಾಗುತ್ತದೆ. ಹೀಗೆ ದೇಶ ದೇಶಗಳ ನಡುವೆ ವ್ಯಾಪಾರ ವಹಿವಾಟು ಅನಿವಾರ್ಯ ಅಗತ್ಯವಾಗಿದೆ

ಆಡಂ ಸ್ಮಿತ್ ಎಂಬವರು ನಿರುಪಾಧಿಕ ಅನುಕೂಲತೆ ಬಗ್ಗೆ ಹೇಳಿದ್ದಾರೆ. ಅಂದರೆ ಎರಡು ದೇಶಗಳಿಗೆ ಲಾಭವಾಗುವಂತೆ ಯೋಗ್ಯ ದರದಲ್ಲಿ ಪರಸ್ಪರ ವ್ಯವಹರಿಸಿ ಅಗತ್ಯಗಳನ್ನು ಪೂರೈಸಿಕೊಳ್ಳಬೇಕು ಎಂದು. ಡೇವಿಡ್ ರಿಕಾರ್ಡ್, ತುಲನಾತ್ಮಕ ಅನುಕೂಲತೆಯ ಬಗ್ಗೆ ಪ್ರಸ್ತಾಪಿಸುತ್ತಾ ಯಾವುದೇ ದೇಶದಲ್ಲಿ ಎರಡು ವಸ್ತು ತಯಾರಿಸಲು ಅವಕಾಶ ಇದ್ದಾಗ ಯಾವುದನ್ನು ಲಾಭಪ್ರದವಾಗಿ ಹೆಚ್ಚು ಉತ್ಪಾದಿಸುವುದು ಸಾಧ್ಯವೋ ಅದನ್ನು ಉತ್ಪಾದಿಸಿ ರಫ್ತು ಮಾಡಿ ಮತ್ತೊಂದನ್ನು ಆಮದು ಮಾಡಿಕೊಳ್ಳುವುದು ವಿಹಿತ ಎಂದು ಅಭಿಪ್ರಾಯಪಡುತ್ತಾರೆ.

ಮುಕ್ತ ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಹಲವು ಅಡೆತಡೆಗಳು ಇರುತ್ತವೆ. ಇದರಲ್ಲಿ ವಿದೇಶಿ ವಿನಿಮಯದ ಕೊರತೆ ಮುಖ್ಯವಾದದ್ದು. ಹಿಂದೆ ವಸ್ತುಗಳ ವಿನಿಮಯ ಆಗುತ್ತಿತ್ತು. ಆದರೆ ಈಗ ನಮ್ಮ ರಫ್ತು ಮತ್ತು ಆಮದು ಎರಡೂ ಒಂದೇ ದೇಶದ ಜೊತೆಗಿರುವುದಿಲ್ಲ. ಹೀಗಾಗಿ ನಾವು ವ್ಯವಹರಿಸುವ ದೇಶವು ಸ್ವೀಕರಿಸುವಂತಹ ಚಲಾರ್ಥ (ಕರೆನ್ಸಿ) ಬೇಕಾಗುತ್ತದೆ. ಜಾಗತಿಕವಾಗಿ ಅಂಗೀಕಾರವಾಗುವ ಚಲಾರ್ಥವಿದ್ದರೆ ವ್ಯವಹಾರ ಸುಲಭ. ಅದಕ್ಕೆ ಸಾಕಷ್ಟು ಮೊತ್ತದ ವಿದೇಶೀ ವಿನಿಮಯ ಇರಬೇಕು. ಅಭಿವೃದ್ಧಿಶೀಲ ದೇಶಗಳಲ್ಲಿ ಆಂತರಿಕ ಉತ್ಪಾದನೆ ಕಡಿಮೆ ಇರುವುದರಿಂದ ಕೈಗಾರಿಕೀಕರಣ ಅಷ್ಟಾಗಿ ಆಗದಿರುವುದರಿಂದ ವಿದೇಶಿ ವಿನಿಮಯದ ಕೊರತೆ ಇರುತ್ತದೆ.

ಆಮದಿಗೆ ಹೆಚ್ಚು ಅವಲಂಬಿಸಿರುವ ದೇಶದಲ್ಲಿ ಉತ್ಪಾದನೆ ಹೆಚ್ಚಾಗದೆ ನಿರುದ್ಯೋಗ ಮತ್ತು ಅಶಾಂತಿ ಉಂಟಾಗುತ್ತದೆ. ಆಮದಾದ ವಸ್ತುವಿನ ಬೆಲೆ ಕಡಿಮೆ ಇದ್ದಂತಹ ಸಂದರ್ಭದಲ್ಲಿ ಸ್ಥಳೀಯವಾಗಿ ತಯಾರಾದ ತುಟ್ಟಿ ಬೆಲೆಯ ವಸ್ತುಗಳಿಗೆ ಬೇಡಿಕೆ ಇಲ್ಲದೆ ಉದ್ಯಮಗಳು ಮುಚ್ಚಲ್ಪಡುತ್ತವೆ. ಚೀನಾದಿಂದ ಆಟದ ಸಾಮಾನು ಸೇರಿದಂತೆ ಅನೇಕ ವಸ್ತುಗಳು ಭಾರತಕ್ಕೆ ಆಮದಾಗುವುದರಿಂದ ಆಟದ ಸಾಮಾನು ತಯಾರಿಸುವ ಭಾರತೀಯ ಉದ್ಯಮಗಳು ನಷ್ಟಕ್ಕೆ ಸಿಲುಕಿ ಮುಚ್ಚಲ್ಪಟ್ಟು, ಸ್ಥಳೀಯ ನೌಕರರು ನಿರುದ್ಯೋಗಿಗಳಾಗುತ್ತಿದ್ದಾರೆ. ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಕೆಲವು ಕೈಗಾರಿಕೆಗಳಿಂದ ತಮ್ಮ ದೇಶದ ಪರಿಸರಕ್ಕೆ ಹಾನಿಯಾಗಬಹುದೆಂದು ಬೇರೆ ದೇಶಗಳಿಗೆ ಬಂದು ಕೈಗಾರಿಕೆಗಳನ್ನು ಸ್ಥಾಪಿಸಿ ಅಲ್ಲಿ ಸಿದ್ಧಪಡಿಸಿದ ವಸ್ತುಗಳನ್ನು ತಮ್ಮ ದೇಶಕ್ಕೆ ಒಯ್ಯುತ್ತಾರೆ. ಪರಿಸರದ ದೃಷ್ಟಿಯಿಂದ ಇಂತಹ ಕೈಗಾರಿಕೆಗಳ ಸ್ಥಾಪನೆಯನ್ನು ಉತ್ತೇಜಿಸುವುದಿಲ್ಲ. ಯಾವುದು ಬೇಕೋ ಅದನ್ನು ಆಮದು ಮಾಡಿಕೊಳ್ಳುವುದರಿಂದ ಆಮದು ಸುಂಕದ ರೂಪದಲ್ಲಿ ಸರಕಾರಕ್ಕೆ ಹೆಚ್ಚಿನ ಆದಾಯ ಬರುತ್ತದೆ.

ವ್ಯಾಪಾರ ಶಿಲ್ಕು, ಪಾವತಿ ಶಿಲ್ಕು, ಬಂಡವಾಳ ಖಾತೆ, ವಿದೇಶಿ ಮೀಸಲು ನಿಧಿ ಮುಂತಾದುವನ್ನು ಸ್ಥೂಲವಾಗಿ ವಿವರಿಸಿದ ರಂಗನಾಥ್ ಅವರು, ದೇಶದ ಒಂದು ವರ್ಷದ ವ್ಯಾಪಾರದಲ್ಲಿ ರಫ್ತಿನಿಂದ ಬರುವ ಆದಾಯ ಮತ್ತು ಆಮದಿನಿಂದ ಆದ ಖರ್ಚು ಕಳೆದರೆ ಅದೇ ವ್ಯಾಪಾರ ಶಿಲ್ಕು. ಚೀನಾ ದೇಶವು ಅತ್ಯಂತ ಅನುಕೂಲಕರವಾದ ವ್ಯಾಪಾರ ಶಿಲ್ಕು ಇಟ್ಟುಕೊಂಡಿದ್ದು, (ಸುಮಾರು 593 ದಶಲಕ್ಷ ಮಿಲಿಯನ್ ಡಾಲರ್ ಹೆಚ್ಚಳ) ಅದರ ರಫ್ತು ಪ್ರಮಾಣ ಹೆಚ್ಚು ಮತ್ತು ಆಮದು ಪ್ರಮಾಣ ಕಡಿಮೆ. ಹಾಗಾಗಿ ಚೀನಾ ಅತ್ಯಂತ ಅನುಕೂಲ ಸ್ಥಿತಿಯಲ್ಲಿದೆ. ಕೊರತೆ ಇರುವ ದೇಶಗಳಲ್ಲಿ ಅಮೆರಿಕಕ್ಕೆ ಮೊದಲ ಸ್ಥಾನವಾದರೆ ಭಾರತದ್ದು ಎರಡನೇ ಸ್ಥಾನ (245 ದಶಲಕ್ಷ ಮಿಲಿಯನ್ ಡಾಲರ್). ಆಮದು ಹೆಚ್ಚಾಗಿ ರಫ್ತು ಕಡಿಮೆಯಾಗಿರುವುದೇ ಇದಕ್ಕೆ ಕಾರಣ.

'ಮಾಡೋಣ ಅಮೆರಿಕ ಮತ್ತೊಮ್ಮೆ ಮಹಾನ್' (MAGA) ಎಂಬ ಘೋಷವಾಕ್ಯದೊಂದಿಗೆ ಪ್ರಧಾನಿ ಟ್ರಂಪ್ ಎರಡನೇ ಬಾರಿ ಅಧಿಕಾರಕ್ಕೆ ಬಂದು 20.01.2025ರಂದು ಅಧಿಕಾರ ಸ್ವೀಕರಿಸುತ್ತಿದ್ದಂತೆಯೇ ಹಲವು ಆದೇಶಗಳನ್ನು ಹೊರಡಿಸಿದರು. ಅಕ್ರಮ

ವಿದೇಶಿಯರನ್ನು ವಾಪಸ್ ಕಳಿಸುವುದು, ವೀಸಾ ಅವಧಿ ಮುಗಿದವರನ್ನು ಅವರ ದೇಶಗಳಿಗೆ ಹಿಂತಿರುಗಲು ಅವಕಾಶ ನೀಡುವುದು, ಅಮೆರಿಕದ ವ್ಯಾಪಾರ ಶಿಲ್ಕು ಸ್ಥಿತಿ ಸುಧಾರಿಸಲು ಪಾರಸ್ಪರಿಕ ದರದಲ್ಲಿ ಆಮದು ಸುಂಕ ವಿಧಿಸುವುದು ಇತ್ಯಾದಿ. ಇತರ ದೇಶಗಳನ್ನು ಉದ್ದೇಶಿಸಿ ನೀವು ಯಾವ ದರದಲ್ಲಿ ಆಮದು ಸುಂಕ ವಿಧಿಸುತ್ತೀರೋ, ಅದೇ ದರದಲ್ಲಿ ನಾವು ಸಹ ಸುಂಕ ವಿಧಿಸುತ್ತೇವೆ ಎಂದರು.

ಬರುವ ವಸ್ತುಗಳಿಗೆ ಆಮದು ಸುಂಕ ಹೆಚ್ಚಿಸಿದರೆ ವಸ್ತುಗಳು ತುಟ್ಟಿಯಾಗಿ ಹಣದುಬ್ಬರ ಹೆಚ್ಚಾಗುವುದು. ಇದರಿಂದ ಅನುಕೂಲವೇನು ಎಂಬ ಪ್ರಶ್ನೆ ಎದುರಾಯಿತು. ಟ್ರಂಪ್ ಅವರು, 'ಜಗತ್ತಿನ ಎಲ್ಲ ದೇಶಗಳು ನಮ್ಮನ್ನು ಕೊಳ್ಳೆ ಹೊಡೆಯುತ್ತಿವೆ. ನಾವು ಇತರ ದೇಶಗಳ ಅವಶ್ಯಕತೆಯನ್ನು ಪೂರೈಸುತ್ತಿದ್ದೇವೆ' ಎಂದರು.

ಮೆಕ್ಸಿಕೋ ಕೆನಡಾ ಹತ್ತಿರ ಇದ್ದು ಜನ ಅಕ್ರಮವಾಗಿ ನುಸುಳುತ್ತಿದ್ದಾರೆ ಅವರಿಗೆ ಶೇಕಡ 25 ಶುಲ್ಕ ವಿಧಿಸಿದರು. ಚೀನಾದಿಂದ ಆಮದು ಕಡಿಮೆ ಮಾಡುವುದಕ್ಕಾಗಿ ಶುಲ್ಕ ಹೆಚ್ಚಿಸಿದರು. ಕೆಲವು ದೇಶಗಳು ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಮಾಡಲು ಮುಂದಾದರು. ಹೀಗಾಗಿ ಮೂವತ್ತು ದಿನ ಅವಕಾಶ ನೀಡಿದರು. ಇದಕ್ಕೆ ಪ್ರತಿಯಾಗಿ ಚೀನಾ ದೇಶವು ಅಮೆರಿಕದಿಂದ ಬರುವ ತೈಲ, ಕಲ್ಲಿದ್ದಲಿನ ಮೇಲೆ ಶೇ.10ರಷ್ಟು ಶುಲ್ಕ ವಿಧಿಸಿತು. ಯುರೋಪಿಯನ್ ಯೂನಿಯನ್ ಕೂಡ ಕೈಗಾರಿಕಾ ಕೃಷಿ ಉತ್ಪನ್ನಗಳ ಮೇಲೆ ಪ್ರತೀಕಾರಾತ್ಮಕ ಸುಂಕ ವಿಧಿಸುವುದಾಗಿ ಹೇಳಿತು.

ಅಮೆರಿಕವು ಪರಸ್ಪರ ಸುಂಕದ ಪಟ್ಟಿಯನ್ನು ಬಿಡುಗಡೆ ಮಾಡಿ ಸುಂಕ ವಿಧಿಸುವ ಬಗ್ಗೆ ಘೋಷಿಸಿತು. ಭಾರತದ ಆಮದಿನ ಮೇಲೆ ಗರಿಷ್ಠ ಶೇಕಡ 27, ಚೀನಾದ ಮೇಲೆ ಶೇಕಡ 34 – ಹೀಗೆ ಸುಂಕ ವಿಧಿಸಿದಾಗ ಸುಮಾರು 70 ದೇಶಗಳು ಸಂಧಾನಕ್ಕೆ ಸಿದ್ಧವಾದವು.

ಈ ಎಲ್ಲ ಬೆಳವಣಿಗೆಗಳ ನಡುವೆ ಚೀನಾ ದೇಶವು ಅಮೆರಿಕಾದ 27 ಕಂಪನಿಗಳಿಗೆ ರಫ್ತು ನಿಯಂತ್ರಣ ಹೇರಿತು. ಚೀನಾ 84% ಹೆಚ್ಚಿಸಿದಾಗ ಅದಕ್ಕೆ ಪ್ರತಿಕಾರವಾಗಿ ಅಮೇರಿಕಾ ಚೀನಾದ ಮೇಲೆ ಆಮದು ಶುಲ್ಕ 145% ಹೆಚ್ಚಿಸಿತು. ಸುಮಾರು 50 ಬೋಯಿಂಗ್ ವಿಮಾನ ಖರೀದಿ ಒಪ್ಪಂದ ರದ್ದುಮಾಡಿದ ಚೀನಾ ಆಗಲೇ ಬಂದಿದ್ದ ಮೂರು ವಿಮಾನಗಳನ್ನು ವಾಪಸ್ ಕಳಿಸಿತು.

ಅಮೆರಿಕವು ವಾಹನದ ಬಿಡಿ ಭಾಗಗಳ ಮೇಲೆ ಶೇಕಡ 25ರಷ್ಟು ಆಮದು ಶುಲ್ಕ ವಿಧಿಸಿದ್ದರಿಂದ ಭಾರತದ ವಾಹನಗಳ ಬಿಡಿಭಾಗಗಳ ಉತ್ಪಾದಕರಿಗೆ ಪೆಟ್ಟುಬಿತ್ತು.

ಆಮದು ಸುಂಕ ಹೆಚ್ಚಿಸಿರುವುದರಿಂದ ಸ್ಥಳೀಯ ಸರಕಿಗೆ ಹೆಚ್ಚಿನ ಬೇಡಿಕೆ ಬಂದು ಸ್ಥಳೀಯ ಆರ್ಥಿಕತೆಯ ಬೆಳವಣಿಗೆ ಹೆಚ್ಚುವುದರೊಂದಿಗೆ ಉದ್ಯೋಗ ಅವಕಾಶವೂ ಹೆಚ್ಚಿ ವರಮಾನ ಹೆಚ್ಚುವುದು. ಹೆಚ್ಚಿನ ಬೇಡಿಕೆಯೊಂದಿಗೆ ಆರ್ಥಿಕ ಬೆಳವಣಿಗೆಯ ಚಕ್ರ ಸುಲಲಿತವಾಗುವುದು ಎಂದು ಅಮೆರಿಕ ಭಾವಿಸಿತು. ಅಮೆರಿಕವು ಸಾಮಾಜಿಕ ಸುಭದ್ರ ಸೌಲಭ್ಯಗಳಿಗೆ ಬಹಳ ಖರ್ಚು ಮಾಡುತ್ತದೆ.

ಅಮೆರಿಕದ ಈ ನಿಲುವು ಜಾಗತಿಕ ಮಾರುಕಟ್ಟೆಯಲ್ಲಿ ತಲ್ಲಣ ಉಂಟುಮಾಡಿತು. ಎಲ್ಲೆಡೆ ಷೇರು ಮಾರುಕಟ್ಟೆಯಲ್ಲಿ ಅಪಾರ ಕುಸಿತ ಕಂಡುಬಂದಿತು. ಭಾರತದಲ್ಲಿ ಷೇರುಮಾರುಕಟ್ಟೆ ಹಲವು ಲಕ್ಷ ಕೋಟಿ ರೂ.ಗಳಷ್ಟು ಕುಸಿಯಿತು. ಶೇರು ಮಾರುಕಟ್ಟೆಯು ಚಂಚಲತೆಯನ್ನು, ಅನಿಶ್ಚಿತತೆಯನ್ನು, ಸಂಕೀರ್ಣತೆಯನ್ನು ಒಪ್ಪಿಕೊಳ್ಳುವುದಿಲ್ಲ. ವಿನಿಯೋಜಕರು ಚಿನ್ನ ಮೊದಲಾದ ಸುರಕ್ಷಿತ ಆಸ್ತಿಗಳಲ್ಲಿ ಹಣ ತೊಡಗಿಸುತ್ತಾರೆ. ಇದರಿಂದ ಚಿನ್ನದ ಬೆಲೆ ಏರಿತು.

ಅಮೆರಿಕವು ಸುಂಕದ ಜಾರಿಗೆ 90 ದಿನ ತಡೆ ಕೊಟ್ಟಿತು. ಇದಕ್ಕೆ ಕಾರಣ ಷೇರು ಮಾರುಕಟ್ಟೆ ಕುಸಿತವಲ್ಲ. ಬದಲಾಗಿ ಕೇಂದ್ರವು ಬ್ಯಾಂಕ್ ಬಡ್ಡಿ ದರ ಏರಿಸಿದ್ದರಿಂದ ಅಮೆರಿಕನ್ ಸಾಲಪತ್ರಗಳ ಬೆಲೆ ಕುಸಿತವೇ ಕಾರಣ ಎನ್ನಲಾಗಿದೆ. ನಿಯೋಜಕರು ದೊಡ್ಡ ಪ್ರಮಾಣದಲ್ಲಿ  ಬಾಂಡುಗಳನ್ನು ಮಾರಾಟ ಮಾಡಲು ಯತ್ನಿಸಿದರು. ಇದರಿಂದ ಅಯವ್ಯಯ ವ್ಯತ್ಯಾಸ ಆಗುವ ಕಾರಣಕ್ಕೆ ತಡೆ ತಂದರು ಎನ್ನಲಾಗಿದೆ.

ಅಂತಾರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಜಾಗತಿಕ ಆರ್ಥಿಕ ಬೆಳವಣಿಗೆಯ ಮುನ್ನೋಟ ನೀಡುತ್ತದೆ. ಅದು ದೀರ್ಘಾವಧಿ ಪರಿಣಾಮವನ್ನು ಊಹಿಸಿ 2025ರಲ್ಲಿ ಅಂತಾರಾಷ್ಟ್ರೀಯ ವ್ಯಾಪಾರ ಬೆಳವಣಿಗೆ ಕುಸಿತವಾಗುವುದು, ಜಾಗತಿಕ ಬೆಳವಣಿಗೆ ದರದಲ್ಲಿ ಕಡಿತವಾಗುವುದು ಎಂದಿದೆ. ದೇಶದ ಉತ್ಪಾದನೆ ಮತ್ತು ಉದ್ಯೋಗದ ಮೇಲೆ ಆಮದು ವ್ಯವಹಾರವು ಪರಿಣಾಮ ಬೀರುವುದರಿಂದ ಆಮದಿಗೆ ಸಂಬಂಧಿಸಿದಂತೆ ಬಹಳ ಸಂಕೀರ್ಣ ನಿಯಮಗಳು ಇವೆ.

ವಿಶ್ವ ಸುಂಕ ಸಮರವನ್ನು ಮುಖ್ಯವಾಗಿ ಎರಡು ಬಲಿಷ್ಠ ರಾಷ್ಟ್ರಗಳಾದ ಅಮೇರಿಕಾ ಮತ್ತು ಚೀನಾ ನಡುವಿನ ಸಮರ ಎನ್ನಬಹುದು. ಎರಡು ಕೋಣಗಳ ನಡುವಿನ ಹೊಡೆದಾಟದಲ್ಲಿ ಅಲ್ಲಿರುವ ಸಸ್ಯ, ಗಿಡಮರಗಳಿಗೆ ತೊಂದರೆ ಆಗುವಂತೆ ಅಮೇರಿಕಾ ಮತ್ತು ಚೀನಾ ಈ ಎರಡು ದೈತ್ಯ ರಾಷ್ಟ್ರಗಳ ನಡುವಿನ ಸಮರದಲ್ಲಿ ಇತರ ರಾಷ್ಟ್ರಗಳ ಅರ್ಥ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಆಗುವುದು ಖಂಡಿತ.

ಆದ್ದರಿಂದ ಎಲ್ಲರೂ ನಮ್ಮವರೇ, ವಿಶ್ವವೇ ನಮ್ಮ ಕುಟುಂಬ. ವಸುದೈವ ಕುಟುಂಬಕಂ ಎಂದು ಅಮೆರಿಕ ಪರಿಭಾವಿಸುವುದು ಎಂದು ಆಶಿಸೋಣ ಎಂದು ಹೇಳಿ ಶ್ರೀ ಟಿ.ಕೆ ರಂಗನಾಥ್ ರವರು ತಮ್ಮ ಉಪನ್ಯಾಸವನ್ನು ಮುಕ್ತಾಯಗೊಳಿಸಿದರು.

ಕೊನೆಯಲ್ಲಿ ಶ್ರೀಮತಿ ರೇಣುಕಾ ದೇಸಾಯಿ ಯವರು ವಂದನಾರ್ಪಣೆ ಸಲ್ಲಿಸಿದರು.

(ಶ್ರೀ ರಂಗನಾಥ್ ಅವರ ಪೂರ್ಣ ಉಪನ್ಯಾಸವನ್ನು ಸಾಹಿತ್ಯ ದಾಸೋಹ ಯುಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು)

***

# ಕವಿಮನ

## ಗೀತೋಪದೇಶಕರು

ಇವರೆಮ್ಮ ಗೀತೋಪದೇಶಕರು
ನಮ್ಮಲ್ಲಿ ಚಿಂತನೆ ಆತ್ಮಾವಲೋಕನೆಯ
ಭಾವ ಎಬ್ಬಿಸುವವರು.

ಆಸೆ ಆಕಾಂಕ್ಷೆಗಳ ತಡೆದಿಕ್ಕಿ
ನಿಸ್ವಾರ್ಥ ಸೇವೆಯ ಭಾವವ
ಮನದಿ ತುಂಬುವವರು.

ಹನಿ ಹನಿ ಜೇನುಂಡು ದೂರಾಗಿ
ತಮ್ಮತನದಲಿ ಸುಖಿಸಿ ಮನಕೆ
ನಿಸ್ಪೃಹತೆಯ ಪಾಠ ಕಲಿಸುವವರು.

ನಾನೊಬ್ಬ ಸತ್ಯ ಬೇರೆಲ್ಲ ಮಿಥ್ಯ
ಕಳೆದ ದಶಕಗಳೆಲ್ಲ ಬರಿ ಮಾಯೆ
ಏನು ಮಾಡಿದಿರಿ ಎನಗೆ ಸ್ವಯಂಭೂ ನಾನು.

ತಂತಾನೆ ಬೆಳೆದ ಪೈರುಗಳ ಸಾಲು
ಜೀವನ ಬರಿ ವಿಮರ್ಶೆಗಳ ಸೆಳವು
ಬರಿ ಬೊಂಬೆಯಾಟದ  ಬಾಳು.

ಒಡಲಲ್ಲಿ ಹುಟ್ಟಿದರೇನು, ಒಡ
ಹುಟ್ಟಿದರೇನು? ಆಸೆ ಆಕಾಂಕ್ಷೆಗಳ
ದೂರಾಗಿಸಿ, ಆತ್ಮತೃಪ್ತಿ ಪಡೆಯಿರಿ.

ನೂರಾರು ತತ್ವಗಳ ಕಲಿಸಿ ಬಾಳ
ಬೆಳಗಿಸುವವರಿವರು ಇವರೆಮ್ಮ
ಗೀತೋಪದೇಶಕರು

– ಮಾಲತಿ ಶ್ರೀನಿವಾಸನ್
16.04.2025

## ನೀನಿಲ್ಲದಿರೆ

ನಾನು ನಾನಂತ ಬಂತೇಕಿಲ್ಲಿ
ನೀನಿಲ್ಲದಿರೆ ನಾನೆತ್ತ ನಾನೆಲ್ಲಿ
ಇರುವೆ ನಾ ಅಹಮಿನ ಪಾಶದಲ್ಲಿ
ಬಿಡುಗಡೆ ಬರುವದೇ? ನಾನರಿಯೆನಲ್ಲ

ದಿನದಿನದಿ ರವಿ ತಾ ಬೆಳಕು ಹಾಸುತಲಿ
ಸುತ್ತುವನು ಜಗವನು ಸದ್ದುಮಾಡದೆಯೆ
ಸುತ್ತುವೆನು ನಾನೆರಡೇ ಬೀದಿಯಲಿ
ಸಾರುವೆನು ಡಿಂಡಿಮವ ಬಾರಿಸುತಲಿ

ನಿನ್ನ ಕಣ್ಣಲಿಂದ ನನ್ನ ಕಾಣದಿರೆ
ಸಿಂಗಾರವೇಕೆನಗೆ, ನನ್ನ ರೂಪವೆಲ್ಲಿ
ಬೆಡಗಿನ ಬಟ್ಟೆ ಧರಿಸುಗಳು ಬೇಕೆ?
ಬಂಗಾರವೇಕೆನಗೆ ಅಲಂಕಾರವೇಕೆ?

ಕಿವಿಗಳಿಂ ನೀ ನನ್ನ ಕೇಳದಿರಲು
ನಾ ಹಾಡಲೇಕೆ ನಾ ಮಾತಾಡಲೇಕೆ ?
ಕರಗಳಿಂ ನೀ ನನ್ನ ಮುಟ್ಟಲಾಗದಿರಲು
ನನಗೆ ಆಕಾರವೇಕೆ  ಪ್ರಕಾರವೇಕೆ ?

ನಾನು ನಾನೆಂದು ಕೂಗುತಿರಲು
ದಿಟದ ದನಿಯು ಕೇಳದಿಹುದು
ಅಹಂಕಾರದ ಆಲಯದೊಳಿರಲು
ಸಜ್ಜನಿಕೆಯು ಸತ್ತು ಹೋಗಿದೆಯೆ?

ಜಗದಲೀ ನೀನಿಲ್ಲದಿರಲು ನಾ ಕಾಣದಿರಲು
ಅಂಬರದ ಕೆಳಗೆ ನೆರಳೂ ಮಾಯವಾದಂತೆ
ಪ್ರತಿಧ್ವನಿಯು ಮೂಲವನು ಹುಡುಕುವಂತೆ
ನಿಶೆಯಂಧಕಾರದಲಿ ನೀರವದಿ ತೇಲುವಂತೆ

ನಾನು ನನ್ನದೆಂಬ ಭಾವನೆಯ ಬಿಟ್ಟುಬಿಡು
ಕಟ್ಟಿಹಾಕಿಬಿಡು ಮದವನು ಮತ್ತೆ ಬರದಂಗೆ
ನಾನೆಂಬ ಮಾತೆಲ್ಲಿ ಪರರಿಲ್ಲದಿರಲು ಜಗದಿ
ನೀ ಕಾಣದಿರಲು ಹುಡುಕಿ ಬರುವರು ಮಂದಿ

– ಮಂಜುನಾಥ್ ಎಸ್ ( ಹಿಮನಾಥ)
30.04.2025

# ಕವಿಮನ

## ಸಂತೆಯಲ್ಲಿ

ಎಂದಿನಂತೆ ಹಾಜರಾಗಿದ್ದಾನೆ

ಹೌದು, ಸಂತೆ ಸೇರುವಲ್ಲೆಲ್ಲ ಇವ
ಇರುತ್ತಾನೆ ತಪ್ಪದೇ
ಸಂತೆಯ ಉದ್ದಗಲ ನಡೆಯುತ್ತಾನೆ
ಮಾಸಿದ ಹರಿದ ಅರಿವೆ ಹರುಕು ಬುರುಕು
ಗಡ್ಡ ಮೀಸೆಗಳಲ್ಲಿ

ಎಲ್ಲಾ ಅಂಗಡಿಗಳ ಮುಂದೆ ನಿಲ್ಲುತ್ತ
ಅಲ್ಲಿನ ಸಾಮಾನುಗಳ ಎತ್ತಿ ಮುಟ್ಟಿ ನೇವರಿಸಿ
ಮೂಸಿ ನೋಡುತ್ತ

ಅದೋ ಅಲ್ಲಿ, ತರಕಾರಿ ಅಂಗಡಿಯಲ್ಲಿ
ಬೆಂಡೆ ಬದನೆ ಹಾಗಲ ಕುಂಬಳ ತೊಂಡೆ
ನುಗ್ಗೆ ಸೌತೆಕಾಯಿಗಳ ಮುಟ್ಟಿ ಮೂಸಿ
ಒಳಗನ್ನು ಅಳೆಯುವಂತೆ ಬೆರಳಿಂದ ಟಕ್ ಟಕ್ಕೆನಿಸಿ

ಕವಡೆ ಮಣಿಸರಗಳ ಅಲುಗಿಸಿ
ನೋಡಿದ್ದಾನೆ ಎತ್ತಿ ತೋಳಿಗಿಟ್ಟಿದ್ದಾನೆ
ನಾಲಗೆ ಇಲ್ಲದ ಪುಟ್ಟ ಗಂಟೆಯನ್ನು ತೂಗಿ
ತೂಗಿ ಕಿವಿಗಿಟ್ಟು ಆಲಿಸಿದ್ದಾನೆ

ಕುಂಬಾರನ ಅಂಗಡಿಯಲ್ಲಿ ಮಡಕೆಗಳ
ಮಿಡಿ ಮಿಡಿದು ಒಳಗಿಗೇ ತೆರೆದಂತೆ
ಹೂಜಿಯ ಬಾಯಿಗಿಟ್ಟು
ಕಿವಿ, ನಿಂತಿದ್ದಾನೆ ಅದೆಷ್ಟೋ ಹೊತ್ತು

ಇವನ ಸ್ಪರ್ಶಕ್ಕೆ ಕಾದವರಂತೆ ನಿಂತು
ಕುಳಿತಿವೆ ಬೊಂಬೆಗಳು ಹಲವು ಭಂಗಿಗಳಲ್ಲಿ
ಕಂಕುಳಿಗೆ ಕೈಯಿಟ್ಟು ಕಚಗುಳಿ ಇಟ್ಟನೇ
ಎಷ್ಟೊಂದು ನಗು ಅರಳಿದೆ ಅಲ್ಲಿ

ಅದೆಷ್ಟು ಅಂಗಡಿಗಳ ಹೊಕ್ಕು ಹೊರಬಿದ್ದು
ಎಲ್ಲ ಸಾಲುಗಳಲ್ಲಿ ಎಲ್ಲ ಸಂತೆಗಳಲ್ಲಿ
ಇವನದು ಇದೇ ಇದೇ ನಡೆ
ಕೇವಲ ಅಭ್ಯಾಸವೇ ಆರ್ತ ಹುಡುಕಾಟವೇ

ಯಾರೋ ಕೇಳುತ್ತಾರೆ
"ಯಂತ ಬೇಕು ಮಾರಾಯ, ನಿಂಗೆ"

ಪಿಸುಗುಡುತ್ತಾನೆ
"ಅಲ್ಲ.., ತಗೋಳೋದೇನಿಲ್ಲ...
ಯಾವ ಯಾವುದು ಇಲ್ಲದೇ
ಬದುಕಬಹುದು, ನೋಡ್ತಿದ್ದೆ"

– ಡಾ. ಗೋವಿಂದ ಹೆಗಡೆ
23.04.2025

# ಗುಂಡನ ಗರ್ವಭಂಗ

**– ಕೆ. ಆರ್. ವೆಂಕಟೇಶ್**

ಅದು ಇಸವಿ 2040. ಗುಂಡ ಅಲಿಯಾಸ್ ಗುಂಡೂರಾವ್ 15 ವರ್ಷಗಳು ಅಮೆರಿಕಾದ ಕ್ಯಾಲಿಫೋರ್ನಿಯಾದಲ್ಲಿ ಐಟಿ ಕಂಪನಿಯಲ್ಲಿ ಕೆಲಸ ಮಾಡಿದ ನಂತರ ಬೆಂಗಳೂರಿನ ಮಾನ್ಯತಾ ಟೆಕ್ಪಾರ್ಕ್‌ನಲ್ಲಿ ತನ್ನದೇ ಆದ ಒಂದು ಸ್ಟಾರ್ಟ್ ಅಪ್ ಕಂಪೆನಿ ತೆಗೆದಿದ್ದ. ಅದು ಇಪ್ಪತ್ತೈದು ಮಂದಿ ಕೆಲಸ ಮಾಡುತ್ತಿರುವ ಸ್ಟಾರ್ಟಪ್. ತನ್ನ ಹೆಂಡತಿ ಮಕ್ಕಳೊಡನೆ ಬೆಂಗಳೂರಿಗೆ ಬಂದ ಮೇಲೆ ಪ್ರೆಸ್ಟೀಜ್ ಪ್ರಾಪರ್ಟೀಸ್ನಲ್ಲಿ 3 ಕೋಟಿಯ ವಿಲ್ಲಾ ಖರೀದಿಸಿದ್ದ.

ತಾನು ಸ್ಟಾರ್ಟಪ್ ಕಂಪೆನಿಯ ಸಿಇಒ. ತನ್ನ ಘನತೆಗೆ, ಅದೂ ಅಲ್ಲದೆ ಯುಎಸ್‌ಎ ರಿಟರ್ನ್ಡ್ ಆಗಿರುವುದರಿಂದ ತನ್ನ ಹತ್ತಿರ ಒಂದು ಹೈಫೈ ಕಾರು ಇರಲೇಬೇಕು ಎಂದು ನಿರ್ಧರಿಸಿದ. ಹಳೆಯ ಕಾರನ್ನು ಅಮೆರಿಕಾದಲ್ಲಿ ಮಾರಿ ಬಂದಿದ್ದ. ಯಾವ ಕಾರು ಖರೀದಿಸುವುದು ಎಂದು ಯೋಚಿಸುತ್ತಿರುವಾಗ ಆಗತಾನೇ ಭಾರತಕ್ಕೆ ಬಂದಿದ್ದ ಇಲಾನ್ ಮಸ್ಕ್ ಅವರ ಟೆಸ್ಲಾ ಕಂಪೆನಿ ಇನ್ನು ಆರು ತಿಂಗಳಲ್ಲಿ ಮೊದಲನೆಯ ಬ್ಯಾಚ್ನಲ್ಲಿ 300 ಆಟೋಪೈಲೆಟ್ ಕಾರ್ ಅಂದರೆ ಚಾಲಕರಹಿತ ಕಾರುಗಳನ್ನು ತಯಾರಿಸಿ ಹೊರಬಿಡಲಾಗುವುದು. ಯಾರಿಗೆ ಖರೀದಿಸುವ ಆಸಕ್ತಿ ಇದೆಯೋ ಅವರು 10 ಲಕ್ಷ ಕೊಟ್ಟು ಬುಕಿಂಗ್ ಮಾಡಬೇಕು ಎಂದು ಘೋಷಿಸಿತ್ತು. ಇದಕ್ಕೆ ಬೆಂಗಳೂರಿನಲ್ಲಿರುವ ಶ್ರೀಮಂತರು ಪೈಪೋಟಿ ಮಾಡುವವರೆಂದು ತಿಳಿದು ಗುಂಡ ಹತ್ತನೆಯವನಾಗಿ ಟೆಸ್ಲಾ ಕಾರ್ ಬುಕ್ ಮಾಡಿದ. ಅವನ ಗೆಳೆಯರಿಗೆಲ್ಲಾ ಅಸೂಯೆ ಬರುವಂತೆ ಈ ವಿಷಯ ಹಂಚಿಕೊಂಡ.

ಅಂತೂ 6 ತಿಂಗಳು ಎಂದು ಘೋಷಿಸಿದ್ದರೂ 9 ತಿಂಗಳ ನಂತರ ಟೆಸ್ಲಾ ಕಾರ್ ಡೆಲಿವರಿಯಾಯಿತು. ದೇವಸ್ಥಾನದಲ್ಲಿ ಆ ಟೆಸ್ಲಾ ಕಾರಿಗೆ ಪೂಜೆಯೂ ಆಯಿತು. ಮನೆಯಲ್ಲಿ ಏನೋ ಸಂಭ್ರಮ. ತನ್ನ ಸ್ಮಾರ್ಟ್ ಫೋನ್ ಮೂಲಕ ಕಾರಿಗೆ ಕಮಾಂಡ್ ನೀಡಿ ಹಿಂದೆ ಮುಂದೆ ಎಲ್ಲಾ ಓಡಾಡಿಸಿ ಹೆಂಡತಿ ಮಕ್ಕಳೊಡನೆ ಒಂದು ಜಾಲಿ ರೈಡ್ ಕೂಡ ಆಯಿತು. ಡ್ರೈವರ್ ಸೀಟಿನಲ್ಲಿ ಕುಳಿತೂ ಕೂಡ ಮಾಮೂಲು ಪ್ರಯಾಣಿಕರಂತೆ ಸುಮ್ಮನೆ ಕುಳಿತು ಸಾಗುವುದು ಒಂದು ಹೊಸ ಅನುಭವ.

ಮುಂದಿನ ದಿನಗಳಲ್ಲಿ ಹೆಂಡತಿಗೆ ಒಬ್ಬಳೇ ಆ ಕಾರನ್ನು ಶಾಪಿಂಗ್ ತೆಗೆದುಕೊಂಡು ಹೋಗು ಎಂದಾಗ ಅವಳು ಡ್ರೈವರ್ ಇಲ್ಲದ ಕಾರಲ್ಲಿ ನಾ ಹೋಗಲಾರೆ ಎಂದು ಭಯಪಟ್ಟಿದ್ದಳು. ಹಾಗಾಗಿ ಶಾಪಿಂಗುಗಳೆಲ್ಲಾ ಶನಿವಾರ, ಭಾನುವಾರ ಗಂಡ ಗುಂಡನ ಜೊತೆಯಲ್ಲೇ.

ಹೀಗಿರುವಾಗ ಗುಂಡನ ಹಳ್ಳಿಯಾದ ತೊರಂಗಲ್ಲಿನಲ್ಲಿ ರಥೋತ್ಸವ ಎಂದು ಗುಂಡನಿಗೂ ಆಹ್ವಾನ ಬಂದಿತ್ತು. ಗುಂಡನಿಗೆ ತಾನು ಇಂದು ಎಷ್ಟು ಎತ್ತರಕ್ಕೆ ಬೆಳೆದಿದ್ದೇನೆ. ಒಂದು ಕಾಲದಲ್ಲಿ ಹಳ್ಳಿಯ ನೆರೆಹೊರೆಯವರು, ಬಂಧುಗಳು ನಾನು ಕಾಲೇಜು ಮೆಟ್ಟಿಲೂ ಹತ್ತುವುದಿಲ್ಲ ಎಂದು ಆಡಿಕೊಳ್ಳುತ್ತಿದ್ದರು. ಈಗ ಈ ಟೆಸ್ಲಾ ಅಡ್ವಾನ್ಸ್ಡ್ ಕಾರನ್ನು ಹಳ್ಳಿಗೆ ತೆಗೆದುಕೊಂಡು ಹೋಗಿ ಅವರಿಗೆಲ್ಲಾ ಮೈಚಳಿ ಬಿಡಿಸುತ್ತೇನೆ ಎಂದುಕೊಂಡು ರಥೋತ್ಸವದ ಹಿಂದಿನ ದಿವಸವೇ ಬೆಳಿಗ್ಗೆ ಟೆಸ್ಲಾ ಕಾರಿನಲ್ಲಿ ಹೆಂಡತಿ ಮಕ್ಕಳೊಡನೆ ಹಳ್ಳಿಗೆ ಹೊರಟ.

ಕಾರಿನಲ್ಲಿ ಹೋಗುವಾಗ ಅವನಿಗೆ ತನ್ನ ಬಾಲ್ಯ ಹಾಗೂ ಹದಿಹರೆಯದ ನೆನಪಾಯಿತು. ಹಳ್ಳಿಯವರು ತಾನು ತುಂಟ, ತರಲೆ, ಓದಿನಲ್ಲಿ ಹಿಂದೆ, ಕೀಟಲೆಯಲ್ಲಿ ಮುಂದೆ, ಎಸ್ಸೆಸ್ಸೆಲ್ಸಿ ನಂತರ ಓದಿಗೆ ತಿಲಾಂಜಲಿ ಇಡುತ್ತಾನೆ, ಕಾಲೇಜು ಮೆಟ್ಟಿಲು ಹತ್ತುವುದಿಲ್ಲ ಎಂದೆಲ್ಲಾ ಆಡಿಕೊಳ್ಳುತ್ತಿದ್ದವರಿಗೆ ನಾನು ಇಂದು ಯಾವ ಮಟ್ಟಕ್ಕೆ ಬೆಳೆದಿದ್ದೇನೆ ಎಂಬ ಅಂದಾಜೂ ಇರಲಾರದು. ಇರಲಿ. ಹೇಗೂ ಹಳ್ಳಿಗೇ ಹೋಗುತ್ತಿದ್ದೇನಲ್ಲಾ..ಅವರೇ ಕಣ್ಣಾರೆ ನನ್ನ ಪ್ರಗತಿ ನೋಡಲಿ ಎಂದು ವ್ಯಂಗ್ಯ ನಗೆ ನಕ್ಕ.

ಅವನ ಟೆಸ್ಲಾ ಕಾರು ಅದರಪಾಡಿಗೆ ಅದು ಮ್ಯಾಪ್ ಸೂಚಿಸಿದಂತೆ ಮುಂದೆ ಸಾಗುತ್ತಿತ್ತು. ಮೊದಲು ತನ್ನ ಊರಿನ ಹಿರಿಯ ಹಾಗೂ ಶ್ರೀಮಂತ ಚಂದ್ರೇಗೌಡರ ಮನೆಗೆ ಅವರ ಆಹ್ವಾನದಂತೆ ಹೋಗಿ ಅಲ್ಲಿ ಇಳಿದು ನಂತರ ತನ್ನ ಪೂರ್ವಿಕರ ಮನೆಗೆ ಹೋಗುವ ನಿರ್ಧಾರ ಮಾಡಿದ್ದ. ಆದರೆ ತನ್ನ ಟೆಸ್ಲಾ ಕಾರಿನ ಬಗ್ಗೆ ಸರ್ಪ್ರೈಸ್ ಕೊಡಬೇಕೆಂದು ಒಂದು ಕಿಲೋ ಮೀಟರ್ ಹಿಂದೆಯೇ ಇಳಿದು ಕಾರನ್ನು ಅಲ್ಲೇ ಒಂದು ಕಡೆ ಮರೆಯಾಗಿ ಪಾರ್ಕ್ ಮಾಡಿ ತನ್ನ ಸ್ಮಾರ್ಟ್ ಫೋನ್ ಕೈಯಲ್ಲಿ ಹಿಡಿದು ಹೆಂಡತಿ ಮಕ್ಕಳೊಡನೆ ಚಂದ್ರೇಗೌಡರ ಮನೆ ತಲುಪಿದ.

ಚಂದ್ರೇಗೌಡರು ಇವನನ್ನು ಹಾಗೂ ಇವನ ಕುಟುಂಬವನ್ನು ಪ್ರೀತಿಯಿಂದ ಸ್ವಾಗತಿಸಿ, "ಏನಯ್ಯಾ ಗುಂಡ ಹೇಗಿದ್ದೀಯಾ?" ಎಂದು ವಿಚಾರಿಸಿದರು. ನಂತರ ಆಚೆ ಯಾವ ಕಾರೂ ಇರದಿರುವುದನ್ನು ನೋಡಿ, "ಏನಯ್ಯಾ ಗುಂಡ, ಹೇಗೆ ಬಂದ್ರಿ? ಆಚೆ ಯಾವ ಕಾರೂ ಕಾಣಿಸ್ತಿಲ್ಲ. ನಮ್ ಪಾಂಡು ಹೇಳ್ತಿದ್ದ ಬೆಂಗಳೂರಿನಲ್ಲಿ ನಿಂದೇ ಸ್ವಂತ ಕಂಪನಿ ತೆಗೆದಿದ್ದೀಯಾ ಅಂತ. ಹಾಗಿದ್ದ ಮೇಲೆ ಕಾರು ಇದ್ದೇ ಇರುತ್ತೆ ಅಲ್ವಾ" ಎಂದು ಕೇಳಿದರು.

ಅದಕ್ಕೆ ಗುಂಡ ನಗೆ ಬೀರುತ್ತಾ, "ಇರಿ ಗೌಡ್ರೆ. ನಿಮಗೆಲ್ಲಾ ಒಂದು ಆಶ್ಚರ್ಯ ತೋರಿಸ್ತೀನಿ. ಅಕ್ಕಪಕ್ಕದವರನ್ನೆಲ್ಲಾ ಕರೆಯಿರಿ" ಎಂದು ತನ್ನ ಸ್ಮಾರ್ಟ್ ಫೋನ್ ಮೂಲಕ ಏನೋ ಸೂಚನೆ ನೀಡಿ ಬಟನ್ ಒತ್ತಿದ. ಇವನು ಏನು ಮಾಡುತ್ತಿದ್ದಾನೆ ಎಂದು ತಲೆಬುಡ ಅರ್ಥವಾಗದೆ ಚಂದ್ರೇಗೌಡರು ಒಂದು 15-20 ಮಂದಿಯನ್ನು ಕಲೆಹಾಕಿದರು.

ಅತ್ತ ಒಂದು ಕಿಲೋಮೀಟರ್ ಹಿಂದೆ ಪಾರ್ಕ್ ಮಾಡಿದ್ದ ಗುಂಡನ ಟೆಸ್ಲಾ ಕಾರ್ ಸ್ಮಾರ್ಟ್ ಫೋನ್ ಸೂಚನೆಯಂತೆ ನಿಧಾನವಾಗಿ ಗಂಟೆಗೆ ಹತ್ತು ಕಿಲೋಮೀಟರ್ ವೇಗದಂತೆ ಬರತೊಡಗಿತು. ಅದು ಚಲಿಸುತ್ತಿದ್ದ ಆಕಡೆ ಈಕಡೆ ಹೊಲ. ಅಲ್ಲೇ ಆಡುತ್ತಿದ್ದ ಕೆಲ ಹುಡುಗರು ಈ ಅತ್ಯಾಧುನಿಕ ಕಾರನ್ನು ನೋಡಲು ಹತ್ತಿರ ಹೋದರೆ ಏನಾಶ್ಚರ್ಯ! ಒಳಗೆ ಯಾರೂ ಚಾಲಕರೇ ಇಲ್ಲ. ಹುಡುಗರಿಗೆ ಆಶ್ಚರ್ಯವಾಗಿ ಅಲ್ಲೇ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಅವರವರ ಅಪ್ಪ ಅಮ್ಮಂದಿರನ್ನು ಕೂಗಲು ಕೂಡಲೇ ಅವರೆಲ್ಲಾ ಓಡಿಬಂದರು.

ಇದೇನಿದು ಪವಾಡ. ಡ್ರೈವರೇ ಇಲ್ಲದೆ ಕಾರು ಮುಂದೆ ಚಲಿಸುತ್ತಿದೆ ಎಂದು ಆಶ್ಚರ್ಯಪಟ್ಟರು. ಕೆಲವರು ಕಾರು ಚಲಿಸುತ್ತಿದ್ದ ಮಾರ್ಗದಲ್ಲಿ ಅಡ್ಡ ಬಂದಾಗ ಹಾರ್ನ್ ಕೂಡ ಹೊಡೆಯಿತು. ಅಲ್ಲಿದ್ದವರೆಲ್ಲಾ ಈ ಕಾರಿಗೆ ಯಾವುದೋ ದೆವ್ವ ಹಿಡಿದೈತೆ ಅನ್ಸುತ್ತೆ. ಇಲ್ಲಾ ಅಂದ್ರೆ ಅದಾಗದೇ ಹೇಗೆ ಓಡುತ್ತೆ, ಅದಾಗದೇ ಹೇಗೆ ಹಾರ್ನ್ ಮಾಡುತ್ತೆ ಎಂದು ಗಾಬರಿಯಿಂದ ಹೇಳಿಕೊಂಡರು.

ಆ ಕಾರು ಮುಂದೆ ಹೋಗದಂತೆ ಸ್ವಲ್ಪ ದೂರದಲ್ಲಿ ಕಲ್ಲುಗಳನ್ನು ಅದರ ಮುಂದೆ ಅಡ್ಡ ಹಾಕಿದರು. ಕಾರಿನ ಸೈರನ್ ಹೊಡೆದುಕೊಳ್ಳಲಾರಂಭಿಸಿತು.

ತಕ್ಷಣ ಅಲ್ಲಿದ್ದ ನಿಂಗಮ್ಮ ಎಂಬ ಹೆಂಗಸು, "ಬಚ್ಚೇಗೌಡರನ್ನು ಕರೆದುಕೊಂಡು ಬರೋಣ.. ಅವರು ಈ ಕಾರಿಗೆ ಹಿಡಿದಿರೋ ದೆವ್ವಕ್ಕೆ ಚಳಿ ಬಿಡಸ್ತಾರೆ" ಎಂದಳು. ಅಲ್ಲಿದ್ದವರೆಲ್ಲಾ ಹೌದು ಹೌದು ಎಂದು ತಲೆಯಾಡಿಸಿದರು. ಈ ಬಚ್ಚೇಗೌಡ ಆ ಊರಲ್ಲಿ ಯಾರಾದರೂ ವಿಚಿತ್ರವಾಗಿ ವರ್ತಿಸಿದರೆ, ಅವರಿಗೆ ದೆವ್ವದ ಗಾಳಿ ಅಂಟಿದೆ ಎಂದು ಹೇಳಿ ತಾನು ವಂಶ ಪರಂಪರೆಯಾಗಿ ಕಲಿತ ದೆವ್ವ ಬಿಡಿಸುವ ಕಸುಬಿನಲ್ಲಿ, ಮಂತ್ರ ಹೇಳಿ, ವಿಭೂತಿ ಸಿಂಪಡಿಸಿ ಬೇವಿನ ಸೊಪ್ಪಿನಿಂದ ಥಳಿಸುತ್ತಿದ್ದ. ಇದರಿಂದಾಗಿ ಬಚ್ಚೇಗೌಡ, ದೆವ್ವದ ಚೆಚ್ಚೇಗೌಡ ಎಂದೂ ಪ್ರಸಿದ್ಧಿಯಾಗಿದ್ದ.

ಅಲ್ಲೇ ಹತ್ತಿರದಲ್ಲಿದ್ದ ಬಚ್ಚೇಗೌಡರ ಮನೆಗೆ ಹೋಗಿ ಕಾರಿನ ವಿಷಯ ತಿಳಿಸಿದಾಗ ಅವನು ಒಂದು ನಾಲ್ಕು ಕಂತೆ ಬೇವಿನ ಸೊಪ್ಪಿನ ಜೊತೆ ಕಾರಿನ ಬಳಿ ಬಂದು ಏನೋನೋ ಮಂತ್ರಗಳನ್ನು ಹೇಳುತ್ತಾ ಬೇವಿನ ಸೊಪ್ಪಿನಿಂದ ಕಾರಿಗೆ ಹಲವು ಬಾರಿ ಥಳಿಸಿದ. ಆದರೂ ಹಾರ್ನ್ ಹೊಡೆದುಕೊಳ್ಳುತ್ತಲೇ ಇತ್ತು.
ಇತ್ತ ಗುಂಡ ಚಂದ್ರೇಗೌಡರ ಮನೆಯ ಬಳಿ ಕಾಯುತ್ತಾ ಇಪ್ಪತ್ತು ನಿಮಿಷಗಳಾಗಿತ್ತು. ಕಾರು ಹೊರಟಿದ್ದು ಮ್ಯಾಪ್ ನಲ್ಲಿ ತೋರಿಸಿದ್ದು, ಸ್ವಲ್ಪ ದೂರ ಚಲಿಸಿದ ನಂತರ ಏಕೆ ಒಂದೇ ಕಡೆ ನಿಂತಿದೆ. ಒಂದು ಕಿಲೋಮೀಟರ್ ಬರಲು ಇಷ್ಟು ಹೊತ್ತು ಬೇಡವಲ್ಲ ಎಂದು ಯೋಚಿಸುತ್ತಿರುವಾಗಲೇ ಒಬ್ಬ ಹುಡುಗ ಓಡುತ್ತಾ ಬಂದು "ಅಲ್ಲಿ ಒಂದು ದೊಡ್ಡ ಕಾರು ಹೊಲದ ರಸ್ತೇಲಿ ಯಾರೂ ಡ್ರೈವರ್ ಇಲ್ದೆ ಅದಾಗದೇ ಮುಂದೆ ಹೋಗ್ತಾ, ಹಾರ್ನ್ ಕೂಡ ಮಾಡ್ತಿದೆ. ಈಗ ಅದರ ಮುಂದೆ ಕಲ್ಲು ಹಾಕಿ ನಿಲ್ಲಿಸಿ ಬಚ್ಚೇಗೌಡ್ರು ದೆವ್ವ ಹಿಡಿದಿದೆಯೆಂದು ಅದಕ್ಕೆ ಶಾಸ್ತಿ ಮಾಡ್ತೋವ್ರೆ. ಆದ್ರೂ ಹಾರ್ನ್ ಹೊಡ್ಕೋತಿದೆ" ಎಂದನು.

ಇದನ್ನು ಕೇಳಿದ ಗುಂಡನ ಎದೆ ಧಸಕ್ ಎಂದಿತು. ಆತಂಕದಿಂದ ಆ ಹುಡುಗನನ್ನು ಕರೆದುಕೊಂಡು ಕಾರು ಇರುವ ಬಳಿ ಹೊರಟ. ಗುಂಡನ ಸುತ್ತಮುತ್ತಲಿದ್ದ ಜನರೂ ಅವನ ಹಿಂದೆ ಹೊರಟರು.

ಇನ್ನೇನು ಒಂದು 50 ಮೀಟರ್ ದೂರದಲ್ಲಿ ಅವನ ಕಾರು ನಿಂತಿರಲು, ಕಾರಿನ ಮುಂದಿದ್ದ ಹುಡುಗರು ಒಂದೆರಡು ಕಲ್ಲು ಹಿಡಿದು ಬಚ್ಚೇಗೌಡನ ಆದೇಶಕ್ಕಾಗಿ ಕಾಯುತ್ತಿದ್ದರು. ಅಷ್ಟರೊಳಗೆ ಗುಂಡ, "ಲೋ.. ಕಲ್ಲು ಹೊಡೀಬೇಡ್ರೋ. ಅದು ಆಟೋಮೇಟೆಡ್ ಕಾರು ಕಣ್ರೋ. ಅಮೆರಿಕಾ ಕಂಪೆನೀದು. ಅದಕ್ಕೆ ಡ್ರೈವರ್ ಇರಲ್ಲ" ಎಂದು ಕಿರುಚುತ್ತಾ ಓಡಲಾರಂಭಿಸಿದ. ಅಷ್ಟರೊಳಗೆ ಒಂದು ಕಲ್ಲು ಕಾರಿಗೆ ಒಬ್ಬ ಎಸೆದು ಗ್ಲಾಸ್ ಅಲ್ಲೇ ನಜ್ಜುಗುಜ್ಜಾಯಿತು.

ಗುಂಡ ಬೊಂಬಡಿ ಹೊಡೆಯುತ್ತಾ ಹತ್ತಿರ ಬಂದು ಎಲ್ಲರನ್ನೂ ಬೈದು ಚದುರಿಸಿ, ಕಾರು ಪರೀಕ್ಷಿಸುತ್ತಾ "ಅಯ್ಯೋ ನನ್ನ ಕಾರು, ಅಯ್ಯೋ ನನ್ನ ಕಾರು" ಎಂದು ಜೋರಾಗಿ ಕೂಗುತ್ತಾ ಗೋಳಾಡತೊಡಗಿದ.

ಇದನ್ನು ಕೇಳಿಸಿಕೊಂಡ ಗುಂಡನ ಸ್ನೇಹಿತ ಸೀನ ಅಲಿಯಾಸ್ ಶ್ರೀನಿವಾಸ, ಬಚ್ಚಲುಮನೆಯಿಂದ ರೂಮಿಗೆ ಬಂದು, "ಲೋ ಗುಂಡ, ಯಾಕೋ ಹೀಗೆ ಕೂಗ್ತಾ ಇದ್ಯಾ? ಏನಾಯ್ತು?" ಎಂದು ಕೇಳಿದ. ಅದಕ್ಕೆ ಗುಂಡ "ಅಯ್ಯೋ ನನ್ನ ಕಾರು" ಎಂದು ಮತ್ತೆ ಕೂಗಿದ. ಅದಕ್ಕೆ ಸೀನ, "ನೆಟ್ಟಗೆ ನಮಗೆ ಬೈಕ್ ತೊಗೋಳೋ ಯೋಗ್ಯತೇನೂ ಇಲ್ಲ. ಇನ್ನು ಕಾರು ಎಲ್ಲಿಂದ ಬರಬೇಕು. ಏನು? ಕನವರಿಸ್ತಿದ್ಯಾ? ಏಳು ಮೇಲೆ" ಎಂದು ಜೋರಾಗಿ ಗುಂಡನನ್ನು ಅಲುಗಾಡಿಸಿದ.

ಗುಂಡ ಕಣ್ಣುಬಿಟ್ಟಾಗ ಎಲ್ಲಾ ಅಯೋಮಯವಾಗಿ ಕಂಡಿತು. "ನಾನೆಲ್ಲಿದ್ದೇನೆ" ಎಂದು ಕೇಳಿದಾಗ ಸೀನ, "ಯಶವಂತಪುರದ ನಮ್ಮ ಬಾಡಿಗೆ ಮನೇಲಿ ಇದ್ದೀಯ. ಏಳು ಹೊತ್ತಾಯ್ತು. ಫ್ಯಾಕ್ಟರಿಗೆ ಹೋಗ್ಬೇಕು" ಎಂದ. ಗುಂಡನಿಗೆ ವಾಸ್ತವಕ್ಕೆ ಬರಲು ನಿಮಿಷಗಳೇ ಬೇಕಾಯಿತು. ಗುಂಡ ತಾನು ಕನಸಿನಲ್ಲಿ ಕಂಡದ್ದೆಲ್ಲಾ ಸೀನನಿಗೆ ಹೇಳಿದಾಗ ಸೀನ ಜೋರಾಗಿ ನಕ್ಕ.

ಅಂತೂ ಇದು ಕನಸಾದರೂ ಗುಂಡನಿಗೆ ತನ್ನ ಹೈಫೈ ಆಟೋಮೇಟೆಡ್ ಕಾರಿನ ಬಗ್ಗೆ ತನ್ನ ಹಳ್ಳಿಯವರ ಮುಂದೆ ಕೊಚ್ಚಿಕೊಳ್ಳುವ ಮುನ್ನವೇ ಗರ್ವಭಂಗವಾಗಿತ್ತು.

***

ಅನುಭವ ಕಥನ

# ವಕ್ರದಂತಂ ಮಂದಸ್ಮಿತಂ

– ಸ್ನೇಹ ಶಶಿಧರ

"ಸ್ವಲ್ಪ ಹಲ್ಲು ಬಿಟ್ಟು ನಕ್ಕುಬಿಡಿ ಮೇಡಂ. ಚೆನ್ನಾಗಿ ಕಾಣ್ತೀರಿ!"

ಫೋಟೋ ತೆಗೆಯುವವರ ಮಾತಿಗೆ ಸಂಕೋಚದಿಂದಲೇ, ಬಣ್ಣ ಹಚ್ಚಿದ್ದ ತುಟಿಗಳ ನಡುವಿನಿಂದ ಹಲ್ಲುಗಳು ಇಣುಕಿದವು. ನನ್ನ ಹಲ್ಲುಗಳು... ತೀರಾ ತುರಿಯೋ ಮಣಿತರವೋ ಅಥವಾ ದಾಳಿಂಬೆ ಹಣ್ಣಿನ ಬೀಜಗಳನ್ನು ಜೋಡಿಸಿದಂತೆಯೋ ಖಂಡಿತ ಇರಲಿಲ್ಲ. ನನಗಿಷ್ಟವಾದ ಸೀಬೆಹಣ್ಣು ಕಚ್ಚಿದಾಗಿನ ದಂತ ಪಂಕ್ತಿಯ ವಕ್ರ ರೇಖೆ ಅದರ ಮೇಲೆ ಮೂಡುತ್ತಿತ್ತು!

ನನಗೆ ಚಿಕ್ಕ ವಯಸ್ಸಿನಲ್ಲಿ ಹಲ್ಲುಗಳು ಬಹಳ ಮುದ್ದಾಗಿದ್ದವು. ಬಾಲ್ಯದಲ್ಲಿ ಒಂದೊಂದೇ ಹಲ್ಲು ಬೀಳುವಾಗ ಸಮಸ್ಯೆಯ ಮೇಲೆ ಸಮಸ್ಯೆ ಪ್ರಾರಂಭವಾಯಿತು. ಹಾಲು ಹಲ್ಲು ಬೀಳುವುದಕ್ಕೂ ಮುನ್ನವೇ ಅದರ ಹಿಂದೆ ಅಥವಾ ಮುಂದೆ ಹೊಸ ಹಲ್ಲುಗಳು ಇಣುಕಲಾರಂಭಿಸಿದವು. ಹಾಲು ಹಲ್ಲುಗಳು ಇನ್ನು ಗಟ್ಟಿಯಾಗೇ ಇದ್ದವು. ವಿಧಿ ಇಲ್ಲದೇ ದಂತ ಚಿಕಿತ್ಸಕರ ಬಳಿ ಹೋಗಿ ಇನ್ನೂ ಗಟ್ಟಿಯಾಗೇ ಇದ್ದ ಹಾಲು ಹಲ್ಲುಗಳನ್ನು ಕೀಳಿಸಬೇಕಾಯಿತು.

ನನಗೆ ನೆನಪಿರುವ ಹಾಗೆ ಎಲ್ಲ ಹೊಸ ಹಲ್ಲುಗಳು ಬರುವಾಗ ಹೀಗೆ ಒಂದಲ್ಲ ಒಂದು ರೀತಿ ತೊಂದರೆಕೊಟ್ಟವು. ಅದೇಕೆ ಹೀಗೆ ಆದವೋ ಗೊತ್ತಿಲ್ಲ. ನಮ್ಮ ತಂದೆಯ ಪ್ರಕಾರ ನಾವು ಹಣ್ಣುಗಳನ್ನು ಕಚ್ಚಿ ತಿಂದಿಲ್ಲ, ಹೆಚ್ಚಿ ತಿಂದಿದ್ದೀವಿ, ಹಾಗಾಗಿ ಈ ಸಮಸ್ಯೆ. ನಾನು ಈ ವಾದವನ್ನು ಒಪ್ಪುತ್ತಿರಲಿಲ್ಲ. ನಾನು ಈಗಲೂ ಪುಳ್ಳಂಗಾಯಿ ಉಂಡೆಯನ್ನು ಕಚ್ಚಿ ಆಸ್ವಾದಿಸಿ ತಿನ್ನಬಲ್ಲೆ.

ಹಲ್ಲು ಪಂಕ್ತಿ ಸರಿಪಡಿಸಲು ಕ್ಲಿಪ್ ಹಾಕಿಸಿದ್ದರು. ಅದು ಹಾಕಿಕೊಂಡರೆ ಸ್ಪಷ್ಟವಾಗಿ ಮಾತಾಡುವುದಕ್ಕೆ ಆಗುತ್ತಿರಲಿಲ್ಲ. ಮೂರು ವರ್ಷದವಳಾಗಿದ್ದಾಗ ತೊದಲದಿದ್ದವಳು ಹದಿಮೂರರಲ್ಲಿ ತೊದಲುವುದೇ? ಊಟ ತಿಂಡಿಗಳು ಅಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಿದ್ದವು. ಹಾಗಾಗಿ ಸದಾಕಾಲ ಅದರ ನಿರ್ವಹಣೆ ಮಾಡುವುದು ಸವಾಲಿನ ಕೆಲಸವೇ ಆಗಿತ್ತು. ಹುಡುಗು ಬುದ್ಧಿ, ಆ ದುಬಾರಿ ಬೆಲೆಯ ಕ್ಲಿಪ್ ಗಳನ್ನು ಎರಡು ಬಾರಿ ಮುರಿದುಕೊಂಡುಬಿಟ್ಟಿದ್ದೆ. ಒಟ್ಟಾರೆಯಾಗಿ, ನಾ ಅದನ್ನು ಸರಿಯಾಗಿ ಬಳಸಿಕೊಳ್ಳಲಿಲ್ಲ.

ಅದೆಲ್ಲ ಇಪ್ಪತ್ತು ವರ್ಷದ ಹಳೆಯ ಮಾತು. ಈ ಮಧ್ಯೆ ಬುದ್ಧಿ ಬಂತು ಎಂದು ಹೇಳುವ ಹಲ್ಲುಗಳು ತಮ್ಮ ಕೆಲಸವಾಯಿತು ಎಂದು ಕೀಳಿಸಿಕೊಂಡು ಹೋದವು. ಎಷ್ಟು ಬಾರಿ ದಂತ ಚಿಕಿತ್ಸಕರ ಬಳಿ ಹೋಗಿದ್ದರೂ ನನ್ನ ಹಲ್ಲುಗಳ ಶಕ್ತಿಗೇನು ಕೊರತೆ ಇರಲಿಲ್ಲ. ನಾವು ಪಟ ಮತ್ತು ಪೂಜಾ ಕುಣಿತ ಪ್ರದರ್ಶಿಸಿದಾಗ ನಾನು ಪೂಜೆಯನ್ನು ಹಲ್ಲುಗಳಲ್ಲಿ ಕಚ್ಚಿ ಹಿಡಿದು ಕುಣಿದಿದ್ದೆ.

ಹೀಗೆ ಸುಮಾರು ಎರಡು ವರ್ಷದ ಹಿಂದೆ, ಒಮ್ಮೆ ಬಾಯಿಯ ಮೇಲ್ಭಾಗದಲ್ಲಿ ನಾಲಿಗೆಗೆ ಏನೋ ತಡೆದಹಾಗಾಯಿತು. ಏನೋ ತಿಂದದ್ದು ಅಂಟಿರಬಹುದು ಎಂದು ಮೊದಲು ಸುಮ್ಮನಾದೆ. ಯಾರಲ್ಲೂ ಹೇಳಲಿಲ್ಲ. ಆ ನಂತರ ಸ್ವಲ್ಪ ಸ್ವಲ್ಪವೇ ಚುಚ್ಚಲು ಶುರುವಾಯಿತು. ಕನ್ನಡಿಯಲ್ಲಿ ನೋಡಿದರೆ ಏನೋ ಬೆಳ್ಳಗೆ ಕಂಡಿತು. ಆಗ ಎದೆ ಬಡಿತ ಜೋರಾಯಿತು. ಇದೇನು ನಾನು ರಾಕ್ಷಸಿಯೇ? ಈ ಕಾಲದಲ್ಲಿ ಹೊಸ ಹಲ್ಲು ಬರುವುದೇ? ಎಲ್ಲೆಲ್ಲೋ ಹಲ್ಲು ಬೆಳೆಯುತ್ತಿದೆಯಲ್ಲ ಎಂದು ಭಯವಾಯಿತು.

ಮಾರನೆಯ ದಿನವೇ ಹಲ್ಲಿನ ಡಾಕ್ಟರ್ ಬಳಿ ಹೋದೆ. ನಿರೀಕ್ಷೆಯಂತೆ ಕ್ಷಕಿರಣದ ವರದಿಯಲ್ಲಿ ಒಂದು ಹಲ್ಲು ಕಣ್ಣಾಮುಚ್ಚಾಲೆ ಆಡುತ್ತಿರುವುದು ಕಂಡಿತು. ಅಚ್ಚರಿಯ ವಿಷಯವೆಂದರೆ ಅದೇ ನೇರವಾಗಿ ಇದ್ದ ಹಲ್ಲು– ಹಾಲುಹಲ್ಲಂತೆ! ಇನ್ನೂ ಗಟ್ಟಿಯಾಗಿತ್ತು. ನನಗಾಗ ವಯಸ್ಸು ಮೂವತ್ತೈದು. ಇನ್ನೂ ಹಾಲುಹಲ್ಲು ಗಟ್ಟಿಯಾಗೇ ಇತ್ತು! ಬೇರೆ ದಾರಿ ಇಲ್ಲದೇ ಹಲ್ಲಿನ ಡಾಕ್ಟರ್ ಆ ಮೂವತ್ತೈದು ವರ್ಷದ ಹಾಲುಹಲ್ಲನ್ನು ಕಿತ್ತರು!

ಆದರೆ ಬೆಳೆಯುತ್ತಿರುವ ಹೊಸ ಹಲ್ಲು ನಾಲಿಗೆಯನ್ನು ಚುಚ್ಚುತ್ತಿತ್ತು. ಹಲ್ಲಿನ ಚಿಕಿತ್ಸೆಗೆ ಡಾಕ್ಟರ್ ಒಂದೂವರೆ ಲಕ್ಷದ ಅಂದಾಜು ಪಟ್ಟಿ ಕೊಟ್ಟರು. "ನೀವು ಈ ಹಲ್ಲು ಕೀಳಿಸಲೇಬೇಕು. ಇದು ನಿಮ್ಮ ನಾಲಿಗೆಯನ್ನು ಕುಯ್ದುಬಿಡುವುದು. ಈ ಹಳೇ ಹಲ್ಲು ಕಿತ್ತಿರುವ ಜಾಗವನ್ನು ಫಿಲ್ಲ್ ಮಾಡಬೇಕು. ಎಲ್ಲ ಸೇರಿ..."

ಒಂದೂವರೆ ಲಕ್ಷ ಒಂದು ಹಲ್ಲಿಗಾ? ಮಿಷಿನ್ನಿನಲ್ಲಿ ಬಿಟ್ಟಿದ್ದ ಬಾಯಿ ಇನ್ನೂ ಅಗಲವಾಯಿತು. ನಮ್ಮ ಬ್ಯಾಂಕಲ್ಲಿ ದಂತ ಚಿಕಿತ್ಸೆಗೆ ಮರುಪಾವತಿ ಇರಲಿಲ್ಲ. ನಾವು ಹಲ್ಲು ಕಿರಿಯುವ ಕೆಲಸ ಮಾಡಬೇಕು. ಹಲ್ಲು ಕಚ್ಚುವ ಕೆಲಸಕ್ಕೆ ಹೋಗಬಾರದು ಎಂದಿರಬಹುದೇನೋ. ಹಾಗಂತ ಇರುವ ಕೆಲಸ ಬಿಟ್ಟು ಹೋಗಲಾಗುತ್ತದೆಯೇ? ಹಾಗೆ ಮಾಡಿದರೆ ಬಡವನ ಕೋಪ ದವಡೆಗೆ ಮೂಲ ಅಂತಾರಲ್ಲ, ಹಾಗೆ ಆಗುತ್ತದೆ ಅಷ್ಟೇ. ನಾವು ಅದನ್ನೆಲ್ಲಾ ಯೋಚಿಸುವ ಹಾಗೂ ಇಲ್ಲ. ಆ ವಿಷಯ ಪಕ್ಕಕ್ಕಿಟ್ಟು, ದುಡ್ಡನ್ನು ಲೆಕ್ಕಿಸದೇ ಕೀಳಿಸೋಣ ಅಂದರೆ ಭಯ. ಎಲ್ಲಿಂದ ಕೀಳ್ತಾರೆ? ಬಾಯಿಯ ಅಂಗಳದಿಂದಲೇ? ಆ ಹಲ್ಲು ದವಡೆಯಿಂದ ಸಾಕಷ್ಟು ಮೇಲೆ ಹುಟ್ಟಿತ್ತು.

ಹೋಗಲಿ, ನನ್ನ ಹಲ್ಲಿಗೆ ಲಕ್ಷಾಂತರ ಬೆಲೆ ಎಂದು ನಗಬೇಕೋ ಅಥವಾ ಅಳಬೇಕೋ ಗೊತ್ತಾಗಲಿಲ್ಲ. 'ಒಂದೆರೆಡು ದಿನದಲ್ಲೇ ಹೇಳುತ್ತೀನಿ ಡಾಕ್ಟರ್' ಎಂದು ಹೇಳಿ ತಾತ್ಕಾಲಿಕ ಚಿಕಿತ್ಸೆ ಪಡೆದು ಹೊರಬಂದೆ. ಸದ್ಯಕ್ಕೆ ಚಿಂತಿಸೋದು ಬೇಡ, ಏನಾಗುತ್ತೋ ನೋಡೇಬಿಡೋಣ ಎಂದು ಸುಮ್ಮನಾದೆ. ನಾಳೆಯ ಬಗ್ಗೆ ಚಿಂತೆ ಯಾಕೆ. ಆಂಗ್ಲ ಭಾಷೆಯಲ್ಲಿ 'ಕ್ರಾಸ್ ದಿ ಬ್ರಿಡ್ಜ್ ವೆನ್ ಇಟ್ ಕಮ್ಸ್' ಅಂತಾರಲ್ಲ ಹಾಗೆ.

ಹಲ್ಲಿನ ಡಾಕ್ಟರ್ ಕೊಟ್ಟ ತಾತ್ಕಾಲಿಕ ಚಿಕಿತ್ಸೆ ಫಲಕಾರಿಯಾಗಿ ನಿಧಾನವಾಗಿ ಆ ಹಲ್ಲು ಪಂಕ್ತಿಯ ಹತ್ತಿರ ಸರಿದು, ತಾನಾಗಿಯೇ ಗ್ಯಾಪ್ ತುಂಬಿಕೊಂಡಿತು. ದೇವರ ದಯೆ, ನಾಲಿಗೆಗೇನು ಸಮಸ್ಯೆಯಾಗಿಲ್ಲ. ಈಗ ನನ್ನ ಹಲ್ಲುಗಳು ಸುಮಾರು ಮಟ್ಟಿಗೆ ಒಂದೇ ಪಂಕ್ತಿಗೆ ಬಂದಿವೆ. ಏನೇನೋ ಕಲ್ಪಿಸಿಕೊಂಡು ಹೆದರಿದ್ದ ನನಗೀಗ ನೆಮ್ಮದಿಯಾಗಿದೆ. ಹಲ್ಲು ಬಿಟ್ಟು ನಗುವ ಯೋಗ ನನಗೂ ಒದಗಿದೆ. ಒಂದೂವರೆ ಲಕ್ಷ ಕೂಡ ಉಳಿಸಿದೆ. ಅದನ್ನು ಬೇರೆಲ್ಲೋ ವ್ಯರ್ಥವಾಗಿ ಖರ್ಚು ಮಾಡಿರುವುದು ಬೇರೆ ವಿಚಾರ.

***

## ಗಝಲ್

– ಸುಜಾತಾ ರವೀಶ್, ಮೈಸೂರು

ಮೌನದ ಚಿಪ್ಪಿನಲಿ ಭಾವನೆ ಅಡಗಿಸಿದರೆ ಒಲವ ಕೋರುವುದು ಹೇಗೆ
ಧ್ಯಾನದ ನೆಪದಲಿ ಮಾತನೆ ಮುರಿಯುತಿರೆ ಮನವ ತೋರುವುದು ಹೇಗೆ

ಜೀವದ ಬಯಕೆಗಳು ಗರಿಯ ಬಿಚ್ಚುತಲಿ ಹಾರಾಡಲು ಬೇಕು ತಾನೇ
ಹೂವಿನ ಪಕಳೆಗಳ ಹಸ್ತದಿ ಮುದುರುತಿರೆ ಗಂಧವ ಬೀರುವುದು ಹೇಗೆ

ಪರಾಗ ಸ್ಪರ್ಶಕೆ ಭ್ರಮರವು ಸುಮವನು ಅರಸುತ ಬರುವುದು ಸಹಜ
ಸರಾಗ ಹರಿಯದೆ ಅಡೆಗಳು ತಡೆಯುತಿರೆ ಗಮ್ಯವ ಸೇರುವುದು ಹೇಗೆ

ಕನಸಿನ ಲೋಕದಿ ಬಾಳಿನ ಗುರಿಗಳ ಸಾಫಲ್ಯ ಕಾಣಬೇಕೇಕೆ
ನನಸಿನ ಕಡೆಗೆ ಹೆಜ್ಜೆಗಳು ನಡೆಯುತಿರೆ ಛಲವ ಮೀರುವುದು ಹೇಗೆ

ಬೆಳಕಿನ ರಥದಲಿ ಬಹು ದೂರಸಾಗಿ ಬಂದಿರುವಳೀಗ ಸುಜಿ
ಬದುಕಿನ ಪಥದಲಿ ಕತ್ತಲೆ ಸುರಿಯುತಿರೆ ಚೆಲುವ ತೂರುವುದು ಹೇಗೆ?

***

# ಅವರವರ ಭಾವಕ್ಕೆ

– ಸಿಂಧು ಹರಿಥಸ್

ಗುರು ಕಾಲೇಜೊಂದರಲ್ಲಿ ಮನಃಶಾಸ್ತ್ರದ ವಿದ್ಯಾರ್ಥಿ. ಅವನ ಬಾಲ್ಯದ ಸ್ನೇಹಿತ ವಿನಯ್, ಅದೇ ಕಾಲೇಜಿನಲ್ಲಿ ಜೀವಶಾಸ್ತ್ರವನ್ನು ಓದುತ್ತಿದ್ದ. ಇಬ್ಬರೂ ವಿದ್ಯಾರ್ಥಿ ನಿಲಯದಲ್ಲಿ ಒಂದೇ ಕೋಣೆಯಲ್ಲಿ ಉಳಿದಿದ್ದರು. ಅವರಿಬ್ಬರಿಗೂ ಕಾದಂಬರಿ ಓದುವ ಹುಚ್ಚು. ಬೇಗ ಬೇಗ ಪಾಠಗಳನ್ನು ಓದಿ ಮುಗಿಸಿ, ಮಲಗುವ ಮುನ್ನ ಕಥೆಯ ಪುಸ್ತಕಗಳನ್ನು ಓದುವುದನ್ನು ರೂಢಿಸಿ ಕೊಂಡಿದ್ದರು. ಅದರಲ್ಲೂ ಕುತೂಹಲ ಮೂಡಿಸೋ ನಿಗೂಢ ಕಥೆಗಳು ಅಂದರೆ ಮುಗಿಯಿತು. ಒಂದೇ ದಿನದಲ್ಲಿ ಮುಗಿಸಬೇಕೆಂಬ ತವಕ.

ಅವರ ವ್ಯಾಸಂಗ ಮುಗಿಯಲು ಮೂರೇ ವಾರಗಳು ಮಿಕ್ಕಿದ್ದವು. ಕಾಲೇಜಿನ ಗ್ರಂಥಾಲಯದ ಬಹುತೇಕ ಕಾದಂಬರಿಗಳನ್ನು ಅವರು ಓದಿ ಮುಗಿಸಿದ್ದರು. ಹಾಗಾಗಿ ಅಂದು ಗುರುವಿಗೆ ಪುಸ್ತಕ ಆರಿಸಲು ಬಹಳ ಹೊತ್ತಾಯಿತು. ತುಂಬಾ ಹೊತ್ತು ಹುಡುಕಿದ ಮೇಲೆ ಎಂದೂ ಕಾಣದ ಒಂದು ಪುಸ್ತಕ ಕಂಡಿತು. ಅದನ್ನು ಹಿಂದೆ, ಮುಂದೆ ಒಳಗೆ ತೆರೆದು ನೋಡಿ, "ಅರೇ.. ಇದ್ಯಾವ ಪುಸ್ತಕ! ಇದರಲ್ಲಿ ಮುಖಪುಟದ ಮೇಲೆ ಶೀರ್ಷಿಕೆಯೇ ಇಲ್ಲವಲ್ಲ. ಒಳಗಡೆ ಮುನ್ನುಡಿ, ಪ್ರಕಾಶನದ ವಿವರಗಳು, ಬರೆದವರ ಹೆಸರು ಏನೂ ಇಲ್ಲ. ಇದನ್ನ ತಗೊಳ್ಳೋಣ, ಏನೋ ವಿಭಿನ್ನವಾಗಿದೆ" ಅಂದುಕೊಂಡು ಗ್ರಂಥಪಾಲರ ಮುಂದೆ ಪುಸ್ತಕ ಮತ್ತೆ ತನ್ನ ಗುರುತಿನ ಚೀಟಿ ಇಟ್ಟ. ಪುಸ್ತಕದ ಸಂಖ್ಯೆಯನ್ನು ಗುರುತು ಹಾಕಿಕೊಂಡು, ಗ್ರಂಥಪಾಲಕ ಸಂಜಯ್ ಪುಸ್ತಕವನ್ನು ಕೊಟ್ಟು, ತೀಕ್ಷ್ಣ ನೋಟವನ್ನು ಬೀರಿದರು. ಆ ನೋಟಕ್ಕೆ ಗುರು ಎದೆ ಝಲ್ ಎಂದಿತು.

ರಾತ್ರಿ ಮಲಗುವ ಮುನ್ನ ಪುಸ್ತಕ ತೆರೆದು ಒಂದು ಅಧ್ಯಾಯ ಓದಿದ. ಪುಸ್ತಕ ಅಷ್ಟೇನು ಸ್ವಾರಸ್ಯಕರ ಅನ್ನಿಸಲಿಲ್ಲ. ಮೊದಲ ಅಧ್ಯಾಯ ಮುಗಿಯುವಷ್ಟರಲ್ಲಿ ಗಾಢ ನಿದ್ರೆ ಬಂದು ಮಲಗಿಬಿಟ್ಟ. ಮಾರನೇ ದಿನ ಎಂದಿನಂತೆ ತಯಾರಾಗಿ ಕಾಲೇಜಿಗೆ ಹೋದ. ಅಲ್ಲಿ ಅವನಿಗೆ ಆಶ್ಚರ್ಯ ಕಾದಿತ್ತು. ರಾತ್ರಿ ಓದಿದ್ದ ಕಥೆಯಲ್ಲಿ ಬರುವ ಹಾಗೆ ಅಂದು ಇವನಿಗೆ ಸರ್ಪ್ರೈಸ್ ಪರೀಕ್ಷೆ ಇತ್ತು. ಅಷ್ಟೇ ಅಲ್ಲ ಯಾರೋ ಮಾಡಿದ ತಪ್ಪಿಗೆ ಅಧ್ಯಾಪಕರು ಇವನನ್ನು ಶಿಕ್ಷಿಸಿದರು. ದಿನವಿಡೀ ಕಥೆಯ ಹಲವು ಸನ್ನಿವೇಶಗಳು ಇವನ ಸುತ್ತ ನಡೆಯಿತು. ಕಾಕತಾಳೀಯ ಎಂದು ಸುಮ್ಮನಾದ.

ಆ ರಾತ್ರಿ ಮತ್ತೆ ಪುಸ್ತಕ ತೆರೆದು ಓದಲಾರಂಭಿಸಿದ. ಕಥೆಯಲ್ಲಿ ನಾಯಕ, ಅವನ ಸ್ನೇಹಿತರೊಂದಿಗೆ ಒಂದು ನಾಟಕ ನೋಡಲು ಹೋಗುತ್ತಾನೆ. ಮನೆಗೆ ಬರುವಾಗ ಬಿದ್ದು ಮಂಡಿ ತರುಚುತ್ತದೆ. ಆ ಕಥೆ ಮುಗಿಯುವುದರೊಳಗೆ ಗುರುವಿಗೆ ಎಲ್ಲಿಲ್ಲದ ನಿದ್ರೆ ಆವರಿಸಿತು.

ಮಾರನೇ ದಿನ, ಯಾವುದೋ ಮುಷ್ಕರವಿದ್ದ ಕಾರಣ ಕಾಲೇಜಿನಲ್ಲಿ ಪಾಠಗಳು ಸ್ಥಗಿತಗೊಂಡಿತು. ಸಹಪಾಠಿಗಳೆಲ್ಲ ಸೇರಿ ಒಂದು ಸಿನಿಮಾ ನೋಡಲು ಯೋಚಿಸಿದರು. ಅವರೊಂದಿಗೆ ಗುರು ಕೂಡ ಸೇರಿದ್ದ. ಸಿನಿಮಾ ನೋಡಿ, ಸ್ನೇಹಿತರೊಂದಿಗೆ ಮೋಜು ಮಾಡಿ, ಊಟ ಮುಗಿಸಿ ಹಾಸ್ಟೆಲ್ಲಿಗೆ ಬರುವುದು ತಡವಾಯಿತು. ಅಷ್ಟರಲ್ಲಿ ಹಾಸ್ಟೆಲ್ ಗೇಟಿಗೆ ಬೀಗ ಜಡಿದಿತ್ತು. ಕದ್ದು ಮುಚ್ಚಿ ಕಾಂಪೌಂಡ್ ಹಾರುವಾಗ, ಬಿದ್ದು ಗುರು ಕಾಲಿಗೆ ಏಟಾಯಿತು.

ಆಗ ಗುರುವಿಗೆ ಆ ಪುಸ್ತಕ ಮತ್ತು ವಾಸ್ತವದ ನಡುವೆ ಏನೋ ಸಂಬಂಧ ಇರುವ ಸಂಶಯ ಹುಟ್ಟಿತು. ಇದು ನಿತ್ಯ ಸತ್ಯವಾಗಲಾರಂಭಿಸಿತು. ಒಂದು ಕಥೆ ಓದುವುದರೊಳಗೆ ಗಾಢ ನಿದ್ರೆ ಬರುವುದು, ಕಥೆಯ ಸನ್ನಿವೇಶಗಳು ಮುಂದಿನ ದಿನ ನಡೆಯುವುದು. ತನ್ನ ಬುದ್ಧಿಶಕ್ತಿಗೆ ಅರಿವಾಗದ್ದು ಏನೋ ನಡೆಯುತ್ತಿದೆ ಎಂಬ ಗೊಂದಲ ಅವನಿಗೆ ಶುರುವಾಯಿತು.

ಒಂದು ವಾರ ಹೀಗೇ ಕಳೆದಮೇಲೆ ಗುರು ಈ ವಿಚಾರವನ್ನು ವಿನಯ್ ಗಮನಕ್ಕೆ ತಂದ. ಗುರುವಿನ ಮಾತಿಗೆ ನಕ್ಕು, "ಅಯ್ಯೋ ಗುರು, ಆ ಸಂಜಯ್ ಸರ್ ಒಂಥರಾ ವಿಚಿತ್ರ ಪ್ರಾಣಿ, ಅವ್ರು ಎಲ್ಲರನ್ನೂ ಗುರಾಯಿಸಿ ನೋಡ್ತಾರೆ. ಮೇಲಾಗಿ ಬೆಕ್ಕಿನ ಕಣ್ಣು ಬೇರೆ, ಭಯ ಆಗೋದು ಸಹಜ. ಅದನ್ನೆಲ್ಲಾ ಮನಸ್ಸಿನಲ್ಲಿ ಇಟ್ಕೊಬೇಡ. ಇನ್ನು, ಯಾರೋ, ಯಾವಾಗ್ಲೋ ಬರ್ದಿದ್ ಕಥೆ ನಿನ್ ಜೀವನದಲ್ಲಿ ಹೇಗ್ ನಡೆಯೋಕ್ ಸಾಧ್ಯ? ಅದು ನಿನ್ ಕಲ್ಪನೆ ಅಷ್ಟೇ!" ಎಂದು ಸಮಾಧಾನ ಮಾಡಿದ.

"ಇಲ್ಲ ಕಣೋ. ನಾನು ಮನಃಶಾಸ್ತ್ರ ಓದೋನು, ಮನಸಿನ ಕಲ್ಪನೆ ಯಾವ್ದು, ವಾಸ್ತವ ಯಾವ್ದು ಗೊತ್ತಾಗಲ್ವಾ?" ಗುರು ವಾದಿಸಿದ.

"ಒಂದ್ ಕೆಲ್ಸ ಮಾಡೋಣ ಹಾಗಾದ್ರೆ. ಇಬ್ರೂ ಒಟ್ಟಿಗೆ ಓದೋಣ. ನಾನು ಹೇಗಿದ್ರೂ ಬೆಳಗ್ಗೆ ಊರಿಗೆ ಹೋಗ್ತೀನಲ್ಲ ನಮ್ಮಿಬ್ರ ಕಥೆ ಒಂದೇ ಆಗಕ್ಕೆ ಸಾಧ್ಯನೇ ಇಲ್ಲ... ಆಗ ಪುಸ್ತಕದ ಬಂಡವಾಳ ಗೊತ್ತಾಗತ್ತೆ" ಎಂದು ವಿನಯ್ ಸವಾಲು ಹಾಕಿದ. ಈ ಉಪಾಯ ಸರಿ ಎಂದು ಒಪ್ಪಿ, ಇಬ್ಬರೂ ಒಟ್ಟಿಗೆ ಕಥೆ ಓದಿದರು.

ಬೆಳಗ್ಗೆ ಒಬ್ಬ ಕಾಲೇಜಿನ ಕಡೆ, ಇನ್ನೊಬ್ಬ ಊರಿನತ್ತ ಪಯಣ ಬೆಳೆಸಿದರು. ಎಂದಿನಂತೆ ಗುರುವಿನ ದಿನ ಕಥೆಯಲ್ಲಿ ಓದಿದಂತೆಯೇ ನಡೆಯಿತು. ರಾತ್ರಿ ಹೊತ್ತಿಗೆ ವಿನಯ್ ಕರೆ ಬಂತು, "ಗುರು, ನೀ ಹೇಳಿದ್ ನಿಜಕಣೋ! ಆ ಕಥೆಯಲ್ಲಿ ನಡೆಯೋ ಹಾಗೆ ನನ್ ಬಸ್ಸೂ ಕೈ ಕೊಡ್ತು. ಈಗ ಸಲ್ಪ ಹೊತ್ತಿಗ್ ಮುಂಚೆ ಊರ್ ತಲುಪಿದೆ. ಕಥೆಯ ನಾಯಕನ ಹಾಗೆ ನಾನೂ ಊಟ ಸಿಗದೆ ಸುಸ್ತಾದೆ" ಎಂದು ಗಾಬರಿಯಿಂದ ಹೇಳಿದ.

"ಅಯ್ಯೋ! ಕಥೆಯಲ್ಲಿ ಬಸ್ಸೇ ಇರ್ಲಿಲ್ವಲ್ಲೋ. ನಾಯಕ ತುಂಬಾ ದಿನದಿಂದ ಕಾಳ್ ಹಾಕ್ತಿದ್ದಿದ್ ಹುಡ್ಗಿ ಅವ್ನನ್ನ ನೋಡಿ ನಗ್ತಾಳೆ ಅಂತ ಬರ್ದಿತ್ತು. ಹಾಗೆ ಚೈತ್ರ ನನ್ ಜೊತೆ ನಗನಗುತ್ತಾ ಮಾತಾಡಿದಳು ಕಣೋ" ಅಂತ ಬೇರೆ ಕಥೆಯನ್ನೇ ಹೇಳಿದ ಗುರು.

ಇಬ್ಬರೂ ಒಟ್ಟಿಗೆ ಓದಿದರೂ, ಕಥೆಗಳು ಬೇರೆ ಬೇರೆ ಎನಿಸಿತು. ಇಬ್ಬರಿಗೂ ಕಥೆ ತಮ್ಮದು ಎನ್ನುವ ಅಭಿಪ್ರಾಯ. ಯಾರ ಕಥೆ ಸರಿ ಎಂದು ನೋಡಲು ಪುಸ್ತಕ ತೆರೆದರೆ, ಅಲ್ಲಿ ಬೇರೊಂದು ಕಥೆಯಿತ್ತು.

ಆಗ ಗುರುಗೆ ಹೊಳೆಯಿತು, "ಹೌದು, ಈ ಪುಸ್ತಕದಲ್ಲಿ ಹಿಂದಿನ ಅಧ್ಯಾಯ ಆಗ್ಲಿ, ಮುಂದಿನ ಅಧ್ಯಾಯ ಆಗ್ಲಿ ಕಾಣಲ್ಲ. ಯಾವತ್ತೂ ಹಿಂದಿನ ದಿನ ಓದಿದ ಅಧ್ಯಾಯ ಮತ್ತೆ ಕಂಡೆ ಇಲ್ಲ." ಎಂದ.

"ಅದ್ಹೇಗೋ ಸಾಧ್ಯ? ಸರಿಯಾಗಿ ನೋಡು. ವಿಡಿಯೋ ಕಾಲ್ ಮಾಡ್ತೀನಿ. ನನ್ ಮುಂದೇನೆ ಪುಸ್ತಕ ತೆರೆ" ಎಂದು ವಿನಯ್ ಹೇಳಿದ.

"ಒಂದ್ ಕೆಲ್ಸ ಮಾಡ್ತೀನಿ ಇವತ್ತು ಕಾಣೋ ಅಧ್ಯಾಯದ ಚಿತ್ರ ತೆಗೆದು ನಿಂಗೆ ಕಳಿಸ್ತೀನಿ. ನೀನು ಓದು. ನಾಳೆ ಆ ಕಥೆ ಮೊಬೈಲಿನಲ್ಲಿ ಓದಿ, ನಮ್ಮಿಬ್ಬರಲ್ಲಿ ಯಾರ ಕಥೆ ಅದು ಅಂತ ನಿರ್ಧರಿಸೋಣ" ಎಂದ ಗುರು. ವಿನಯ್ ಕೂಡ ಒಪ್ಪಿದ.

ಪುಸ್ತಕ ತೆರೆದು, ಫೋಟೋ ತೆಗೆದು, ಇಬ್ಬರೂ ಓದಿ ನಿದ್ರೆಗೆ ಜಾರಿದರು. ಮಾರನೇ ದಿನ ಕಥೆಯಲ್ಲಿ ಬರುವಂತೆ ವಿನಯ್ ತಾಯಿ ಅವನ ನೆಚ್ಚಿನ ಕೋಡುಬಳೆ, ಚಕ್ಲಿ, ಬೇಸನ್ ಲಡ್ಡು ಎಲ್ಲವನ್ನೂ ಕಟ್ಟಿ ಕೊಟ್ಟರು. ಅವನು ಹೊರಟ ರೈಲು ಖಾಲಿಯಿದ್ದು, ಆರಾಮವಾಗಿ ಪ್ರಯಾಣಿಸಿದ. ಸಂಜೆ ಹೊತ್ತಿಗೆಲ್ಲಾ ಹಾಸ್ಟೆಲ್ ತಲುಪಿದ್ದ. ಇತ್ತ ಗುರು ಅನಾರೋಗ್ಯದಿಂದ ಮಲಗಿದ್ದ. ವಿನಯನನ್ನು ನೋಡಿದಾಕ್ಷಣ, "ಕಥೇಲಿ ನಾಯಕನಿಗೆ ಜ್ವರ ಅಂತ ಓದಿದ್ನಲ್ಲ, ಅದಕ್ಕೆ ಬೆಳಗ್ಗೆ ಇದ್ದೋನೇ ಹಣ್ಣು,

ಬ್ರೆಡ್ಡು ಮತ್ತೆ ಔಷಧಿಯನ್ನೆಲ್ಲ ತಂದಿಟ್ಕೊಂಡೆ. ಮದ್ಯಾಹ್ನದ ಹೊತ್ತಿಗ್ ಶೀತ ಕೆಮ್ಮು ಶುರುವಾಯಿತು. ಈಗ್ಲಾದ್ರೂ ಗೊತ್ತಾಯಿತಾ ಅದು ನನ್ ಕಥೆ ಅಂತ" ಗುರು ಹೇಳಿದ.

"ಗುರು, ಮೊಬೈಲ್ ತೆಗ್ದು ಇನ್ನೊಂದ್ ಸರ್ತಿ ಓದು. ಜ್ವರಾನೂ ಇಲ್ಲ ಏನೂ ಇಲ್ಲ... ನಾಯಕನಿಗೆ ಅಮ್ಮನ ಕೈ ರುಚಿ ದೊರೆಯತ್ತೆ ಅಂತಿದೆ, ನೋಡು ಏನೇನ್ ತಿಂಡಿ ಕೊಟ್ಟಿದ್ದಾರೆ ನಮ್ಮಮ್ಮ" ಎಂದು ವಿನಯ್ ಮೊಬೈಲ್ ತೆರೆದು ತೋರಿಸಿದ.

"ನೋಡೇ ಬಿಡೋಣ!" ಎನ್ನುತ್ತ ನೋಡಿದರೆ ಅವರಿಬ್ಬರ ಮೊಬೈಲ್ನಲ್ಲೂ ಯಾವ ಚಿತ್ರವೂ ಇಲ್ಲ!

ಯಾಕೋ ಈ ಪುಸ್ತಕ ಸರಿ ಇಲ್ಲ, ಸುಮ್ನೆ ತಲೆ ಕೆಡ್ತಿದೆ ಅಂತ ನಿರ್ಧರಿಸಿ ಆ ರಾತ್ರಿ ಕಥೆ ಓದದೆಯೇ ಮಲಗಿದರು. ಬೆಳಗ್ಗೆ ಎದ್ದು ನೋಡಿದರೆ ಪುಸ್ತಕ ಕಾಣೆಯಾಗಿತ್ತು. ಕೋಣೆಯ ಮೂಲೆ ಮೂಲೆ ಹುಡಿಕಿದರು. ಎಲ್ಲೂ ಸಿಗಲಿಲ್ಲ. ಒಂದೆರಡು ದಿನ ಕಾದು ನಂತರ ಗ್ರಂಥಾಲಯಕ್ಕೆ ಹೋಗಿ ದಂಡ ಕಟ್ಟಲು ಮುಂದಾದರು.

ಗ್ರಂಥಾಲಯದಲ್ಲಿ ಗ್ರಂಥಪಾಲಕ ಸಂಜಯ್ ತಲೆ ತಗ್ಗಿಸಿ ಏನೋ ಬರೆಯುತ್ತಿದ್ದರು. "ಸರ್ ನಮ್ಮಿಂದ ಒಂದು ಪುಸ್ತಕ ಕಳುವಾಗಿದೆ," ಎಂದು ಮೆಲ್ಲಗೆ ಗುರು ರಾಗ ಎಳೆದ.

ತಲೆ ಎತ್ತದೆಯೇ, "ಪುಸ್ತಕದ ಹೆಸರು?" ಸಂಜಯ್ ಪ್ರಶ್ನಿಸಿದರು. ಉತ್ತರ ಬರದಿದ್ದಾಗ ತಲೆ ಎತ್ತಿ, ತನ್ನ ಕಪಾಟಿನಲ್ಲಿದ್ದ ಪುಸ್ತಕವನ್ನು ಆಚೆ ತೆಗೆದು, "ಇದೇ ಪುಸ್ತಕ ತಾನೆ? ನೀವಿಬ್ರು ಬರ್ತೀರ ಅಂತ ಇದರಲ್ಲಿ ಓದಿದ್ದೆ" ಎಂದಾಗ ಗುರು ಮತ್ತೆ ವಿನಯ್ ಆ ಪುಸ್ತಕ ಅಲ್ಲಿ ಹೇಗೆ ತಲುಪಿತು ಎಂದು ಬೆದರಿದರು.

ಸಂಜಯ್ ಎತ್ತಿ ಹಿಡಿದ ಪುಸ್ತಕ ಇವರು ಓದಿದ ಪುಸ್ತಕವೇ. ಆದರೆ ಗಮನಿಸಿದಾಗ "ಅವರವರ ಭಾವಕ್ಕೆ" ಎಂಬ ಶೀರ್ಷಿಕೆ ಈಗ ದಪ್ಪಕ್ಷರಗಳಲ್ಲಿ ಅಚ್ಚಾಗಿತ್ತು.

***

# ಶಾಯರಿಗಳು

– ಜಾನಕಿರಾಮ

ಆ ಗೋಡೆ ಈ ಗೋಡೆ
ನೂರು ಗೋಡೆಗಳ ಗೂಡು
ಬಾ ಒಮ್ಮೆ ಮನದ ಕವಾಟವ ತೆರೆದು
ದಿಗಂತದ ತುದಿವರೆಗೆ ಕೊಂಚ ನೋಡು

ಪಿಸು ನುಡಿ, ತುಸು ನುಡಿ
ನಾಣ್ನುಡಿ ಬೆಳ್ನುಡಿ ಎಲ್ಲವೂ ನುಡಿಗಳೇ
ಪಲ್ಲವಿಯ ಸಾಲೆರಡ ಚೆಂದಮಾಡಿದ್ದಾಯ್ತು
ನುಡಿಯ ಭಾವವ ಈಗ ಅನುಭವಿಸಿ ಹಾಡು

ದಾನಿಗಳು, ಮಾನಿಗಳು
ಧ್ಯಾನಿಗಳು ಬಂದು ಹೋದರು ಜಗಕೆ ಎಲ್ಲಿ ನೆನಪು
ಬಂಧು ಮಿತ್ರರು ಹರಸಿ ಹೊಗಳುವುದು ಸರಿಯೇ
ಶತ್ರುವಿಗು ಒಳಿತಿಂದ ಕನಸಿನಲಿ ಕಾಡು

ಅನ್ನದಾನವ ಕೊಂಡು ಉದರ ಪೋಷಣೆಯಾಯ್ತು
ವಿದ್ಯೆಯ ದಾನದಲಿ ಮಿದುಳು ಮಲ್ಲಿಗೆಯಾಯ್ತು
ಧನಕನಕ ದಾನವೂ ಏತಕೋ ಹುಸಿ ಹುಸಿಯು
ಕಾವ್ಯರಸದಾನವ ಸ್ವಲ್ಪ ನೀಡು

ಸಾವಿರ ತುಟಿಗಳು ಪಟಪಟನೆ ಬಡಿದು
ನೀಡುವವು ಸಾವಿರ ಬಿಟ್ಟಿ ಸಲಹಾಹಿಂಸೆ
ಅಂಗಳ ಯಾರದೋ, ಸ್ಪರ್ಧಿಯವನಾರೋ
ನಿನ್ನಂತೆ ನೀನಿದ್ದು ನಿನ್ನಂತೆ ಆಡು

ದಟ್ಟಗಾಡಲಿ ಸೂಜಿ ಹುಡುಕ ಹೊರಟಿಹೆ ನೀನು
ಸೂಜಿ ಮನೆಯಲ್ಲಿಹುದು ಅಲ್ಲ ಅಲ್ಲಿ
ಗಿರಿ ಶಿಖರ ನದಿ ಕಾನು ಹುಡುಕತಿಹೆ ಏನನ್ನು
ನಿನ್ನಲ್ಲಿ ನೀ ಹುಡುಕು ನಿನ್ನ ಜಾಡು

***

# ದುಮ್ಮಾನ

– ರಾಧಿಕಾ ವಿ ಗುಜ್ಜರ್

ಮರೆತು ಹೋಗುತ್ತಿರುವ
ಹಾಡೊಂದರ ಸಾಲು ಕಾಡಿಸುತ್ತಿದೆ
ಹೀಗೇ ಆಗಿದೆ ಇತ್ತೀಚೆಗೆ
ನೆನಪಿಸುವ ಜೀವವಿಲ್ಲದೆ

ನೆನ್ನೆಯಿದ್ದು ಇಂದು ಕಳೆದ ಸಾಲುಗಳು
ನೆನಪಿನಿಂದಿಳಿದು ಮರೆವು ಹತ್ತಿದ ಸಾಲುಗಳು
ಅರ್ಥ ಇದ್ದು ಅರ್ಥ ಉದುರಿದ
ಅಕ್ಷರವಿದ್ದು ಅರ್ಥ ಮಾಸಿದ
ಕೈಕಟ್ಟಿ ಕುಳಿತ ಚೋಟುದ್ದದವು
ಕಟ್ಟೆ ಬಿಟ್ಟಿಳಿಯದೆ ಕಾಡಿಸುತ್ತಿವೆ

ಏನೆಲ್ಲ ಪ್ರಯತ್ನಿಸಿದರೂ
ನನಗೆ ತೊಡರಿಕೊಳ್ಳದ ಅವುಗಳ
ಬೇಕೆಂದೇ ನನಗಾಗಿ ಹುಡುಕುತ್ತಿದ್ದ
ಹಟ ಬಿಡದ ಸಮಾಧಾನಿ ಹಮ್ಮೀರನವ

ಎಲ್ಲೆಲ್ಲಿ ಏನೇನು ಬಿಟ್ಟರೂ
ನನ್ನವಳೆಂಬ ಬೆಟ್ಟದಷ್ಟು ಅಕ್ಕರೆ
ಒಂದಿಷ್ಟು ಹುಸಿ ಹಸಿ ಹುರ್ ಎನ್ನುವ
ಮನಕೆ ತರಚಿ ಗಾಯ ಮಾಡದ
ಕಿವಿಯಿಟ್ಟರೂ ಯಾರಿಗೂ ಒಂದೂ ಪದ ಕೇಳದ
ಮುನಿಸೇನೋ ಎನ್ನುವ ಮುನಿಸನ್ನು
ಕೇವಲ ಕ್ಷಣವೊಂದಕ್ಕಾಗಿ ಧರಿಸಿ
ನನ್ನ ಪೆಚ್ಚು ಮೋರೆಯೆದುರು ಕಳಚುತ್ತಿದ್ದವ

ಹೀಗಿದ್ದವ ಹಾಗೇ ಕಳೆದು ಹೋದ
ಸಾಲುಗಳೇನು...
ಹಾಡುಗಳೇ ಹೇಗೆ ಹೇಗೋ ಖಾಲಿಯೀಗ

***

ಕಥಾ ಪರಿಚಯ

# ಪ್ರೇಮ್ ಚಂದ್ ಅವರ ಕತೆ – 'ತಥ್ಯ'
## (ಅನುವಾದ: ಟಿ.ವಿ. ಅನ್ನಪೂರ್ಣಮ್ಮ)

– ಗಿರಿಜಾ ರಾಜ್ ಎಲ್.

ಹಿಂದಿ ಸಾಹಿತ್ಯದ ಹೆಸರಾಂತ ಕತೆಗಾರ, ಕಾದಂಬರಿಕಾರ ಮುನ್ಷಿ ಪ್ರೇಮ್ ಚಂದರ್ ಕತೆಗಳ ಬಗ್ಗೆ ತಿಳಿದುಕೊಳ್ಳುವ ಕುತೂಹಲವಿತ್ತು.

ನನಗೆ "ಮುನ್ಷಿ ಪ್ರೇಮ್ ಚಂದರ ಆಯ್ದ ಜನಪ್ರಿಯ ಕಥೆಗಳು" ಹಿಂದಿಯಿಂದ ಕನ್ನಡಕ್ಕೆ ಅನುವಾದ ಮಾಡಿದ ಟಿ.ವಿ. ಅನ್ನ ಪೂರ್ಣಮ್ಮ ಅವರ ಗ್ರಂಥ ದೊರೆಯಿತು. ಇದರ ಪ್ರಕಾಶಕರು: ಶ್ರೀಮತಿ. ಟಿ. ಆರ್. ಉಷಾರಾಣಿ (ನಮ್ಮ ವೇದಿಕೆಯ ಪ್ರಿಯ ಗೆಳತಿ ಉಷಾ, ಅನ್ನಪೂರ್ಣಮ್ಮನವರ ಔರಸ ಪುತ್ರಿ) 2024 ರಲ್ಲಿ ಪ್ರಥಮ ಮುದ್ರಣ ಕಂಡಿರುವ 608 ಪುಟಗಳ, ಗಾತ್ರ ಮತ್ತು ಗುಣ ಎರಡರಲ್ಲೂ ಮಹತ್ತಾದ ಪುಸ್ತಕ. ನಾನು ಇದರಲ್ಲಿರುವ 43 ಕತೆಗಳಲ್ಲಿ ಏಳು ಕತೆಗಳನ್ನು ಓದಿದ್ದ ನನಗೆ, ದಾಸೋಹಕ್ಕೆ ಹೆಸರು ಬೇರೆ ಕೊಟ್ಟಿದ್ದು, ಏನು ಬರೆಯಲಿ? ಎಂಬ ಭೂತಾಕಾರದ ಪ್ರಶ್ನೆ ಮುಂದೆ ನಿಂತಾಗ ಅದೇ ಕತೆಗಳ ಗುಂಗಿನಲ್ಲಿ, ವಾಚನಾನುಭವದ ಲಹರಿಯಲ್ಲಿ ತೇಲುತ್ತಿದ್ದ ನನಗೆ ಪ್ರೇಮ್ ಚಂದರ ಒಂದು ಕತೆಯ ಪರಿಚಯವನ್ನೇಕೆ ಮಾಡಿಕೊಡಬಾರದು ಎಂದು ಸಮನ್ವಯದ ಸ್ನೇಹಿತರಿಗೆ ಅನಿಸಿತು.

ಕತೆಗಳ ಅನುವಾದದ ಕೆಲಸ ಸುಲಭವಲ್ಲ. ಮೂಲದ ಸ್ವಾರಸ್ಯ ಕೆಡದ ಹಾಗೆ, ಮೂಲ ಲೇಖಕರ ಆಶಯಕ್ಕೆ ಚ್ಯುತಿ ಬರದ ಹಾಗೆ ಅನುವಾದ ಮಾಡಬೇಕಾದರೆ, ಅನುವಾದಕರು ಮೂಲ ಕತೆಗಳನ್ನು ತನ್ಮಯರಾಗಿ ಮೊದಲು ಸಹೃದಯ ಓದುಗರಾಗಿ ರಸಾನುಭವ ಪಡೆದಿರಬೇಕಾಗುತ್ತದೆ. ನನಗೆ ವಾಚಕಳಾಗಿ, ಮೂಲ ಕತೆಗಳನ್ನು ಓದಿದ ಅನುಭವ ಇಲ್ಲದೆ ಹೋದರೂ, ಈ ಅನುವಾದ ಓದುವಾಗ ಅವು ಬೀರುವ ಭಾವನಾತ್ಮಕ ಪ್ರಭಾವ, ಶೈಲಿ, ನಮ್ಮಲ್ಲಿ ಓದಿನ ಆಸಕ್ತಿ ಹಿಡಿದಿಡುವ ರೀತಿ ಮತ್ತು ಕೆಲವು ಎಂದಿಗೂ ಬದಲಾಗದ ಸಾರ್ವಕಾಲಿಕ ಸತ್ಯಗಳನ್ನು ಬಿತ್ತರಿಸುವ ಸಾಮರ್ಥ್ಯ ಅದು ಯಾಂತ್ರಿಕ ಅನುವಾದ ಅಲ್ಲ ಎಂಬುದಕ್ಕೆ ಸಾಕ್ಷಿ ನುಡಿಯುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ, ಹೋರಾಟ ನಡೆಯುತ್ತಿದ್ದ ಸಂದರ್ಭದಲ್ಲಿ ಇದ್ದ ಪ್ರೇಮ್ ಚಂದರ ಅನೇಕ ಕತೆಗಳಲ್ಲಿ ಸ್ವಾತಂತ್ರ್ಯದ ಉಜ್ವಲ ಪ್ರೇಮ ವಸ್ತುವಾಗಿದೆ, ನಾನು ಓದಿದ ಏಳು ಕತೆಗಳಲ್ಲಿ ಎರಡು ಆ ರೀತಿಯ ಕತೆಗಳಾಗಿದ್ದವು. ಆದರೆ ನಾನು ಇಂದು ಪರಿಚಯ ಮಾಡಿಸುವುದು ತಥ್ಯ ಎಂಬ ಪ್ರೇಮ ಕತೆ.

ಪ್ರೇಮ ಕಥೆಗಳ ಲೋಕದಲ್ಲಿ, ಗಂಡು ಅಥವಾ ಹೆಣ್ಣು ತಾವು ಪ್ರೀತಿಸುವವರಿಗೆ ಏನನ್ನೂ ಹೇಳದೆ, ಮನದೊಳಗೇ ಪ್ರೇಮಿಸುತ್ತ, ಕನಸಗಳ ದೊಡ್ಡ ಪ್ರೇಮದ ಮಹಲನ್ನು ಕಟ್ಟಿಕೊಂಡು ಬಿಟ್ಟಿರುತ್ತಾರೆ, ಆದರೆ ಅದು ವಿಫಲವಾದಾಗ ತಡೆದುಕೊಳ್ಳಲಾಗದೆ, ಅರೆಹುಚ್ಚರಾಗುವುದೋ, ಆತ್ಮಹತ್ಯೆಗೆ ಶರಣಾಗುವುದೋ ಅಥವಾ ಇನ್ನವುದೋ ರೀತಿಯಲ್ಲಿ ಪರ್ಯವಸಾನವಾಗುವ ಕತೆಗಳು ಸಾಹಿತ್ಯದಲ್ಲಿ ಅನೇಕ ಕಥೆ ಕಾದಂಬರಿಗಳಲ್ಲಿ ಮತ್ತು ಚಲನಚಿತ್ರಗಳಲ್ಲಿ ಬೇಕಾದಷ್ಟು ಬಂದಿವೆ... ಬರುತ್ತಲೇ ಇವೆ, ಮುಗಿವಿಲ್ಲದ ಪ್ರೇಮಪರ್ವಗಳು!

ಆದರೆ "ತಥ್ಯ" ಕತೆ ಇದನ್ನು ದಾಟಿ ಮುಂದಕ್ಕೆ ಅನಿರೀಕ್ಷಿತ ತಿರುವು ಪಡೆದುಕೊಳ್ಳುತ್ತ ಹೋಗುತ್ತದೆ. ಅದರ ವಿಶೇಷತೆ ಇರುವುದೂ ಅಲ್ಲೇ! ಅದು ಬಾಳಿನ ಸತ್ಯ (ತಥ್ಯ) ಗಳನ್ನು ತೆರೆದಿಡುತ್ತದೆ. ಎಷ್ಟೋ ಸಲ ಒಂದು ಸರಳ ಕತೆಯನ್ನು ಹಲವಾರು ಲೇಖಕರು ತೆರದಿಡುವ ಪರಿಯಲ್ಲಿ ಅವುಗಳ ಶ್ರೇಷ್ಠತೆ ಅಡಗಿರುತ್ತದೆ.

ಹಳ್ಳಿಯಲ್ಲಿ ನೆರೆಹೊರೆಯವಳಾಗಿದ್ದ ಅನುಪಮ ಸುಂದರಿ ಪೂರ್ಣಿಮಾ ಬಗ್ಗೆ ಆಕರ್ಷಣೆ ಬೆಳೆಸಿಕೊಳ್ಳುವ ಅಮೃತ, ಅವಳ ಪ್ರೀತಿ ಗಳಿಸಿಕೊಳ್ಳಲು ಅವಳ ಕೆಲಸಗಳಲ್ಲಿ ಎಲ್ಲ ರೀತಿಯಲ್ಲಿ ಸಹಾಯ ಮಾಡುತ್ತಾನೆ, ಆದರೆ ಅದನ್ನೆಲ್ಲ ಬಾಲ್ಯಸ್ನೇಹದ ನಿರ್ವಹಣೆಯಲ್ಲದೆ, ಅಮೃತನೊಂದಿಗೆ ನನ್ನ ಸಂಬಂಧ ಬೇರೆ ರೀತಿಯಲ್ಲೂ ಇರಬಹುದೆಂದು ಅವಳು ಅಂದುಕೊಳ್ಳುವುದೇ ಇಲ್ಲ. ಆದರೆ ಅವಳು ಮದುವೆಯಾಗಿ ಹೋಗುವ ಸುದ್ದಿ ತಿಳಿಸಿದಾಗ ಅತ್ಯಂತ ನಿರಾಶೆಗೊಳಗಾಗುತ್ತಾನೆ. ಶ್ರೀಮಂತ ಗಂಡು ಸಿಕ್ಕಿದಾಗ, ಬಡತನದಲ್ಲಿದ್ದ ಅವಳಿಗೆ ಸಂಪತ್ತು ಎಲ್ಲಕ್ಕಿಂತಲೂ ಪ್ರಿಯವಾದ ವಸ್ತುವಾಗಿ ಕಾಣುತ್ತದೆ. ಆದರೆ ಅಮೃತ ಹುಚ್ಚನಂತಾಗುತ್ತಾನೆ. ಅವಳು ಹೋದ ನಂತರ, ಹೇಗೆ ಬದುಕಬೇಕು? ಏಕೆ ಬದುಕಬೇಕು? ಎಂದೆಲ್ಲ ಎನಿಸುತ್ತದೆ. ಅವನು ಅವಳಿಗಾಗಿ ಮಾಡುತ್ತಿದ್ದ ಎಲ್ಲ ಸಹಾಯ ನಿಲ್ಲಿಸಿಬಿಡುತ್ತಾನೆ. ಆದರೆ ನಿಷ್ಕಲ್ಮಷ ಮನಸಿನ ಪೂರ್ಣಿಮಾ ಅವನಿಗಾಗಿ ಕಾಯುತ್ತಾಳೆ, ತನ್ನನ್ನು ಆದಷ್ಟು ತಪ್ಪಿಸುತ್ತಿದ್ದ ಅಮೃತನನ್ನು ಹುಡುಕಿಕೊಂಡು ಮನೆಗೇ ಹೋಗಿ, "ನೀನೇಕೆ ಮುನಿಸಿ ಕೊಂಡಿದ್ದೀಯ? ನನಗೆ ಬೇರೆ ಯಾವ ದಾರಿ ಇದೆ? ಆ ಇನ್ನೊಂದು ಮನೆಯಲ್ಲಿ ನನ್ನ ಸ್ಥಿತಿ ಹೇಗಿರುವುದೋ? ಅವರು ಹೇಗೆ ನೋಡಿಕೊಳ್ಳುವರೋ?

ನನಗೆ ನೀನು ಧೈರ್ಯ ಹೇಳಬೇಕಿತ್ತು! ಸಹಾನುಭೂತಿ ತೋರಿಸುವ ಬದಲು ಕೋಪಿಸಿಕೊಂಡಿದ್ದೀಯ"ಎಂದು ಗದ್ಗದಳಾದಾಗ, ಅವಳ ದುಃಖ, ಮನದ ವೇದನೆ ಅವನಿಗೆ ತಟ್ಟಿತು. ಪ್ರೇಮದ ಒಂದು ಹೊಸ ಆದರ್ಶವನ್ನು ಪೂರ್ಣಿಮಾ ಅವನೆದುರಿಗೆ ಇಟ್ಟಿದ್ದಳು. "ಪ್ರೇಮವೂ ಒಂದು ಸ್ವಾರ್ಥ ತ್ಯಾಗವೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಆ ತ್ಯಾಗ ಬಹಳ ದೊಡ್ಡದು ಹಾಗೂ ಹೃದಯವನ್ನೇ ಭೇದಿಸುವಂತಾದ್ದು. ಅವನು ಕೊನೆಗೆ ನನ್ನನ್ನು ಕ್ಷಮಿಸು, ಅದು ನನ್ನ ತಪ್ಪು" ಎಂದು ಒಪ್ಪಿಕೊಳ್ಳುತ್ತಾನೆ. ಮತ್ತೆ ಅಮೃತನ ಓಡಾಟ ಪ್ರಾರಂಭ. ಅವಳ ಮದುವೆಯಲ್ಲಿ ಸಂಭ್ರಮದಿಂದ ಕೆಲಸ ಮಾಡುತ್ತಾನೆ, ನಡುಪ್ರಾಯದ, ಆಗಲೇ ಹೊಟ್ಟೆಯೂ ಬಂದಿದ್ದ, ಸ್ವಲ್ಪ ಪೆದ್ದನಂತಿದ್ದ, ಕೀಳು ಬುದ್ಧಿಯ ಅವಳ ಗಂಡ ಪೂರ್ಣಿಮಳಿಗೆ ಅನುರೂಪನಲ್ಲ ಎನಿಸಿದರೂ ಅವನೊಬ್ಬ ದೇವತೆಯೋ ಎನ್ನುವಂತೆ ಅಮೃತ ಸೇವೆ ಮಾಡುತ್ತಾನೆ, ಮೂರು ವರ್ಷಗಳ ನಂತರ ಅಮೃತನ ಮದುವೆಯೂ ಆಗುತ್ತದೆ.

ತವರಿಗೆ ಬಂದ ಪೂರ್ಣಿಮಾಳ ಎರಡು ವರ್ಷಗಳ ಪುಟ್ಟ ಮುದ್ದು ಮಗನೊಂದಿಗೆ ತುಂಬ ಪ್ರೀತಿ ಬೆಳೆಸಿಕೊಂಡು ಅವನ ಅಪ್ಪನಿಗಿಂತ ಹೆಚ್ಚು ಪ್ರೀತಿ ನೀಡುತ್ತಾನೆ. ಇಬ್ಬರಿಗೂ ಮಕ್ಕಳಾಗಿ, ಅವರವರ ಸಂಸಾರದಲ್ಲಿ ಮುಳುಗಿ ಹೋಗಿ, ಅವನಿಗೆ 40 ವರ್ಷಗಳೇ ಆಗುತ್ತವೆ.

ಅಕಸ್ಮಿಕವಾಗಿ ಪೂರ್ಣಿಮಾಳ ಗಂಡ ಮರಣ ಹೊಂದಿ ಅವಳು ವಿಧವೆಯಾಗುತ್ತಾಳೆ. ತನ್ನ ಸತ್ತುಹೋಗಿದ್ದ ಹಳೆಯ ಕನಸುಗಳಿಗೆ ಮರುಜೀವ ಕೊಡುತ್ತಾನೆ, ಅವನ ಗತಿಸಿದ ವಿಷಯ ವಾಸನೆಗಳು ಪುನಃ ಜೀವಂತಗೊಂಡಿದ್ದಂತೂ ನಿಜ ಎಂಬ ಮಾತು ಬರುತ್ತದೆ. ವಿಧವೆಯಾದ ಪೂರ್ಣಿಮಾ ತನ್ನ ಎರಡನೆಯ ಚಿಕ್ಕ ಮಗುವಿನೊಡನೆ ತನ್ನ ಮನೆಗೆ ಬಂದು ಬಿಡುತ್ತಾಳೆ. ಅಮೃತ ಸಂತಸದಿಂದ ಆ ಮನೆಗೆ ಓಡುತ್ತಾನೆ. ತನ್ನ ಜೊತೆಗಾತಿಯನ್ನು ನೋಡಿ ಚಿಕ್ಕಮಗು ಅವಳ ಜೊತೆ ಆಡಲು ತನ್ನ ಮುರಿದ ಆಟಿಕೆಗಳನ್ನು ತೆಗೆದುಕೊಂಡು ಹೋಗುವಂತಿತ್ತು ಅವನ ಸ್ಥಿತಿ ಎಂಬ ಅರ್ಥಪೂರ್ಣ ಉಪಮೆಯೊಂದನ್ನು ಕತೆಗಾರ ನೀಡುತ್ತಾನೆ. ಆ ಮುರಿದ ಆಟಿಕೆಗಳು "ಸತ್ತು ಮರುಜೀವ ಪಡೆದ ಅವನ ಆಸೆಗಳು". ಆದರೆ ಪೂರ್ಣಿಮಾಳನ್ನು ನೋಡಿ ಅವನ ಸಂತಸ, ಉತ್ಸಾಹ ಎಲ್ಲ ಜರ್ರನೆ ಇಳಿದುಹೋಗುತ್ತದೆ. ಬಿಳಿಸೀರೆ ಸೆರಗು ಅವಳ. ಮುಖದ ಅರ್ಧಭಾಗ ಮುಚ್ಚಿಕೊಂಡಿತ್ತು. ಸೊಂಟ ಬಗ್ಗಿ ಹೋಗಿತ್ತು. ತೋಳುಗಳು ಸಣಕಲಾಗಿದ್ದವು. ಕಾಲಿನ ಹಿಂಭಾಗದ ನರಗಳು ಉಬ್ಬಿ ಬಂದಿದ್ದವು. ಬಿಳಿಯ ಬಟ್ಟೆಯಲ್ಲಿ ಸುತ್ತಲ್ಪಟ್ಟ ಹೆಣ ನಿಂತಿದೆಯೋ ಎನಿಸುತ್ತಿತ್ತು.

ವಿಧವೆಗೆ ಸಮಾಜ ವಿಧಿಸಿರುವ ಎಲ್ಲ ಕಟ್ಟುಪಾಡುಗಳಿಗೆ ಬದ್ಧಳಾಗಿ ತನ್ನನ್ನು ಒಪ್ಪಿಸಿಕೊಂಡಿದ್ದ ಅವಳು, ಹುಳಿ, ಉಪ್ಪು, ಖಾರ ಬಿಟ್ಟು ಒಣರೊಟ್ಟಿಗಳಲ್ಲಿ ಬದುಕುತ್ತಿರುತ್ತಾಳೆ, ಅವಳು ತ್ಯಜಿಸಿರುವ ಆಹಾರಗಳನ್ನು ಅವಳ ಚಿಕ್ಕಮ್ಮ ಪಟ್ಟಿಮಾಡಿ ಬೇಸರದಿಂದ "ನೀನಾದರೂ ಅವಳಿಗೆ ಸ್ವಲ್ಪ ಹೇಳು" ಎಂದಾಗ, ಅಮೃತ ಮೇಲೆ ನಿಸ್ತಬ್ದನಾಗಿದ್ದರೂ ಒಳಗೆ ಹೃದಯ ಭೇದಿಸುವ ವೇದನೆ

ಅಡಗಿಸಿಕೊಂಡಿದ್ದ. ಜೀವನಪೂರ್ತಿ ಯಾವುದನ್ನು ತಥ್ಯವೆಂದು ತಿಳಿದಿದ್ದನೋ ಅದು ಕೇವಲ ಮೃಗತೃಷ್ಣೆ! ಎನಿಸಿತು. ಪೂರ್ಣಿಮಾಳ ಕಠಿಣವಾದ ಈ ಆತ್ಮಸಂಯಮ ಮತ್ತು ತಾಪಸಿಗಳಂತಹ ನಡವಳಿಕೆಗಳ ಎದುರಿಗೆ ಅವನ ಎಲ್ಲ ವಿಷಯ, ವಾಸನೆಗಳು, ಪ್ರೇಮದ ಉತ್ಸಾಹಗಳು ಮಾಯವಾಗಿ ಹೋದವು. ಅವನು ಶಾಂತಭಾವದಿಂದ "ನಮ್ಮಂತಹ ಸ್ವಾರ್ಥಿಗಳು ಇಂತಹ ತಪಸ್ವಿನಿಗೆ ತಿಳುವಳಿಕೆ ಹೇಗೆ ತಾನೇ ಹೇಳಬಲ್ಲೆವು? ಇವರ ಕಾಲುಗಳಿಗೆ ನಮಸ್ಕರಿಸುವುದು ನಮ್ಮ ಕರ್ತವ್ಯವೇ ಹೊರತು ಇವರಗೆ ಬುದ್ಧಿ ಹೇಳುವುದಕ್ಕಲ್ಲ". ಕಥೆಯ ಕೊನೆಯ ಸಾಲುಗಳು– "ಪೂರ್ಣಿಮಾ ಮುಖದ ಮೇಲಿದ್ದ ಮೆಲ್ಮುಸುಕು ಸರಿಸುತ್ತ "ನನ್ನ ದೊಡ್ಡ ಮಗ ಈಗಲೂ ನಿಮ್ಮನ್ನು ಕೇಳುತ್ತಿರುತ್ತಾನೆ ಎನ್ನುತ್ತಾಳೆ".

ಪೂರ್ಣಿಮಾ ಅಂದಿನ ಸಮಾಜ, ಸ್ತ್ರೀಯರಿಗೆ ವಿಧಿಸಿದ್ದ ಕಟ್ಟುಪಾಡುಗಳ, ಸಂಪ್ರದಾಯಗಳ ಅಚ್ಚಿನಲ್ಲಿ ಎರಕಹೊಯ್ದ ಹೆಣ್ಣು. ಅ ಪಥದಲ್ಲಿ ಒಂದಿಷ್ಟೂ ವ್ಯತ್ಯಾಸವಾಗದಂತೆ  ಇಡೀ ಜೀವನ ನಡೆದವಳು. ಪೂರ್ಣಿಮಾಳ ಮದುವೆಯಾದಾಗ ಅಡಗಿ ಮೌನವಾಗಿದ್ದ ಅಮೃತನ ಆಸೆಗಳು, ಅವಳ ಗಂಡ ಮರಣಿಸಿದಾಗ ಮತ್ತೆ ಚಿಗಿಯುತ್ತವೆ. ಸಂದರ್ಭ ತನಗೆ ಅನುಕೂಲವಾಗಿದೆ ಎಂದಾಗ ಮತ್ತೆ ಆಸೆಗಳು ಮತ್ತೆ ಮರುಹುಟ್ಟು ಪಡೆಯುತ್ತವೆ. ಆದರೆ ಅಮೃತ, ಪೂರ್ಣಿಮಳ ಗಂಡ ಮರಣಿಸಿದಾಗ, ತನ್ನ ಹೆಂಡತಿ, ಮಕ್ಕಳ ಬಗ್ಗೆ ತನ್ನ ಧರ್ಮದ ಬಗ್ಗೆ, ಕರ್ತವ್ಯಗಳ ಬಗ್ಗೆ ಚಿಂತಿಸದೆ ಸತ್ತಂತಾಗಿದ್ದ ತನ್ನ ಆಸೆ, ಕನಸುಗಳಿಗೆ ಮರುಜೀವ ಕೊಟ್ಟಂತೆ ಪೂರ್ಣಿಮಳ ಮನೆಗೆ ಓಡುವುದು, ನೋಡಿದಾಗ ಮನುಷ್ಯನಿಗೆ ಹಿಡಿಯುವ ಮೋಹ ಸಾಯುವವರೆಗೂ ಬಿಡದಲ್ಲ ಎಂದು ಪರಮಾಶ್ಚರ್ಯವಾಗುತ್ತದೆ, ಆ ಮೂಲಕ ಅಮೃತ ಮತ್ತೆ ಸಾಮಾನ್ಯ ಮನುಷ್ಯನೇ ಆಗಿಬಿಡುತ್ತಾನೆ.

ಪ್ರೀತಿ ಎಂಬ ಪದ ಮಹತ್ತಾದುದು. ಸರಿಯಾದ ವ್ಯಕ್ತಿಗಳ ಸಂಪರ್ಕಕ್ಕೆ ಸಿಕ್ಕರೆ ವಿರಾಡ್ರೂಪ ತಾಳಬಲ್ಲುದು. ಪ್ರೀತಿಯನ್ನು ಪ್ರೀತಿಸುವವರು ಸರಿಯಾದ ಪಥದಲ್ಲಿ ಹೆಜ್ಜೆ ಹಾಕಿದರೆ, ಇಡೀ ಜಗತ್ತನ್ನೇ ಅದರ ಅಮೃತ ಸಾಗರದಲ್ಲಿ ಮುಳುಗಿಸಿ ಧನ್ಯರನ್ನಾಗಿ ಮಾಡಬಲ್ಲುದು. ದುರುಪಯೋಗ ಪಡಿಸಿಕೊಂಡರೆ ಅಷ್ಟೇ ಘೋರವೂ ಆಗಬಲ್ಲುದು!

ಪೂರ್ಣಿಮಾಳ ಮೇಲೆ ಪ್ರೀತಿಯನ್ನಿಟ್ಟ ಅಮೃತ ಅದು ಯಶಸ್ವಿಯಾಗಲು ಅವಳಿಗೆ ಇನ್ನಿಲ್ಲದಂತೆ ಸಹಾಯ ಮಾಡುತ್ತಹೋದ, ಅವಳ ಮದುವೆಯ ನಂತರ ಹತಾಶನಾದರೂ, ಪ್ರೀತಿ ಅವನನ್ನು ಸುಮ್ಮನಿರಗೊಡಲಿಲ್ಲ, ಅವಳ ಎರಡು ವರ್ಷಗಳ ಮಗನನ್ನು ಅಪ್ಪನಿಗಿಂತ ಹೆಚ್ಚಾಗಿ ಮುದ್ದಿಸಿ ಸೇವೆ ಮಾಡಿದ, ಪೂರ್ಣಿಮಳ ತಾಯಿ ಸತ್ತಾಗ ಅವಳ ಕ್ರಿಯಾ ಕರ್ಮಗಳನ್ನು ಮಾಡಿದ, ಅವಳ ಮದುವೆಯಲ್ಲಿ ಸಂಭ್ರಮದಿಂದ ಓಡಾಡಿ ಅವನ ಸ್ಥಾನ ಆಕ್ರಮಿಸಿದ್ದ ಅವಳ ಗಂಡನಿಗೆ, ಎಲ್ಲಿಲ್ಲದ ಪ್ರೀತಿ ತೋರಿಸಿದ. ಒಂದು ಹೆಣ್ಣಿನಮೇಲೆ ಪಲ್ಲವಿಸಿದ ಪ್ರೀತಿ, ನಂತರ ಯಾರು ಯಾರನ್ನೋ ಬಳಸಿಕೊಂಡು ಹಲವು ಜೀವಗಳಿಗೆ ಮಾನವೀಯ ಪ್ರೀತಿ ತೋರಿದುದು ಅವನಿಗೆ ಬಯಸದೆಯೇ ಬಂದ ಭಾಗ್ಯ! ಆ ಪ್ರೀತಿಯನ್ನುಂಡ ಪೂರ್ಣಿಮಾಳ ಮೊದಲ ಮಗ, ಅದನ್ನೆಂದೂ ಕೃತಜ್ಞತೆಯಿಂದ ನೆನೆಸಿಕೊಳ್ಳುತ್ತಾನೆ.

ಹಲವಾರು ಚಿಂತನೆಗಳೆಡೆಗೆ, ಕೈ ಚಾಚುವ, ಜೀವನದ ತಥ್ಯಗಳ ಕಡೆಗೆ ಆಲೋಚಿಸುವಂತೆ ಮಾಡುವ ಪ್ರೇಮ್ ಚಂದ್ ಅವರ ತಥ್ಯ ಜಗತ್ತಿನ ಉತ್ತಮ ಕಥೆಗಳಲ್ಲಿ ಒಂದು.

***

# ಯಾರು ಶ್ರೇಷ್ಠರು

- ವಿಠ್ಠಲ. ಇಜೇರಿ

ಎರಡು ಮುದ್ರಣಗಳನ್ನು (2009, 2024) ಕಂಡ 'ಸ್ವಾಮಿ ವಿವೇಕಾನಂದ ಕಥಾ ಮಂಜರಿ'ಯ ಲೇಖಕರು ಡಾ. ಅನಂತರಾಮು ಅವರು ಕನ್ನಡ ಪ್ರಾಧ್ಯಾಪಕರು. ಸ್ವಾಮಿ ವಿವೇಕಾನಂದರ ಪ್ರವಚನಗಳು ಮತ್ತು ಚರ್ಚೆಗಳಿಂದ ಆಯ್ದ 160 ಕತೆಗಳು ಮತ್ತು ಪೌರಾಣಿಕ ಪ್ರಸಂಗಗಳನ್ನು ಇಲ್ಲಿ ನಿರೂಪಿಸಲಾಗಿದೆ. ಸ್ವಾಮೀಜಿಗೆ ಕಥೆಗಳನ್ನು ರಸವತ್ತಾಗಿ ನಿರೂಪಿಸುವ ಹಂಬಲವಿರಲಿಲ್ಲ. ಚಿಂತನೆಯ ದಾರಿಯಲ್ಲಿ ಜೀವನ ಮೌಲ್ಯಗಳನ್ನು ಸ್ಪಷ್ಟವಾಗಿ ಅರ್ಥವಾಗುವ ರೀತಿಯಲ್ಲಿ ಸಂದರ್ಭಕ್ಕೆ ಅನುಗುಣವಾಗಿ ಕಥೆಗಳನ್ನು ಜೋಡಿಸುತ್ತಿದ್ದರು. ರಾಮಾಯಣ, ಮಹಾಭಾರತ, ಉಪನಿಷತ್ತುಗಳು, ರಾಜಮನೆತನದ ವೀರರ, ಶೂರರ, ಚರಿತ್ರವಾನರ ಉದಾಹರಣೆಗಳನ್ನು ಕತೆಗಳ ಮೂಲಕ ನೀಡುತ್ತಿದ್ದರು. ಯುವ ಜನಾಂಗಕ್ಕೆ ದೇಶಭಕ್ತಿ, ದೈವಭಕ್ತಿ, ಸಂಕಲ್ಪಶಕ್ತಿ, ಆತ್ಮಶ್ರದ್ಧೆ, ಕಷ್ಟಸಹಿಷ್ಣುತೆ ಮೊದಲಾದ ಸದ್ಗುಣಗಳನ್ನು ಬೋಧಿಸುತ್ತಿದ್ದರು. ಮಾನವ ಜನ್ಮಕ್ಕೆ ಬಂದ ನಾವು ಇದರಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳುವದು ಹೇಗೆ, ಎಂಬುದನ್ನು ಅರಿಯಲು ಈ ಕಥೆಗಳು ಸಹಾಯ ಮಾಡುತ್ತವೆ.

ಸನಾತನ ಧರ್ಮದ ಬ್ರಹ್ಮಚರ್ಯ, ಗೃಹಸ್ಥ, ಸಂನ್ಯಾಸ, ವಾನಪ್ರಸ್ಥ ಹೀಗೆ ಆಶ್ರಮಗಳ ಕುರಿತಂತೆ ಸ್ವಾಮಿ ವಿವೇಕಾನಂದರು ಹೇಳುತ್ತಿದ್ದ ಕಥೆಯೊಂದನ್ನು ನೋಡೋಣ.

ಹಿಂದೆ ಗಾಂಧಾರ ದೇಶದಲ್ಲಿ ಚಂದ್ರವರ್ಮನೆಂಬ ಅರಸನಿದ್ದನು. ಅವನಿಗೆ ಗೃಹಸ್ಥನು ಶ್ರೇಷ್ಠನೋ, ಸಂನ್ಯಾಸಿ ಶ್ರೇಷ್ಠನೋ ಎಂಬ ಬಗ್ಗೆ ಜಿಜ್ಞಾಸೆ ಇತ್ತು. ತನ್ನ ರಾಜ್ಯಕ್ಕೆ ಬಂದ ಸಂನ್ಯಾಸಿಗಳನ್ನು ಅರಮನೆಗೆ ಕರೆಸಿ ಸತ್ಕರಿಸಿ, ಕಾಣಿಕೆಗಳನ್ನು ನೀಡಿ ಅವರಿಗೆ "ಮಹಾನುಭಾವರೇ, ನಿಮ್ಮ ದೃಷ್ಟಿಯಲ್ಲಿ ಗೃಹಸ್ಥಾಶ್ರಮ ಶ್ರೇಷ್ಠವೇ, ಸಂನ್ಯಾಸ ಆಶ್ರಮ ಶ್ರೇಷ್ಠವೇ?" ಎಂದು ಪ್ರಶ್ನಿಸುತ್ತಿದ್ದ. ಅವರು ಸಂನ್ಯಾಸಿಗಳು "ಪ್ರಭು, ಲೋಕ ಕಲ್ಯಾಣಕ್ಕಾಗಿ ಎಲ್ಲ ಸುಖಗಳನ್ನು ತ್ಯಾಗಮಾಡಿ ಸರ್ವರ ಹಿತಕ್ಕಾಗಿ ಜಪ, ತಪಾದಿಗಳಲ್ಲಿ ತೊಡಗುವ ಸಂನ್ಯಾಸ ಆಶ್ರಮ ಶ್ರೇಷ್ಠ" ಅನ್ನುತ್ತಿದ್ದರು. ಅರಸ ಚಂದ್ರವರ್ಮ "ಹಾಗೆ ಹೇಳಿದರೆ ಆಗದು, ಸಿದ್ಧಮಾಡಿ ತೋರಿಸಿ" ಎಂದು ಹೇಳುತ್ತಿದ್ದ. ಅವರು "ಪ್ರಭು, ನಮ್ಮ ಜೀವನದ ರೀತಿ ಇದು. ನೀವೇ ನೋಡಿ ತಿಳಿದುಕೊಳ್ಳಿ" ಅನ್ನುತ್ತಿದ್ದರು. ಮಹಾರಾಜ, ಸಂನ್ಯಾಸ ಹೇಗೆ ಶ್ರೇಷ್ಠ ಎಂಬುದನ್ನು ತೋರಿಸಿಕೊಡದ ನೀವೆಂಥ ಸಂನ್ಯಾಸಿಗಳು, ಹೋಗಿ ಗ್ರಹಸ್ಥರಾಗಿ" ಗದರಿಸಿ ಕಳಿಸುತ್ತಿದ್ದ.

ಇನ್ನು ಗೃಹಸ್ಥರಿಗೆ "ಗೃಹಸ್ಥಾಶ್ರಮ ಅದ್ಹೇಗೆ ಶ್ರೇಷ್ಠ ಹೇಳಿ?" ಅನ್ನುತ್ತಿದ್ದ. ಅವರು ಸಂನ್ಯಾಸಿಗಳ ಪೋಷಣೆ ಗೃಹಸ್ಥರಿಂದ ಆಗಬೇಕು, ಸಂನ್ಯಾಸಿಗಳಿಗೆ ಜನ್ಮ ಕೊಟ್ಟವರು ಗೃಹಸ್ಥರು, ಆದುದರಿಂದ ಅವರು ಶ್ರೇಷ್ಠ" ಅಂದಾಗ, ಅವರಿಗೂ "ಸ್ವಾಮಿ, ಹಾಗೆ ಹೇಳಿದರೆ ಸಾಲದು, ಸಿದ್ಧಮಾಡಿ? " ಎಂದು ಪ್ರತಿ ಸವಾಲು ಹಾಕಿ ಮರ್ಯಾದೆ ತೆಗೆಯುತ್ತಿದ್ದ.

ಒಮ್ಮೆ ಸತ್ಯಾನಂದ ಎಂಬ ಸಂನ್ಯಾಸಿ ಅರಸ ಚಂದ್ರವರ್ಮನ ಬಳಿ ಬಂದ. ಅರಸ ಅವನಿಗೂ ಅದೇ ಪ್ರಶ್ನೆ ಕೇಳಿದಾಗ ಸತ್ಯಾನಂದ "ಪ್ರಭು, ಎಲ್ಲ ಆಶ್ರಮಗಳೂ ಆಯಾ ಸಮಯದಲ್ಲಿ ಅವರು ನಡೆಸುವ ಉತ್ತಮ ಜೀವನದ ಮೂಲಕ ಶ್ರೇಷ್ಠ, ಇದನ್ನು ತಮಗೆ ತೋರಿಸಲೂ ಬಲ್ಲೆ, ಆದರೆ ಅದಕ್ಕಾಗಿ ನೀವು ರಾಜ್ಯಭಾರ ತ್ಯಜಿಸಿ ಕೆಲವು ದಿನ ನನ್ನೊಡನೆ ಬರಬೇಕು" ಅಂದ. ಚಂದ್ರವರ್ಮ ರಾಜ್ಯವನ್ನು ಮಂತ್ರಿಗಳ ಸುಪರ್ದಿಗೆ ಒಪ್ಪಿಸಿ ಸಂನ್ಯಾಸಿಯೊಡನೆ ನಡೆದುಬಿಟ್ಟ.

ಅವರಿಬ್ಬರೂ ಅನೇಕ ರಾಜ್ಯಗಳನ್ನು ದಾಟಿ ಕಾಶ್ಮೀರ ರಾಜ್ಯಕ್ಕೆ ಬಂದರು. ಅದನ್ನು ಮಿತ್ರವೃಂದ ಎಂಬ ಅರಸನು ಆಳುತ್ತಿದ್ದ. ಅವನಿಗೆ ಇಂದುಮತಿ ಎಂಬ ಸುವಿಚಾರಿಯಾದ ಸೌಂದರ್ಯವತಿ ಕನ್ಯೆ ಇದ್ದಳು. ಆಕೆಯ ಮದುವೆಗೆ ಸ್ವಯಂವರವನ್ನು ಏರ್ಪಡಿಸಿದ್ದ. ಹಲವಾರು ದೇಶಗಳ ಯುವ ರಾಜಕುಮಾರರು ಸುಖಾಸೀನರಾಗಿ ತಮ್ಮ ಅದೃಷ್ಟ ಪರೀಕ್ಷೆಗೆ ಕಾದಿದ್ದರು. ಚಂದ್ರವರ್ಮ ಮತ್ತು ಸತ್ಯಾನಂದರು ಆ ಸಭೆಗೆ ವೀಕ್ಷಣೆಗೆ ಬಂದಿದ್ದರು. ರಾಜಕುಮಾರಿ ಸಖಿಯರೊಡನೆ ಸುವಾಸನೆಯುಕ್ತ

ಮಲ್ಲಿಗೆ, ಸಂಪಿಗೆ ಜಂಟಿಯಾಗಿ ಹೆಣೆದ ಹಾರದೊಂದಿಗೆ ಸಭೆಯಲ್ಲೊಮ್ಮೆ ನಡೆದು ಬಂದು ಆ ಸಭೆಯಲ್ಲಿ ಕೊನೆಯಲ್ಲಿ ನಿಂತಿದ್ದ ಯುವ ಸಂನ್ಯಾಸಿಯ ಕೊರಳಿಗೆ ಮಾಲೆ ಹಾಕಿದಳು. ಸಂನ್ಯಾಸಿ "ನಾನು ಮದುವೆಯಾಗಲು ಬಂದವನಲ್ಲ, ನಾನೊಬ್ಬ ಅಲೆಮಾರಿ ಸಂನ್ಯಾಸಿ, ಒಂದು ದಿನದ ಭೋಜನಕ್ಕೆ ಬಂದವನು" ಎನ್ನುತ್ತಾ ಕೊರಳೊಳಗಿನ ಹಾರ ತೆಗೆದು ರಾಜಕುಮಾರಿಯತ್ತ ಎಸೆದ. ಅದು ಹೋಗಿ ರಾಜಕುಮಾರಿಯ ಕೊರಳನ್ನು ಅಲಂಕರಿಸಿತು. ಮಹಾರಾಜ ಎದ್ದು ಬಂದು ಯುವ ಸಂನ್ಯಾಸಿಗೆ ಅಭಿನಂದಿಸುತ್ತಾ, ‘‘ನೀವು ಪರಸ್ಪರ ಹಾರ ವಿನಿಮಯ ಮಾಡಿಕೊಂಡಿರುವಿರಿ, ದಂಪತಿಗಳಾದಿರಿ, ಈಗ ಅರ್ಧ ಕಾಶ್ಮೀರ ರಾಜ್ಯ ನಿನ್ನದು, ನನ್ನ ನಂತರ ಈ ರಾಜ್ಯಕ್ಕೆ ನೀನೇ ಅರಸ" ಅಂದ. ಸಂನ್ಯಾಸಿ "ನಾನು ಲೌಕಿಕ ಸುಖ, ಸಂಪತ್ತನ್ನು ತ್ಯಜಿಸಿ ಬಂದವನು. ನನಗೆ ಇದಾವುದೂ ಬೇಕಿಲ್ಲ" ಎಂದು ಸಭೆಯಿಂದ ಹೊರಟು ಹೋದ. ಇಂದುಮತಿ "ನಾನು ಅವರನ್ನು ವರಿಸಿದ್ದೇನೆ, ಅವರು ಎಲ್ಲಿ ಇರುವರೋ, ಅಲ್ಲಿ ನನ್ನ ಸ್ಥಾನ’’ ಎಂದು ಯುವ ಸಂನ್ಯಾಸಿಯ ಬೆನ್ನು ಹತ್ತಿದಳು. ಅವರಿಬ್ಬರನ್ನು ಅನುಸರಿಸಿ ಸಂನ್ಯಾಸಿ ಸತ್ಯಾನಂದ, ಮಹಾರಾಜ ಚಂದ್ರವರ್ಮ ಹೊರಟರು. ಯುವ ಸಂನ್ಯಾಸಿ ಸಂಜೆಯ ವೇಳೆಗೆ ಕಾಡೊಂದನ್ನು ಹೊಕ್ಕು ತಪ್ಪಿಸಿಕೊಂಡುಬಿಟ್ಟ. ದಾರಿಕಾಣದೆ ಇಂದುಮತಿ ಅಳುತ್ತ ಕುಳಿತುಬಿಟ್ಟಳು. ಆ ವೇಳೆಗೆ ಅಲ್ಲಿಗೆ ಬಂದ ಚಂದ್ರವರ್ಮ ಮತ್ತು ಸತ್ಯಾನಂದ ಆಕೆಯನ್ನು ಸಮಾಧಾನ ಪಡಿಸಿ, ‘‘ಬೆಳಿಗ್ಗೆ ಮುಂದೇನು ನೋಡೋಣ" ಎಂದು ಅಲ್ಲಿಯೇ ಮರದಡಿಯಲ್ಲಿ ವಿಶ್ರಮಿಸಿದರು. ರಾತ್ರಿ ಚಳಿ ಜಾಸ್ತಿ ಇತ್ತು. ಮರದ ಮೇಲೆ ಒಂದು ಹಕ್ಕಿಗಳ ಸಂಸಾರ ವಾಸವಿತ್ತು. ಹಿರಿಯ ಹಕ್ಕಿ ಅದೇಲ್ಲಿಂದಲೋ ಒಂದಿಷ್ಟು ಬೆಂಕಿ ತಂದು ಹಾಕಿತು. ಸತ್ಯಾನಂದ ಒಂದಿಷ್ಟು ತರಗೆಲೆಗಳನ್ನು ತಂದು ಬೆಂಕಿ ಹೊತ್ತಿಸಿದ. ಆಗ ಮರದ ಮೇಲಿದ್ದ ಹಿರಿಯ ಹಕ್ಕಿ "ಪಾಪ, ಅವರು ಎಲ್ಲಿಂದ ಬಂದಿದ್ದಾರೋ, ಎಷ್ಟು ಹಸಿದಿರುವರೋ, ನಾನು ಆ ಬೆಂಕಿಯಲ್ಲಿ ಬಿದ್ದುಬಿಡುವೆ, ನನ್ನ ಮಾಂಸ ಅವರ ಊಟವಾಗಲಿ" ಎಂದು ಬೆಂಕಿಗೆ ಹಾರಿತು. ಸ್ವಲ್ಪ ಸಮಯ ಕಳೆದ ಮೇಲೆ ಇನ್ನೊಂದು ಪಕ್ಷಿ, ಮರಿಪಕ್ಷಿಗೆ ‘‘ಅವರು ಮೂರು ಜನರಿದ್ದಾರೆ, ನಿನ್ನ ತಂದೆಯ ಮಾಂಸ ಅವರಿಗೆ ಸಾಕಾಗಲ್ಲ, ಅವರ ಊಟಕ್ಕೆ ನಾನೂ ಪ್ರಾಣ ಕೊಡುವೆ" ಎಂದು ಹೇಳಿ ಆ ಪಕ್ಷಿಯೂ ಬೆಂಕಿಗೆ ಬಿತ್ತು. ಪಕ್ಷಿಗಳ ತ್ಯಾಗವನ್ನು ಮೆಚ್ಚಿಕೊಳ್ಳುತ್ತ ಮರದ ಅಡಿಯಲ್ಲಿದ್ದ ಮೂವರೂ ಊಟ ಮಾಡಿದರು.

ಮರುದಿನ ಬೆಳಿಗ್ಗೆ ಇಂದುಮತಿಗೆ, "ಆ ಯುವ ಸಂನ್ಯಾಸಿ ಮಹಾನ್ ತ್ಯಾಗಿ. ಅವನು ಯಾವುದೇ ಆಮಿಷಕ್ಕೆ ಒಳಗಾಗುವವನಲ್ಲ, ಅಂಥವರನ್ನು ಅವರ ಪಾಡಿಗೆ ಬಿಡಬೇಕು" ಎಂದು ಹೇಳಿದ ಸತ್ಯಾನಂದ ಆಕೆಯನ್ನು ಕಾಶ್ಮೀರ ರಾಜ್ಯಕ್ಕೆ ಕರೆತಂದರು. ನಂತರ ಸತ್ಯಾನಂದ ಮಹಾರಾಜ ಚಂದ್ರವರ್ಮನಿಗೆ "ಮಹಾರಾಜಾ, ಎಂಥ ಪ್ರಲೋಭನೆಗೂ ಒಳಗಾಗದೆ ಆ ಯುವ ಸಂನ್ಯಾಸಿ, ಹೆಣ್ಣು, ಮಣ್ಣು, ಹೊನ್ನುಗಳನ್ನು ಕಾಲಕಸದಂತೆ ಕಂಡ. ಅವನೊಬ್ಬ ಶ್ರೇಷ್ಠ ಸಂನ್ಯಾಸಿ ಮತ್ತು ಪರಹಿತಕ್ಕಾಗಿ ಪ್ರಾಣತ್ಯಾಗ ಮಾಡಿದ ಆ ಪಕ್ಷಿ ದಂಪತಿಗಳು ಶ್ರೇಷ್ಠ ಗೃಹಸ್ಥರ ಉದಾಹರಣೆ" ಎಂದು ಹೇಳಿದ. ಚಂದ್ರವರ್ಮ ಈ ಎರಡೂ ಪ್ರಸಂಗಗಳಿಗೆ ಸಾಕ್ಷಿಯಾಗಿದ್ದ. ವೈಯಕ್ತಿಕ ನಡವಳಿಕೆಗಳು ಆಯಾ ವ್ಯಕ್ತಿಗಳು ಶ್ರೇಷ್ಠರೇ ಎಂದು ನಿರೂಪಿಸುತ್ತವೆ ಎಂಬುದನ್ನು ಅರಿತುಕೊಂಡ.

***

# ರವಿ ಬೆಳಗೆರೆಗೊಂದು ಪತ್ರ

– ಪೂರ್ಣಿಮ ಭಗವಾನ್

ಕ್ಷೇಮ ಶ್ರೀ 12/04.2025

ಹಲೋ ರವಿ ಅಣ್ಣ, ಇಲ್ಲಿ ನಾವೆಲ್ಲರೂ ಕ್ಷೇಮ. ಅಲ್ಲಿ ನೀನು ಹೇಗಿದ್ದೀಯಾ? ಹೇಗಿದ್ದೀಯ ಅಂತ ನಿನ್ನನ್ನೇನ್ ಕೇಳೋದು, ಎಲ್ಲಿದ್ದರೂ ನೀನು ಚೆನ್ನಾಗಿಯೇ ಇರ್ತಿಯಾ, ಆ ವಿಶ್ವಾಸ ನನಗಿದೆ. ಅಭ್ಯಾಸ ಬಲದಿಂದ ಬೇರೆಯವರನ್ನು ಕೇಳಿದಂತೇ ನಿನ್ನನ್ನೂ ಕೇಳಿದೆ, ತಪ್ಪು ತಿಳಿದುಕೊಳ್ಳಬೇಡ. ಏನೇ ಆಗಲಿ ನೀನಿಲ್ಲದೆ ನಮಗೆ ಒಂದು ಬೇಜಾರಂತೂ ಇದ್ದೇ ಇದೆ. ಅದೇನೂ ಅಂತ ತಿಳಿದುಕೊಳ್ಳುವ ಕುತೂಹಲ ಅಲ್ವಾ ನಿನಗೆ, ಊಹೆ ಮಾಡು ನೋಡೋಣ. ಊರೂರು ಸುತ್ತಿಕೊಂಡು ಬಂದು ಅಲ್ಲಿನ ಜನಜೀವನದ ವ್ಯಕ್ತಿಚಿತ್ರಣ, ಅನುಭವಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳುವವನು ಎಲ್ಲಿಗೆ ಹೋದ ಅಂತಾ, ನಿನ್ನ ಈ ಊಹೆಗಳೆಲ್ಲಾ ತಪ್ಪು, ನಿನ್ನನ್ನು ಇನ್ನು ಕಾಯಿಸುವುದಿಲ್ಲಾ, ನಾನೇ ಹೇಳಿಬಿಡ್ತೀನಿ ಬಿಡು. ನಿನ್ನ ಸಾರಥ್ಯದಲ್ಲಿ ಬರುತ್ತಿದ್ದ ಹಾಯ್ ಬೆಂಗಳೂರ್, ಓ ಮನಸೇ, ಪತ್ರಿಕೆಗಳಿಗೆ ಸಮಾನವಾಗಿರುವ ಪತ್ರಿಕೆಗಳು ಮತ್ತೆ ಬರಲೇ ಇಲ್ಲ. ಬರಹಗಳಂತೂ ಒಂದು ರೀತಿಯಲ್ಲಿ ಶಾಲಿನಲ್ಲಿ ಸುತ್ತಿ ಛಡಿ ಏಟು ಕೊಡೋದು ಅಂತಾರಲ್ಲಾ ಹಾಗಿರುತ್ತಾ ಇದ್ದವು. ನಿನ್ನಂತೆ ಇದ್ದುದನ್ನು ಇದ್ದಂತೆಯೇ ಹೇಳುವ ಧೈರ್ಯ ಇಂದಿನ ಪತ್ರಕರ್ತರಲ್ಲಿ, ಮಾಧ್ಯಮ ವರದಿಗಾರರಲ್ಲಿ, ಖಂಡಿತಾ ಇಲ್ಲ. ನಿನ್ನ ಹಾಗೆಯೇ ನಿಜವನ್ನು ಹೇಳಿ ತಪ್ಪುಗಳನ್ನು ತಪ್ಪಿತಸ್ಥರ ಎದುರಿಗೇ ತೋರಿಸಿ ಅವರು ತಮ್ಮ ಬೆನ್ನನ್ನು ಒಮ್ಮೆ ತಾವೇ ಮುಟ್ಟಿ ನೋಡಿಕೊಳ್ಳುವಂತೆ ಮಾಡುತ್ತಿದ್ದರು ರಂಗಕರ್ಮಿ ಮಾಸ್ಟರ್. ಹಿರಣ್ಣಯ್ಯನವರು. ನಿನ್ನ ವಿಶಿಷ್ಟ ಶೈಲಿಯ ದಿಟ್ಟತನದ ಬರವಣಿಗೆ ಬಹಳ ಅಪರೂಪ. ಅದರಲ್ಲೂ ಕನ್ನಡ ಸಾಹಿತ್ಯದಲ್ಲಿ ಭೂತಗನ್ನಡಿ ಇಟ್ಟುಕೊಂಡು ಹುಡುಕಿದರೂ ಸಿಗುವುದಿಲ್ಲ ರವಿಯಣ್ಣಾ.

ಇನ್ನು ಬದುಕಿನ ಬಗ್ಗೆ ನಿನ್ನ ದೃಷ್ಟಿಕೋನವಂತೂ ಎಲ್ಲರೂ ಮೆಚ್ಚಿ ಅನುಸರಿಸುವಂತಹದ್ದು. ಬದುಕಿನೆಡೆಗೆ ನಮ್ಮ ದೃಷ್ಟಿ ಹೇಗಿರುತ್ತೆ ಅನ್ನುವುದರ ಮೇಲೆ ನಮ್ಮ ಮಾತು ಆಧಾರವಾಗಿರುತ್ತದೆ, ಆ ಮಾತುಗಳು ನಮ್ಮ ವ್ಯಕ್ತಿತ್ವವನ್ನು ಸುಲಭವಾಗಿ ಬಿಚ್ಚಿಟ್ಟುಬಿಡುತ್ತದೆ. ಉತ್ಸಾಹೀ ಯುವಕರು ಸಾಧನೆಯ ಬಗ್ಗೆ ಮಾತನಾಡಿದರೆ, ಅದೇ ಒಬ್ಬ ರೌಡಿ ಬದುಕಿನ ಬಗ್ಗೆ ಕಷ್ಟದಿಂದ ಬೇಜವಾಬ್ದಾರಿಯಾಗಿ ಮಾತನಾಡುತ್ತಾನೆ. ಬದುಕನ್ನು ಅನುಭವಿಸಬೇಕಾದರೆ ಶ್ರದ್ಧೆ, ಗುರಿ ಇರಬೇಕು. ನಮ್ಮ ಆರೋಗ್ಯ ಮತ್ತು ಸುಖಗಳ ಜವಾಬ್ದಾರಿ ನಮ್ಮದೇ. ಬೇರೆ ಎಲ್ಲರಿಗಿಂತಲೂ ಹೆಚ್ಚು ಕಾಲ ನಮ್ಮ ಜೊತೆಯಲ್ಲಿ ಇರುವುದು ನಮ್ಮ ದೇಹ, ನಮ್ಮ ಮನಸ್ಸು. ನಮ್ಮ ಆತ್ಮೀಯ ಗೆಳೆಯ ಅಂತಂದ್ರೆ ನಾವೇ. ನಮ್ಮ ಸೋಲು-ಗೆಲುವು, ಸುಖ-ದುಃಖ, ಅಳು-ನಗು ಎಲ್ಲದಕ್ಕೂ ನಾವೇ ಹೊಣೆ, ಬೇರೆಯವರ ಬಗ್ಗೆ ಆರೋಪ ಮಾಡಿ ಅವರನ್ನು ದೂಷಿಸುವುದು ಸರಿಯಲ್ಲ, ನಮ್ಮ ಬದುಕಿನ ಜವಾಬ್ದಾರಿ ನಾವೇ ಹೊರಬೇಕು ಎನ್ನುವುದು ಎಷ್ಟು ಸತ್ಯ ಅನ್ನುವುದನ್ನು ನನ್ನ ಅನುಭವದಲ್ಲಿ ಕಂಡುಕೊಂಡಿದ್ದೇನೆ. ಅಂದಿನ ನಿನ್ನ ಪ್ರೀತಿಯ ನುಡಿಗಳು ಇಂದು ನನ್ನ ಬದುಕಿನಲ್ಲಿ ದಾರಿದೀಪವಾಗಿವೆ. ನಾನು ಇಂದು ಸುಖವಾಗಿ, ಸಂತೋಷವಾಗಿ ಇರುವುದರಲ್ಲಿ ನಿನ್ನ ಪಾಲು ಸಹ ಇದೆ. ಹಾಂ, ನಿನ್ನ ಪಾಲಿದೇಂತ ಅಂದೇ ಅಂತ ಮತ್ತೆ ಬಯ್ಯೋದಕ್ಕೆ ಶುರು ಮಾಡಬೇಡ, ಅಥವಾ ಅಟ್ಟದಲ್ಲಿ ಕುಳಿತು ಬಿಡಬೇಡ, ನಿನ್ನ ಪಾಲು ಅಂದ್ರೆ, ನೀನ್ ಹೇಳಿದ ಹಿತನುಡಿಗಳು, ಬದುಕಿನ ಬಗೆಗಿನ ಸಕಾರಾತ್ಮಕತೆ, ಒಳ್ಳೆಯ ದೃಷ್ಟಿಕೋನ ಅಷ್ಟೇ, ಅದಕ್ಕಿಂತ ಹೆಚ್ಚಿಗೆ ಏನೂ ಇಲ್ಲ.

ಪ್ರತಿ ಅಂಧಕಾರಕ್ಕೆ ಒಂದು ಸೂರ್ಯೋದಯ ಇರುತ್ತಲ್ಲಾ ಹಾಗೆಯೇ ಒಂದು ಅಂತ್ಯಕ್ಕೆ ಮತ್ತೊಂದು ಹೊಸ ಆರಂಭ ಇದ್ದೇ ಇರುತ್ತದೆ, ಸೋಲು ಗೆಲುವಿನ ಸೋಪಾನ. ಶಿಸ್ತಿನ ಜೀವನ, ನಮ್ಮ ಶಕ್ತಿಯಲ್ಲಿ ನಮಗೆ ನಂಬಿಕೆ, ಆತ್ಮವಿಶ್ವಾಸ, ಶ್ರದ್ಧೆ, ಓದು, ಅಧ್ಯಯನ ಎಲ್ಲವೂ ನಮ್ಮ ಯಶಸ್ಸಿನ ಹಾದಿಯ ಮೆಟ್ಟಿಲುಗಳು. ಗುರಿ ಮುಟ್ಟಬೇಕಾದರೆ ಅವರವರ ಸೈಕಲ್ ಅವರೇ ತುಳಿಯಬೇಕು ಅನ್ನುವುದಂತೂ ಸಾರ್ವಕಾಲಿಕ ಸತ್ಯ. ಸತತ ಪರಿಶ್ರಮ, ದುಡಿಮೆಯಿಂದ ನಿಧಾನವಾಗಿಯಾದರೂ ಗುರಿ ತಲುಪಬಹುದು. ಅನುಕರಣೆ ಬೇಡ, ಸ್ವಂತಿಕೆ ಇರಲಿ. ಚಿಕ್ಕ ಮಕ್ಕಳಾಗಿದ್ದಾಗ ಮಾತು, ನಡಿಗೆ, ಇನ್ನೂ ಬಹಳಷ್ಟು

ವಿಷಯಗಳನ್ನು ಅನುಕರಣೆಯಿಂದ ಕಲಿತಿರುತ್ತೇವೆ. ಹಾಗೆಂದು ಜೀವಮಾನಪರ್ಯಂತ ಬೇರೆಯವರನ್ನು ಅನುಸರಿಸಬಾರದು. ಸಾಮಾನ್ಯ ಹಿನ್ನೆಲೆಯಿಂದ ಬಂದ ಅಬ್ದುಲ್ ಕಲಾಂರವರು ಭಾರತದ ಅತ್ಯುತ್ತಮ ವಿಜ್ಞಾನಿ, ರಾಷ್ಟ್ರಪತಿಗಳಲ್ಲಿ ಒಬ್ಬರಾಗಿದ್ದಾರಲ್ಲಾ ಹಾಗೇ, ಮನೋಬಲ, ಛಲ, ವಿಶ್ವಾಸಗಳು ನಮ್ಮನ್ನು ಉನ್ನತಿಗೆ ಕೊಂಡೊಯ್ಯುವುದರಲ್ಲಿ ಅನುಮಾನವೇ ಇಲ್ಲ ಎಂದು ಹೇಳುತ್ತಾ, ನೀನೂ ಎತ್ತರಕ್ಕೆ ಬೆಳೆದು ಜಗತ್ತಿಗೆ ತೋರಿಸಿದೆ. ಪ್ರಾರ್ಥನಾ ಶಾಲೆಯನ್ನು ಆರಂಭಿಸಿ ಮುನ್ನೂರಕ್ಕೂ ಅಧಿಕ ಮಂದಿಗೆ ಉದ್ಯೋಗ ಒದಗಿಸಿ, ಆರು ಸಾವಿರಕ್ಕೂ ಹೆಚ್ಚು ಮಕ್ಕಳಿಗೆ ವಿದ್ಯಾಭ್ಯಾಸ ನೀಡಿದ ನಿನ್ನ ಸಾಧನೆ ಅಪಾರ.

ನಮಗೇ ತಿಳಿಯದಂತೆ ನಮ್ಮನ್ನು ಆವರಿಸಿರುವ ನಕಾರಾತ್ಮಕತೆ ದುರಭ್ಯಾಸಗಳನ್ನು ಬಿಟ್ಟು, ಹಿಂದಕ್ಕೆ ಎಳೆಯುವ ಸರಪಳಿಯಿಂದ ಬಿಡಿಸಿಕೊಂಡು ಮುನ್ನಡೆದು ಯೋಚನಾಲಹರಿಯನ್ನು ನಿಯಂತ್ರಣಕ್ಕೆ ತೆಗೆದುಕೊಂಡು ದೊರಕಿರುವ ಸಮಯ, ಅವಕಾಶಗಳ ಸದ್ಬಳಕೆ ಮಾಡಿಕೊಂಡು, ಬದಲಾವಣೆಯನ್ನು ಸ್ವೀಕರಿಸಿ, ವೃಥಾ ವ್ಯರ್ಥವಾಗುವ ಶಕ್ತಿಯನ್ನು ಸಕಾರಾತ್ಮಕ ಕ್ರಿಯೆಯಲ್ಲಿ ತೊಡಗಿಸಿ ಎದುರಾದ ಹತಾಶೆಯನ್ನು ಮೆಟ್ಟಿ ನಿಲ್ಲುವ ಧೈರ್ಯ ನೀಡಿದ್ದು ನಿನ್ನ ಸಾಹಿತ್ಯಕ ಒಡನಾಟ. ನಾನು ಇಂದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಬ್ಬ ಲೇಖಕಿಯಾಗಿ ಗುರುತಿಸಿಕೊಂಡಿದ್ದೇನೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನನ್ನ ಸ್ವರಚಿತ ಕವನಗಳ ಎರಡು ಕವನ ಸಂಕಲನಗಳು – 1. ಸಂಚಲನ–ಸಂವಹನ (30 ಕವನಗಳು), 2. ಸಂವಹನ–ಸಂವರ್ಧನ (112 ಕವನಗಳು) ಹಾಗೂ ಒಂದು ಸ್ವರಚಿತ ವಚನ ಸಂಕಲನ 'ವಚನ ಪೌರ್ಣಮಿ' (365 ವಚನಗಳು) – ಒಟ್ಟು ಮೂರು ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದ್ದೇನೆ. ಯೂಟ್ಯೂಬ್ ಮತ್ತು ಇನ್ಸ್ಟಾಗ್ರಾಮ್ನಲ್ಲೂ ನನ್ನ ಕವನಗಳು, ಬರಹಗಳು ಇವೆ. ನಿನಗೇನಾದರೂ ಬೇಜಾರಾಗುತ್ತಾ ಇದ್ದು, ಸ್ವಲ್ಪ ಸಮಯ ಇದ್ದರೆ ನನ್ನ ಪೋಸ್ಟ್ ಓದಿ ನಿನ್ನ ಅನಿಸಿಕೆಗಳನ್ನು ತಿಳಿಸು. ಮತ್ತಷ್ಟು ಸಾಹಿತ್ಯ ಕೃಷಿ ಮಾಡಲು ಸ್ಫೂರ್ತಿಯಾಗುತ್ತದೆ.

ನನ್ನ ಯೂಟ್ಯೂಬ್ ಲಿಂಕ್ http://www.youtube.com/@poornimab6690
ಇನ್ಸ್ಟಾಗ್ರಾಮ್ ಪೇಜ್ : poornima.bhagavan

ಬರೆಯಲು ಇನ್ನೂ ಬೇಕಾದಷ್ಟಿದೆ. ಮತ್ತೊಮ್ಮೆ ಬರೆಯುತ್ತೇನೆ. ಬೈ ಅಣ್ಣಾ.....

ಇಂತೀ ನಿನ್ನ ಪ್ರೀತಿಯ ಅಭಿಮಾನಿ.

*ಪೂರ್ಣಿಮ ಭಗವಾನ್*

ಬೆಂಗಳೂರು. – 9481200863

***

# ಬಹುರೂಪಿ ಸಾಲ

– ಟಿ.ಆರ್.ಉಷಾರಾಣಿ

ಹೀಗೊಂದು ಒಗಟು– ನನಗೆ ಆಕಾರವಿಲ್ಲ, ರೂಪವಿಲ್ಲ, ಪರಿಮಿತಿ ಇಲ್ಲ ಆದರೂ ಬೆಳೆಯುತ್ತೇನೆ, ಮಿತ್ರನಲ್ಲ, ಶತ್ರುವಲ್ಲ ಬಂಧು ಬಳಗವಲ್ಲ, ರಕ್ತ ಸಂಬಂಧವಲ್ಲ, ಶಾಸ್ತ್ರ ಸಂಬಂಧವಲ್ಲ ಆದರೂ ಎಲ್ಲೆಡೆ ಇದ್ದೇನೆ. ಅವಿನಾಭಾವ ಸಂಬಂಧಿ ಅದೃಶ್ಯ ಆತ್ಮ. ಹಾಗಾದರೆ ನಾನು ಯಾರು? ಇದಕ್ಕೆ ಉತ್ತರ 'ಸಾಲ'.

ಒತ್ತುಗಳಿಲ್ಲದ, ಕಾಗುಣಿತ ದೋಷವಿಲ್ಲದೆ ಬರೆಯಬಹುದಾದ ಸರಳ ಪದ ಸಾಲ. ಆದರೆ ಸಾಲಿಗರು– ಸಾಲದಾತರು ವಿರಳವಲ್ಲ. ಪ್ರತಿಯೊಬ್ಬರೂ ಈ ಎರಡೂ ಭೂಮಿಕೆಯನ್ನು ನಿಭಾಯಿಸಿರುತ್ತಾರೆ. ಪದ ಮಿತಿಯಲ್ಲಿದ್ದರೆ ಮಾತ್ರ ಕೇಸರಿ ಭಾತಿನಲ್ಲಿ ಸಿಗುವ ದ್ರಾಕ್ಷಿ ಗೋಡಂಬಿಯಂತೆ ಮಧುರ. ಅಧಿಕವಾದಾಗ ಸುಗ್ರಾಸ ಭೋಜನದಲ್ಲಿ ಸಿಗುವ ಕಲ್ಲಿನಂತೆ ರಸಾಭಾಸ.

'ಸಾಲ' ಒಂದು ರೀತಿಯಲ್ಲಿ ಸ್ವತಂತ್ರ. ಬಂಧು ಬಳಗವಿಲ್ಲದ, ಸ್ನೇಹ ಸೌಹಾರ್ದವಿಲ್ಲದ, ಲಿಂಗಭೇದವಿಲ್ಲದೆ ವಾಣಿಜ್ಯಿಕ ಮೌಲ್ಯವನ್ನು ಪಡೆದಂತಹ ಪದ. ಪಡೆದವ ಪ್ರಾಮಾಣಿಕನಾಗಿದ್ದರೆ ತಾವರೆ ಎಲೆಯ ಮೇಲಿನ ನೀರಿನಂತೆ ಅದು ತನ್ನ ಪಾಡಿಗೆ ತಾನಿರುವ ನಿರುಪದ್ರವಿ. ಪ್ರಾಮಾಣಿಕತೆ ಇಲ್ಲದೆ ಹೋದರೆ ಮಾತ್ರ ಸಹಸ್ರ ತಲೆಯ ನಾಗರಹಾವಿನಂತೆ ಕುಟುಕುವ ವಿಷಕನ್ಯೆ. ನಮ್ಮ ಮೊಬೈಲಿಗೆ ಮುದ್ದಾಗಿ ಉಲಿಯುವ ಧ್ವನಿಯೊಂದು, "ನಿಮಗೆ ಸಾಲ ಮಂಜೂರಾಗಿದೆ, ಈ ಕೆಳಗಿನ ಲಿಂಕನ್ನು ಒತ್ತಿ ನೀವು ಸಾಲವನ್ನು ಪಡೆದುಕೊಳ್ಳಬಹುದು, ಸುಲಭ ಕಂತುಗಳಲ್ಲಿ ತೀರಿಸಿ ನೀವು ಸಾಲಮುಕ್ತರಾಗಬಹುದು. ಅತ್ಯಂತ ಕಡಿಮೆ ಬಡ್ಡಿಯ ಈ ಸಾಲದ ಅವಕಾಶ ಈ ದಿನಕ್ಕೇ ಕೊನೆಯಾಗುತ್ತದೆ" ಎನ್ನುವ ಕಿನ್ನರಿಯ ಇನಿ ದನಿ ಸಮ್ಮೋಹನಾಸ್ತ್ರವನ್ನು ಪ್ರಯೋಗಿಸಿದಂತೆ. In 3 clicks you can avail loan. ಸಾಲ ಮೇಳಗಳನ್ನೇ ನಡೆಸಿ ಸಾಲ ಕೊಡುವ ಬ್ಯಾಂಕುಗಳು ಸಾಲು ಸಾಲಾದರೆ, ಇನ್ನೊಂದೆಡೆ ನಮ್ಮ ಚಿನ್ನವನ್ನು ಪಡೆದುಕೊಂಡು ಅದರ ಮೇಲೆ ಸಾಲವನ್ನು ಕೊಡುವ ಸಂಸ್ಥೆಗಳು ಹಲವು. ಇವೆರಡರ ಸಂಬಂಧ ಫ್ರಿಡ್ಜ್ ಮತ್ತು ಮೈಕ್ರೋ ಓವನ್ ಜೊತೆ–ಜೊತೆಗೆ ಇರುವಂತೆ. ಪಾತ್ರೆ ಪಡಗ, ಕೀಮತ್ತಿರುವ ವಸ್ತುಗಳನ್ನು ಗಿರವಿ ಇಟ್ಟು ಸಾಲ ಪಡೆಯುವುದು. ಈ ಸಾಲ ಬಹುರೂಪಿ. ಕೈ ಸಾಲವೆಂಬುದೊಂದು ಚಕ್ರವ್ಯೂಹ. ಇನ್ನು ಬ್ಯಾಂಕುಗಳನ್ನು ಹೊರತುಪಡಿಸಿ ಬಂಧು–ಮಿತ್ರರಿಂದ ಅಥವಾ ದಲ್ಲಾಳಿಗಳಿಂದ ಪಡೆಯುವ ಮೀಟರ್ ಬಡ್ಡಿ ಸಾಲವಂತೂ ನಮ್ಮ ವಿದ್ಯುತ್ ಮೀಟರ್ ಓಡುವಂತೆಯೇ ಓಡುತ್ತವೆ. 'ಅವ ದಾತಾರಾಂ' ಕೊಡುವವನ ಕೈ ಮೇಲೆ. ಅದು ಫಿಮೇಲೂ ಆಗಿರಬಹುದು.

ಸಾಕ್ಷಾತ್ ಶ್ರೀಹರಿಯೆ ಬಲಿಯ ಹತ್ತಿರ ಕೇಳುವಾಗ ವಾಮನನಾದ, ತನ್ನ ಮದುವೆಗೆಂದು ಕುಬೇರನಿಗೆ ಸಾಲಗಾರನಾದ. ಇನ್ನು ಸಾಮಾನ್ಯ ಮನುಷ್ಯನ ಪಾಡೇನು? ಸಾಲವನ್ನು ಪಡೆದುಕೊಳ್ಳಬಯಸುವವನು ಆರಡಿಯ ದೇಹವನ್ನು ಕುಬ್ಜವನ್ನಾಗಿಸಿ ಮೂರಡಿ ಮಾಡಿಕೊಂಡು ಗಿಂಜುತ್ತಾ ಮಧ್ಯೆ ಮಧ್ಯೆ ತಲೆ ಕೆರೆದುಕೊಳ್ಳುತ್ತ, ತೊದಲುತ್ತಾ, ಬಾರದ ನಗುವಿನ ಲೇಪವನ್ನು ಮುಖದಲ್ಲಿ ತಂದುಕೊಂಡು, ಕೆಟ್ಟು ನಿಂತ ಇಂಜೀನಿನಂತೆ 'ಅದೂ ಅದೂ...' ಎಂದು ತಡವರಿಸುವ ಅಥವಾ ಸಾಲ ಕೇಳುತ್ತಿರುವವನ ಗುಣಗಾನ ಮಾಡುವ ಮೂಲಕ ತನ್ನತ್ತ ಸೆಳೆದುಕೊಳ್ಳುತ್ತಿರುವಾಗ, ಸಾಲದಾತ ಬೀಗದೆ ಇರುವನೆ? "ಇವನಿಗೆ ಸಾಲ ಕೊಡುವುದೋ ಬೇಡವೊ? ಕೊಟ್ಟರೆ ಎಷ್ಟು ಕೊಡಬಹುದು? ಕಂತು ಸರಿಯಾಗಿ ಕಟ್ಟುವನೆ?" ಅವನು ಮನಸ್ಸಿನಲ್ಲೇ ಲೆಕ್ಕಾಚಾರ ಹಾಕುತ್ತಿರುತ್ತಾನೆ. ಸಾಲದ ಆಕಾಂಕ್ಷಿಗಳಿಗೆ ಚೆನ್ನಾಗಿ ತಿಳಿದಿರುತ್ತದೆ ಹತ್ತಿರದಲ್ಲೇ ತಮಗೆ ಯಾವ ಹಣವೂ ಪ್ರಾಪ್ತವಾಗುವುದಿಲ್ಲವೆಂದು. ಆದರೂ ಹೇಳುವುದು ವಾಡಿಕೆ. "ಎರಡು ದಿನಗಳಲ್ಲಿ ಹಿಂದಿರುಗಿಸುತ್ತೇನೆ ಅಥವಾ ಇನ್ನೊಂದು ವಾರದಲ್ಲಿ ವಾಪಸ್ಸು ಕೊಡುತ್ತೇನೆ" ಎಂದು. ಅದು ವರ್ಷಗಳೇ ಆಗಬಹುದು, ಕಡೆಗೆ ತೀರಿಸದೆಯೂ ಇರಬಹುದು.

ಸಾಲ ಪಡೆದ ಮರುಕ್ಷಣವೇ ಮಾತಿನ ಧಾಟಿ ಬದಲಾಗುತ್ತದೆ. "ನಾನೇನು ಓಡಿ ಹೋಗುತ್ತೇನೆಯೇ? ನಂಗೆ ಯಾವುದೋ ಹಣ ಬರುವುದಿತ್ತು. ಅದು ಬಂದಿದ್ದರೆ ಹೀಗೆ ಕೈ ಚಾಚುವ ಪ್ರಮೇಯವೇ ಇರುತ್ತಿರಲಿಲ್ಲ, ಸಾಲ ನೀಡುತ್ತಿದ್ದ ಕೈ ಇದು. ಏನೋ ನನ್ನ ಗ್ರಹಚಾರ, ಇಂದು ಬೇಡುವ ಪರಿಸ್ಥಿತಿ ಬಂದಿದೆ" ಎಂದು ತನ್ನ ತಪ್ಪಿಗೆ ಗ್ರಹಗಳನ್ನು ಮಧ್ಯೆ ತರುವುದು ಇಲ್ಲವೇ

“ನನ್ನ ಮಿತ್ರನನ್ನು ಕೇಳಿದರೆ ಇಲ್ಲ ಎನ್ನುವುದಿಲ್ಲ ಆದರೆ ನನಗೇ ಅವನನ್ನು ಕೇಳಲು ಇಷ್ಟವಿಲ್ಲ” ಎನ್ನುವ ದೊಡ್ಡಸ್ತಿಕೆಯ ಮಾತುಗಳು. “ನೆನ್ನೆಯವರೆಗೂ ನನ್ನ ಕೈಯ್ಯಲ್ಲಿ ದುಡ್ಡಿತ್ತು, ನನಗೆ ಬೇಕಾದವರೊಬ್ಬರು ತೀರಾ ಅಂಗಾಲಾಚಿದ ಕಾರಣ ಕೊಡಬೇಕಾಯಿತು” ಎನ್ನುವ ಮಾತುಗಳು.

ವಾಯಿದೆ ಮೀರಿದಾಗ ಸಾಲ ಕೊಟ್ಟವನು ಕೇಳುವಂತಿಲ್ಲ, ಸರ್ವಜ್ಞ ಹೇಳಿಲ್ಲವೇ? 'ಸಾಲಿಗನು ಬಂದು ಎಳೆವಾಗ – ಕಿಬ್ಬದಿಯ ಕೀಲು ಮುರಿದಂತೆ' ಎಂದು. ಪಡೆದುಕೊಂಡವನ/ಕೊಂಡವಳ ಚಲನವಾಣಿ ನನ್ನನ್ನು ಎತ್ತಿಕೊಳ್ಳಿ ಎಂದು ಕೂಗಿ ಕೂಗಿ ತಣ್ಣಗಾಗುತ್ತದೆ. ಆದರೆ ಸಾಲದಾತನ ಸಂಖ್ಯೆ ಬ್ಲಾಕ್ ಆಗಿಬಿಡುತ್ತದೆ. ಮನೆಯ ಹತ್ತಿರ ಬಂದರೆ ಹಿಂದಿನ ಬಾಗಿಲಿನಿಂದ ಪರಾರಿ ಅಥವಾ ಮನೆಯಲ್ಲಿದ್ದರೂ ಇಲ್ಲವೆಂದು ಅನಿಸಿಕೊಳ್ಳುವಿಕೆ. ಬಂಧುತ್ವ, ಸ್ನೇಹ, ಮರ್ಯಾದೆ, ಆತ್ಮಗೌರವದ ಮೇಲೆ ಪ್ರಹಾರವನ್ನು ಮಾಡುವ ಈ ಸಾಲಕ್ಕೆ ತಿಮಿಂಗಿಲದಂತಹ ಕೈಗಳು. ಮೊದಲು ಕೈ ಚಾಚುವಂತೆ ಮಾಡುತ್ತದೆ, ನಿಧಾನವಾಗಿ ದೇಹದ ಒಂದೊಂದೇ ಅಂಗದ ಮೇಲೆ ತನ್ನ ಆಕ್ರಮಣ ನಡೆಸುತ್ತದೆ. ನಂತರ ಮನ:ಶಾಂತಿಯನ್ನು ಹಾಳು ಮಾಡಿ ದೇಹವೇ ಖಾಯಿಲೆಯ ಗೂಡಾಗುತ್ತದೆ. ಮನೆಯಲ್ಲಿ ಕಾರಣವಿಲ್ಲದೆ ಕೂಗಾಡುವುದು, ಮನೆಯ ಕರೆಗಂಟೆ ಕಿರ್ ಎಂದರೆ ಸಾಕು ಎದೆಯಲ್ಲಿ ಏನೋ ತಳಮಳ.

ಹಳೆಯ ಜಾನಪದ ಗೀತೆಯೊಂದು “ಆಲಕ್ಕೆ ಹೂವಿಲ್ಲ ಸಾಲಕ್ಕೆ ಕೊನೆಯಿಲ್ಲ” ಪ್ರಾಸಕ್ಕೆ ಇದು ಸೇರಿಕೊಂಡಿದ್ದರೂ, ಸಾಲ ಮಾಡಿಯಾದರೂ ಮಗಳ ಮದುವೆ ಅದ್ದೂರಿಯಾಗಿ ಮಾಡುವುದು, ಮನೆಯ ಸಾಮಾನುಗಳನ್ನು ಕೊಂಡು ತಂದು ಕಂತುಗಳಲ್ಲಿ ಸಾಲವನ್ನು ತೀರಿಸುತ್ತಾ ಕಂತುಪಿತರಾಗುವುದು. ಇನ್ನು ಚೀಟಿ ಕಟ್ಟುವ ಕಲೆಗಾರಿಕೆಯೊಂದಿದೆ. ಪ್ರತಿ ತಿಂಗಳೂ ಕಟ್ಟಿ ನಮ್ಮ ದುಡ್ಡನ್ನೇ ತೆಗೆದುಕೊಳ್ಳಲು ಆಯೋಜಕರ ಕೈಕಾಲು ಹಿಡಿದು ಅವರಿಗಿಷ್ಟು ಸೋಡಿ ಬಿಟ್ಟು ಪಡೆದುಕೊಳ್ಳುವುದು. ಅತ್ಯಂತ ಕೆಳವರ್ಗದ ಕುಟುಂಬ ಬದುಕುವುದೇ ಸಾಲದ ಬುನಾದಿಯ ಮೇಲೆ. ಹೆಂಡತಿ ದಿನಸಿ ಅಂಗಡಿಯಲ್ಲಿ, ಗಂಡ ಸಾರಾಯಿ ಅಂಗಡಿಯಲ್ಲಿ ಸಾಲಗಾರರು. ಇನ್ನು ಶ್ರೀಸಾಮಾನ್ಯನ ಮನೆ, ಸ್ವಂತದ್ದಾದರೂ ಅದರ ಮೇಲೆ ಸಾಲ, ಓಡಾಡುವ ವಾಹನಗಳ ಮೇಲೆ ಸಾಲ, ಮನೆಯ ವಸ್ತುಗಳ ಮೇಲೆ ಸಾಲ. ಶ್ರೀಮಂತ ವರ್ಗ ಆದಾಯ ತೆರಿಗೆ ಉಳಿಸಲು ಸಾಲ, ಜನರ ಮಾತು ಹಾಗಿರಲಿ. ದೊಡ್ಡ ದೊಡ್ಡ ಸಂಸ್ಥೆಗಳೇ, ಕಡೆಗೆ ದೇಶವೂ ಸಾಲಗಾರ. ಒಂದು ಸಾಲವನ್ನು ತೀರಿಸಿ “ಅಬ್ಬಾ ಅಂತೂ ಈ ಸಾಲ ತೀರಿತು” ಎಂದು ಇನ್ನೇನು ನಿಶ್ಚಿಂತೆಯ ನಿದ್ದೆಗೆ ಶರಣಾಗಬೇಕು, ಆಗ ನೆನಪಿಗೆ ಬರುವುದು ಮಕ್ಕಳನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ಕಳಿಸಬೇಕಲ್ಲವೇ? ಸರಿ ಬ್ಯಾಂಕಿನವರು ಇಂತಹವರನ್ನು ತೆರೆದ ಹೃದಯದಿಂದ ಸ್ವಾಗತಿಸುತ್ತಾರೆ. ಎಷ್ಟೋ ಮಂದಿ ಸಾಲದ ಹೊರೆ ತಾಳಲಾರದೇ ಆತ್ಮಹತ್ಯೆಗೆ ಶರಣು ಎಂದು ದಿನನಿತ್ಯ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಸಣ್ಣ ದಾರದಂತೆ ತೋರುವ ಸಾಲ ಮುಂದೆ ಮೃತ್ಯುಪಾಶವಾಗಬಲ್ಲ ಸಾಮರ್ಥ್ಯವುಳ್ಳದ್ದೆಂದು ಯಾರಿಗೆ ತಾನೇ ಅಂದಾಜಿರುತ್ತದೆ? ಕೌಟುಂಬಿಕ ಕಲಹ, ಸಾಂಸ್ಥಿಕ ಕಲಹ ಎಲ್ಲ ರೀತಿಯ ಕಲಹಕ್ಕೂ ಈ ಸಾಲವೇ ನಾಂದಿ. ಬಹಳ ಹಿಂದೆ ಗೃಹಿಣಿಯರು ದಿನಸಿ ಸಾಮಾನು ಅಕ್ಕಪಕ್ಕದ ಮನೆಯಿಂದ ಕೊಂಡು ತರುವುದು ಮತ್ತೆ ಅವರಿಗೆ ಹಿಂದಿರುಗಿಸುವುದು ಸಾಮಾನ್ಯವಾಗಿತ್ತು. ಈಗ ಬ್ಲಿಂಕಿಟ್ ಪ್ರಪಂಚ. ಡಿಜಿಟಲ್ ಪಾವತಿಗಳಿಂದ ಹೆಚ್ಚಿನಂಶ ಜನರು ಕೊಳ್ಳುಬಾಕು ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಪರೋಕ್ಷ ಸಾಲಗಾರರಾಗುತ್ತಾರೆ. ಕ್ರೆಡಿಟ್ ಕಾರ್ಡ್ ಕೊಟ್ಟು ಅಗ್ರ ಪಂಕ್ತಿಯ ಸಾಲಗಾರಗಾಗಿರುವುದು. ವಾಯಿದೆ ಮೀರಿದ ನಂತರ ಕಟ್ಟುವ ಮೊತ್ತಕ್ಕೆ ಒಂದಕ್ಕೆ ಎರಡರಷ್ಟು ವಸೂಲು ಮಾಡುವ ಕ್ರೆಡಿಟ್ ಕಾರ್ಡುಗಳು ಒಂದು ರೀತಿ ಸುಂದರವಾದ ಗವಸು ಹಾಕಿಕೊಂಡ ಕುರೂಪ ಮುಖಗಳು.

ಎಲ್ಲ ಸಾಲಗಳೂ ತೀರಿದವೆಂದು ಅಂದುಕೊಳ್ಳುವಂತೆಯೇ ಇಲ್ಲ, ಪ್ರತಿಯೊಬ್ಬರೂ ಸಾಲಗಾರರೆಂಬ ಪಟ್ಟಿಯ ಅಗ್ರಸ್ಥಾನದಲ್ಲೇ ಇರುತ್ತಾರೆ. ಮಾತೃ ಋಣ, ಪಿತೃ ಋಣ, ಗುರುಗಳ ಋಣ ತೀರಿಸಲು ಸಾಧ್ಯವೇ?

***

# ಸ್ಪಂದನೆ

– ರೇಣುಕಾ ದೇಸಾಯಿ

ಬೆಂ.ಶ್ರೀ. ರವೀಂದ್ರ ಅವರು ಬರೆದ 'ಸ್ವಾನುಭವದ ಬೇವು ಬೆಲ್ಲ' ಪ್ರಬಂಧ ಓದಿದೆ, ಮೂಕವಿಸ್ಮಿತಳಾದೆ. ಅವರ ಆರೋಗ್ಯದ ತಪಾಸಣೆಯ ನಂತರ ಅವರಿಗೆ ಕಂಡುಬಂದ ದೈಹಿಕ ಸಮಸ್ಯೆ, ವೈದ್ಯರು ನೀಡಿದ ಔಷಧೋಪಚಾರ, ನಂತರ ಬೇರೆ ಬೇರೆ ವೈದ್ಯರ ಸಲಹೆಗಳು, ಎರಡೆರಡು ಶಸ್ತ್ರಚಿಕಿತ್ಸೆಗಳು, ದೇಹದ ಸೂಕ್ಷ್ಮ ಅಂಗದ ಮೂಲಕ ನೀಡಿದ 23 ಇಂಜೆಕ್ಷನ್‌ಗಳು, ಅದರ ಯಾತನೆ ಹೀಗೆ ಎಲ್ಲವನ್ನು ಅನುಭವಿಸುವ ಸಮಯದಲ್ಲಿ ಕೋವಿಡ್ ಆಕ್ರಮಿಸಿ, ಅವರು ಆಸ್ಪತ್ರೆಗೆ ಹೋಗಿ ಬರಲು ಪಟ್ಟ ಬವಣೆಗಳು!! ಅದೇ ವೇಳೆಯಲ್ಲಿ, ವೇದಿಕೆಯಲ್ಲಿ ಅನೇಕ ಕಾರ್ಯಕ್ರಮಗಳು, ಆ ಕಾರ್ಯಕ್ರಮಗಳ ಹಿಂದೆ ಮತ್ತದೇ ರವೀಂದ್ರರ ಯೋಚನೆ, ಆಲೋಚನೆ, ಅದನ್ನು ಸಾಕಾರಗೊಳಿಸಲು ಯೋಜನೆಗಳು. ಆಗ ವೇದಿಕೆಯಲ್ಲಿ ನಡೆದ ಕಾರ್ಯಕ್ರಮಗಳು ಅನೇಕ, ಪ್ರತಿ ತಿಂಗಳ ಸಾಹಿತ್ಯ ದಾಸೋಹ ತಪ್ಪದೆ ವೇಬಿನಾರನಲ್ಲಿ, ಅದರ ರೂಪರೇಷೆಗಳ ಬಗೆಗೆ ಆರಂಭಿಕ ಗೊಂದಲ, 'ರಾಮಾನುಜ' ನಾಟಕ ಆನ್ಲೈನ್ ವೇದಿಕೆಯಲ್ಲಿ, ಎಚ್ಚೆಸ್ಕೆ ಸಂಕಥನ, 'ಎಚ್ಚೆಸ್ಕೆ ಬೆಳಕು' ಪೂರ್ತಿ ಒಂದು ದಿನದ ಕಾರ್ಯಕ್ರಮ, ಅದು ಕೂಡಾ ಆನ್ಲೈನಿನಲ್ಲಿ. ಆಗಾಗ ರಂಗಗೀತೆಗಳು, ಕಾಳಿದಾಸನ ಮೇಘದೂತ, ಕೃಷ್ಣಲೀಲೆಯ ಯಕ್ಷಗಾನದ ಒಂದು ರೂಪಕ, ಅದೂ ಕಲಾವಿದರು ಬೇರೆ, ಬೇರೆ ಊರಲ್ಲಿದ್ದು ಎಲ್ಲಾ ವಾದ್ಯಗಳೊಂದಿಗೆ ಆಟ!! ಒಂದೇ... ಎರಡೇ.., ವೈದ್ಯರು ಹೇಳಿದ ದೇಹದ ಸ್ಥಿತಿಯ ತಪಾಸಣೆಯ ವರದಿ ಕೇಳಿದ ಮೇಲೂ ಈ ಮನೋಸ್ಥಿತಿ! ಜೊತೆಗೆ ವೇದಿಕೆಯ ಸ್ವಾಸ್ಥ್ಯ ಕಾಪಿಟ್ಟುಕೊಳ್ಳುವಂತೆ ಅದರ ಪ್ರಧಾನ ಸಂಚಾಲಕರಾಗಿ ಆ ಜವಾಬ್ದಾರಿಯ ನೊಗ ಹೊತ್ತ ಈ ಸಂಘಟನಾ ಚತುರನಿಗೆ ಸ್ಫೂರ್ತಿ ಬಂದದ್ದು ಎಲ್ಲಿಂದ!!?.

ಎಲ್ಲಾ ರೀತಿಯ ದೈಹಿಕ, ಮಾನಸಿಕ ವರ್ತನೆಗಳು, ಪ್ರವೃತ್ತಿಗಳು, ತಾಳ್ಮೆಯಿಂದ ಕೂಡಿದ್ದರೆ ಅವುಗಳನ್ನು ನಿಯಮಿತ ಅಭ್ಯಾಸದಿಂದ ನಮ್ಮ ಸ್ವಭಾವವನ್ನಾಗಿ ಮಾಡಿಕೊಂಡರೆ, ಸದಾ ಹಸನ್ಮುಖರಾಗಿರುವುದು, ಯಾವುದೇ ಕೆಲಸದಲ್ಲಿ ತೊಡಗಿ ಕೊಂಡರೂ ಅದನ್ನು ಸಂಪೂರ್ಣ ಶ್ರದ್ಧೆಯಿಂದ ಪೂರ್ಣಗೊಳಿಸುವದು ಸಾಧ್ಯವೆಂದು ಹೇಳುತ್ತಾರೆ, ಅದನ್ನೇ ಇವರೂ ಮೈಗೂಡಿಸಿಕೊಂಡಿರಬೇಕು.

ನಮ್ಮ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯಲ್ಲಿ ಶ್ರೀಯುತ ವಿಠ್ಠಲ್ ಇಜೇರಿ ಅವರು 'ನಾವು ನಮ್ಮವರು' ಎನ್ನುವ ಲೇಖನ ಮಾಲೆ ಬರೆಯಲು ಪ್ರಾರಂಭಿಸಿ ನಮ್ಮಲ್ಲಿರುವ, ನಮ್ಮವರನ್ನೇ, ನಮಗೆ ಪರಿಚಯಿಸುವ ಕಾಯಕ ಪ್ರಾರಂಭಿಸಿದಾಗ ನಮ್ಮ ವೇದಿಕೆಯ ಹೆಮ್ಮೆಯ ಕಾರ್ಯಕ್ರಮವಾದ 'ಸಾಹಿತ್ಯ ದಾಸೋಹ', 'ಕವಿಮನ' ಸದಾ ಸಲಿಲವಾಗಿ ಹರಿಯುವಂತಹ ಸಾಹಿತ್ಯ ಕಾರ್ಯಕ್ರಮದಲ್ಲಿ 'ನಾವು ನಮ್ಮವರು' ಸೇರಿಕೊಂಡಿದೆ. ನಮ್ಮೊಳಗಿರುವ ಒಬ್ಬರ ಪರಿಚಯ ಓದಿದಾಗ ಸಂಪೂರ್ಣ ಮಾಹಿತಿ ದೊರೆಯುತ್ತದೆ, ನಮ್ಮಂತವರಿಗೆ ದಾರಿ ದೀವಿಗೆ ಆ ಪರಿಚಯ. ಆ ಪರಿಚಯವೇ ಒಂದು ಗುರಿ ಎಡೆಗೆ, ನಡಿಗೆಗೆ ನಾಂದಿಯು ಅದೇ ಆಗಿ ತೋರುತ್ತದೆ. ಸ್ವಂತಕ್ಕೆ ಇದರ ಪ್ರತಿಫಲ ಉತ್ಕೃಷ್ಟ, ವರ್ಣಿಸಲಸದಳ.

ಈ ಸಲ ಪರಿಚಿತರು, ನಮ್ಮ ವೇದಿಕೆಯ ಸಾರಥಿ. ಏಳು ಕುದುರೆ ಏಕೆ, ವೇದಿಕೆಯ ನೂರಾರು ಕುದುರೆಗಳನ್ನು ಹಿಡಿದ ರಥಿಕ, ಈ ರವಿಂದ್ರ. ಅಂದ್ರೆ ರವಿ ಅಷ್ಟೇ ಅಲ್ಲ, ದೇವೇಂದ್ರನನ್ನು ತನ್ನೊಂದಿಗೆ ಸೇರಿಸಿಕೊಂಡು ರವೀಂದ್ರನಾದ ಇವರ ಪರಿಚಯ ಅಂದ್ರೆ, ಸ್ಟೇಟ್ ಬ್ಯಾಂಕ್‌ನಲ್ಲಿ ಅಧಿಕಾರಿ ಆದವರಿಗೆ ಮೊದಲಿಂದಲೂ ಪರಿಚಿತ. ಸಂಘಟನಾ ಚತುರರಾದ ಇವರ ಮುಂದಾಳತ್ವದಲ್ಲಿ ಅಧಿಕಾರಿ ಸಂಘ ನಡೆದು, ಸಾವಿರಾರು ಅಧಿಕಾರಿಗಳಿಗೆ ಸಮರ್ಥ ನಾಯಕನಾಗಿ, ಅವರಿಗೊದಗಿದ ಕಷ್ಟಗಳಿಗೆ, ನಷ್ಟಗಳಿಗೆ ಪರಿಹಾರ ಕೊಡಿಸುವಲ್ಲಿ, ಅತ್ಯುತ್ತಮ ವಾಗ್ಮಿಯಾಗಿ, ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ವಿಶಿಷ್ಟ ಕಾರ್ಯತಂತ್ರ ರೂಪಿಸಿ, ಆಡಳಿತ ಯಂತ್ರದ ಬಲಕ್ಕೆ ತಕ್ಕುದಾದ ಪ್ರತಿ ತಂತ್ರ ಹೂಡುವ ಕುಶಲಿ ಆಟಗಾರ. ಚದುರಂಗ ಪ್ರವೀಣ. ತನ್ನ ಈ ಸರ್ವಶಕ್ತಿಯನ್ನು ಜೊತೆಗಾರರಿಗಾಗಿಯೇ ವ್ಯಯಿಸಿದ ಧೀಮಂತ ನಾಯಕ.

ನಾನು ಬೆಂಗಳೂರಿಗೆ ವರ್ಗವಾಗಿ ಬಂದ ಸ್ವಲ್ಪೇ ದಿನದಲ್ಲಿ ಒಂದು ರಾಷ್ಟ್ರ ಮಟ್ಟದ ಮಹಿಳಾ ಬ್ಯಾಂಕ್ ಅಧಿಕಾರಿಗಳ ಬೃಹತ್ ಸಮ್ಮೇಳನ ನಡೆಯಿತು, ಆಗ ಅಧಿಕಾರಿ ಸಂಘಕ್ಕೆ ಪ್ರಧಾನ ಕಾರ್ಯದರ್ಶಿಯಾಗಿದ್ದರವರು ಇವರು. ಅಂದಿನ ಕಾರ್ಯಕ್ರಮಕ್ಕೆ ಕನ್ನಡದಲ್ಲಿ ನಿರೂಪಣೆ ನನ್ನದು, ಇಂಗ್ಲೀಷಿನನಲ್ಲಿ ರೂಪಾ ರಾವ್ ಅವರದ್ದಾಗಿತ್ತು. ಆಗ ಪ್ರತಿ ಸಣ್ಣ ಸಣ್ಣ ವಿಷಯಗಳಿಗೂ ಅವರು ನೀಡುತ್ತಿದ್ದ ಮಾರ್ಗದರ್ಶನ ಅವರ ಬದ್ಧತೆಯ ಪರಿಚಯ ನನಗಾಯಿತು. ಬಹುಶಃ ಅವರ ಮುಂದಾಳತ್ವದಲ್ಲಿ ನಡೆದ ಕಾರ್ಯಕ್ರಮದ ಅಚ್ಚುಕಟ್ಟುತನಕ್ಕೆ ಅವರೇ ಸಾಟಿ. ಅಂದು ಅಲ್ಲಿರುವ ಅಧಿಕಾರಿ ವರ್ಗದ ನೇತಾರ, ಇಂದು ಕವಿ ಕಥೆಗಾರ. ನಮ್ಮ ವಿಶ್ರಾಂತ ಜೀವನಕ್ಕೆ ಪೂರಕವಾದ ನಮ್ಮದೇ ಒಂದು ಸಾಹಿತ್ಯ ಸಂಘಟನೆ ರೂಪಿಸಿ, ಅದರ ಚುಕ್ಕಾಣಿ ಹಿಡಿದು ನಮ್ಮನ್ನೆಲ್ಲ, ಸಾಹಿತ್ಯದ ಸತ್ಸಂಘದಲ್ಲಿ ನೆಮ್ಮದಿ, ಉತ್ಸಾಹ, ಸಂತೋಷ, ಲವಲವಿಕೆಯಾಗಿರುವಂತೆ ನಿರೂಪಿಸಲು ಅವರು ಪಡುತ್ತಿರುವ ಶ್ರಮ ದೊಡ್ಡದು. ನಮ್ಮದೇ ಆಪ್ತ ಬಳಗವನ್ನು ಸೃಷ್ಟಿಸಿ ಈ ಒಂದು ವೇದಿಕೆಯ ಶಕ್ತಿಯಾಗಿದ್ದಾರೆ. ಅವರು ನೂರ್ಕಾಲ ಹೀಗೆ ಮುನ್ನಡೆಸುತ್ತಿರಲಿ. ಸಾಹಿತ್ಯ ಪರಿಚಾರಕರ ಗುಂಪು ದೊಡ್ಡದಾಗಲಿ.

ಈ ನನ್ನ ಭಾವವನ್ನು ದಾಖಲಿಸಲೇಬೇಕೆಂದು ಸಾಹಿತ್ಯ ದಾಸೋಹದಲ್ಲಿ ನನ್ನ ಸ್ಪಂದನೆಯನ್ನು ಪ್ರಸ್ತುತಪಡಿಸಿ ನನ್ನ ವಂದನೆ ಸಲ್ಲಿಸಿದ್ದೇನೆ. ವೈಯಕ್ತಿಕವಾಗಿ ನನಗೆ ಅವರ ಪ್ರೋತ್ಸಾಹ ದೊಡ್ಡದು. ಸಾಹಿತ್ಯದ ಆಸಕ್ತಿ ಇದ್ದುದರಿಂದ ಮೊದಲಿನಿಂದಲೂ ಕಥೆ, ಕವನ, ಕಿರುನಾಟಕಗಳ ಬರವಣಿಗೆ ಇತ್ತು. ಬ್ಯಾಂಕಿನಲ್ಲಿ ಕನ್ನಡ ರಾಜ್ಯೋತ್ಸವ ಇನ್ನಿತರ ಕಾರ್ಯಕ್ರಮದಲ್ಲಿ ನಾನು ಪ್ರಸ್ತುತಿ ಪಡಿಸಿದ ನನ್ನ ಕವನ, ಕಿರು ನಾಟಕಗಳನ್ನು ತಿದ್ದಿ ತೀಡಿದ್ದು ಇದೆ, ನನ್ನ ಇತರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದ್ದು ಇದೆ. ಯಾವ ಜನ್ಮದ ಋಣಾನುಬಂಧವೋ ಇಲ್ಲಿಯವರೆಗೆ ಸಾಗಿದೆ. ನಿವೃತ್ತಿಯ ನಂತರ ವೇದಿಕೆಗೆ ಬಂದಾಗಿನಿಂದಲೂ ಅವರ ಪ್ರೋತ್ಸಾಹದಲ್ಲಿ ಬೆಳೆದಿದ್ದೇನೆ, ಸಂತಸಗೊಂಡಿದ್ದೇನೆ. ವೇದಿಕೆಯ ಹತ್ತು ಹಲವು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೇನೆ. ಇಂದಿಗೂ ವೇದಿಕೆಯ ಕೆಲಸವೆಂದರೆ ಬ್ಯಾಂಕಿನ ಕೆಲಸದಷ್ಟೇ ಶ್ರದ್ಧೆ ನನ್ನಲ್ಲಿ ಮೂಡಲು ಕಾರಣ ನಮ್ಮ ಪ್ರಧಾನ ಸಂಚಾಲಕರು, ಅವರು ಅಚ್ಚುಕಟ್ಟುತನದ ಅಪೇಕ್ಷಿತರು, ಅವರ ಅಪೇಕ್ಷೆಗೆ ಸರಿಸಮಾನವಾಗಿ ಇರಬೇಕು ಎನ್ನುವ ನನ್ನ ಅಂತಃಪ್ರಜ್ಞೆ ಕಾರಣ. ಇಂತಹ ಪ್ರಜ್ಞೆ ರೂಪಿಸಿದ ರೂವಾರಿಗೆ ನಮನ.

ಮೊನ್ನೆ ನನ್ನ ಪರಿಚಯ ವೇದಿಕೆಯಲ್ಲಿ ಆದಾಗ ಎಲ್ಲರೂ ಅಭಿನಂದನೆ ಹೇಳಿದಿರಿ, ಆದರೆ ರವೀಂದ್ರರು ನನಗೊಂದು ಕವನವನ್ನೇ ಬರೆದರು, ಅದು ನನ್ನಲ್ಲಿ ಸದಾ ನೆನಪಿರುವಂತಹ ಕವನ. ಅದಕ್ಕೆ ವೇದಿಕೆಯ ಹಿರಿಯ ಲೇಖಕಿ ಶ್ರೀಮತಿ ಗಿರಿಜಾ ರಾಜ್, "ಹೆಡ್ ಮಾಸ್ಟರ್ ನಿಂದ ಕವನ ಗಿಟ್ಟಿಸಿಕೊಂಡ ಹುಡುಗಿ" ಎಂದು ಪ್ರತಿಕ್ರಿಯಿಸಿದರು, ಇದಕ್ಕಿಂತ ಬಿರುದು ಬಾವಲಿ ಬೇಕೆ ಈ ಸಾಮಾನ್ಯಳಿಗೆ.

***

# ಮಂಪರು

**– ಗುರುರಾಜ ಶಾಸ್ತ್ರಿ**

ಅದು ಮಾರ್ಚ್ ತಿಂಗಳ ಕಡೆಯ ವಾರ. ಸಂಜೆ ಎಂದಿನಂತೆ ನಮ್ಮ ಹಳಗನ್ನಡ ತರಗತಿಗೆ ಹೋಗಿದ್ದೆ. ಹಿಂದಿನ ವರ್ಷ ನಮಗೆ ಪಾಠ ಮಾಡಿದ್ದ ಗುರುಗಳ ಆರೋಗ್ಯ ಕ್ಷೀಣಿಸಿದ್ದು ಈಗ ಯಾರನ್ನೂ ಅವರು ಗುರುತು ಕೂಡಾ ಹಿಡಿಯುತ್ತಿಲ್ಲ ಎಂದು ತಿಳಿಯಿತು. ತರಗತಿಯ ನಂತರ ಆಸ್ಪತ್ರೆಗೆ ಹೋಗಿ ಬರೋಣವೆಂದು ನಾನು ಮತ್ತು ನನ್ನ ಸಹಪಾಠಿ ನಿರ್ಧರಿಸಿದೆವು.

ಹಳಗನ್ನಡ ಪಾಠ ಮಾಡುವಾಗ ಒಂದು ಒಳ್ಳೆಯ ಪದ ಬಂದರೆ  ಆ ಪದವು ಯಾವ ಯಾವ ಬೇರೆ ಕಾವ್ಯಗಳಲ್ಲಿ ಬಳಸಿದ್ದಾರೆಂದು  ಗುರುಗಳು ಹೇಳುತ್ತಿದ್ದರೆ ಅವರ ಜ್ಞಾಪಕಶಕ್ತಿಯಲ್ಲಿ ಶೇಕಡ ಹತ್ತರಷ್ಟು ಕೂಡ ನನಗಿಲ್ಲವೆಂದು ನನ್ನ ಮೇಲೆ ನನಗೆ ಬೇಸರವಾಗುತ್ತಿತ್ತು. ಅಷ್ಟು ಜ್ಞಾಪಕಶಕ್ತಿ ಇದ್ದ ಗುರುಗಳು ಇವತ್ತು ಯಾರನ್ನೂ ಗುರುತುಕೂಡಾ ಹಿಡಿಯುತ್ತಿಲ್ಲವೆಂದರೆ ಹೇಗೆ, ಅಕಸ್ಮಾತ್ ನಮ್ಮನ್ನು ಗುರುತುಹಿಡಿದುಬಿಟ್ಟರೆ, ಎಂಬ ಆಶಾಭಾವನೆ ಮನದಲ್ಲಿ.

ಪ್ರತಿದಿನದ ತರಗತಿಯ ನಂತರ ತುಂಬಾ ಸುಸ್ತಾಗಿ ನಾವು ತಿನ್ನುತ್ತಿದ್ದ ದ್ವಾರಾಕಾ ಹೋಟಲ್ಲಿನ ದೋಸೆಯನ್ನೂ ಅಂದು ಬೇಡವೆಂದು ನಿರ್ಧರಿಸಿ ಆಸ್ಪತ್ರೆಯತ್ತ ನಮ್ಮ ಪಯಣ ಬೆಳೆಸಿದೆವು. ನಮ್ಮ ಜೊತೆಗೆ ಈಗ ನಮಗೆ ಪಾಠ ಮಾಡುತ್ತಿರುವ ಗುರುಗಳು ಕೂಡಾ ಬಂದರು.

ಆಸ್ಪತ್ರೆಯಲ್ಲಿರುವ ಗುರುಗಳನ್ನು ಜ್ಞಾಪಿಸಿಕೊಂಡರೆ ನನಗೆ ತಕ್ಷಣ ಅವರು ತೊಡುವ ಇಸ್ತ್ರಿ ಮಾಡಿದ ಬಟ್ಟೆ ಕಣ್ಣ ಮುಂದೆ ಬರುತ್ತದೆ. ಎಷ್ಟು ಅಚ್ಚುಕಟ್ಟಾಗಿ ಉಡುಪು ಧರಿಸಿ ಬರುತ್ತಿದ್ದರೆಂದರೆ ಒಬ್ಬ ಅಧ್ಯಾಪಕನಾದವನು ಹೊರನೋಟಕ್ಕೆ ಹೀಗೆ ಕಾಣಬೇಕು ಎಂಬುದಕ್ಕೆ ಉದಾಹರಣೆಯಾಗಿದ್ದಾರೆ ಎಂದು ನಮಗೆ ಅನಿಸುತ್ತಿದ್ದರಲ್ಲಿ ಅನುಮಾನವಿಲ್ಲ. ಆದರೆ ಆ ದಿನ ನಾವು ಆಸ್ಪತ್ರೆಗೆ ಹೋದಾಗ, ಆಸ್ಪತ್ರೆಯವರು ತೊಡಿಸಿದ್ದ ಯಾವುದೋ ಗೌನು ಹಾಕಿಕೊಂಡು ಎಳೆಮಕ್ಕಳಂತೆ ಮಂಡಿಯನ್ನು ಮಡಿಸಿ ಗಾಢನಿದ್ರೆಯಲ್ಲಿ ಪಕ್ಕಕ್ಕೆ ತಿರುಗಿ ಮಲಗಿದ್ದರು ಗುರುಗಳು.

ಜೋರಾಗಿ ಮಾತನಾಡಿ ಎಬ್ಬಿಸಬೇಕೆಂಬ ಆಸೆ, ಆದರೆ ತೊಂದರೆಯಾಗಬಹುದೇ ಎಂಬ ಅನುಮಾನ. ಆದರೂ ಅವರ ಮಗನ ಅನುಮತಿ ಪಡೆದು ನನ್ನ ಸಹಪಾಠಿ, "ಗುರುಗಳೇ ನಾನು ಮಾರುತಿ ಬಂದಿದ್ದೀನಿ, ಏನ್ ಸಮಾಚಾರ, ತರಗತಿ ಯಾವಾಗ ತೆಗೆದುಕೊಳ್ಳುತ್ತೀರಾ?" ಎಂದು ಜೋರಾಗಿ ಕೂಗಿದರು. ಗುರುಗಳು ಅಲುಗಾಡಲೇ ಇಲ್ಲ. ಅಲ್ಲೇ ಇದ್ದ ಆಸ್ಪತ್ರೆಯ ಸಿಬ್ಬಂದಿಯೊಬ್ಬರು ಅವರನ್ನು ಅಲುಗಾಡಿಸುತ್ತಾ ಎಚ್ಚರಕ್ಕೆ ತರಲು ಪ್ರಯತ್ನಿಸಿದರು. ಅರ್ಧಂಬರ್ಧ ಕಣ್ಣು ಬಿಟ್ಟರಷ್ಟೆ. ಮತ್ತೆ ನನ್ನ ಸಹಪಾಠಿಯು, ಕ್ಯಾಸೆಟ್ ರೀವೈಂಡ್ ಮಾಡಿ ಹಾಕುವಂತೆ, "ಗುರುಗಳೇ ನಾನು ಮಾರುತಿ, ನಿಮ್ಮ ಹಳೆಯ ವಿದ್ಯಾರ್ಥಿ" ಎಂದು ಜೋರಾಗಿ ಕೂಗಿದರು.

"ಏ ಜಯಸಿಂಹ, ನಾಳೆ ನನಗೆ ಕೆಲಸ ಇದೆ, ನಾನು ಬರೋಕ್ಕೆ ಆಗೊಲ್ಲಾ ಅಂತ ಹೇಳಿದೆನೆಲ್ಲ" ಎಂಬುದು ಅವರ ಉತ್ತರ. ನಾವು ಕೇಳಿದ ಅವರ ಅಂತಿಮ ವಾಕ್ಯಗಳು ಇವೇ ಆಗಿತ್ತು.

ಇನ್ನು ಶೀರ್ಷಿಕೆಯಲ್ಲಿರುವ ಮಂಪರಿಗೂ ಈ ಘಟನೆಗೂ ಏನು ಸಂಬಂಧ ಅಂತೀರೇನೂ. ಆ ಆಸ್ಪತ್ರೆಯ ಕೊಠಡಿಯಲ್ಲಿ ಜಯಸಿಂಹ ಎಂಬ ಹೆಸರಿನವರು ಯಾರು ಇಲ್ಲದ್ದರಿಂದ. ಗುರುಗಳ ಮೆದುಳಿನಲ್ಲಿ ಯಾವುದೋ ಹಳೆಯ ಸಂದರ್ಭದ ಪ್ಲೇಟ್ ಓಡುತ್ತಿರುವುದು ನಿಶ್ಚಯವಾಯಿತು.  ಇದೇ ಅಲ್ಲವೇ ಮಂಪರು ಅನ್ನೋದು.

ನನ್ನ ಅಪ್ಪನನ್ನು ಆಸ್ಪತ್ರೆಗೆ ಸೇರಿಸಿದಾಗ, ನಾವು ಆಸ್ಪತ್ರೆಯವರಿಗೆ, "ಇವರ ಹೆಸರಲ್ಲಿ ಯಾವುದೇ ಮೆಡಿಕಲ್ ಇನ್ಶುರೆನ್ಸ್ ಇಲ್ಲ" ಎಂದು ಸುಳ್ಳು ಹೇಳಿದ್ದೆ. ಕಾರಣ ಇಷ್ಟೆ, ಜನರಲ್ ವಾರ್ಡ್ ತೆಗದುಕೊಂಡರೆ, ಆಸ್ಪತ್ರೆಯವರು ಬೇಗನೇ ಔಷಧಿ ನೀಡಿ ಡಿಸ್ಚಾರ್ಜ್ ಮಾಡುತ್ತಾರೆ ಇಲ್ಲವಾದರೆ ಇನ್ಶುರೆನ್ಸ್ ಇದೆ ಎಂದು ಹೇಳಿ ಸ್ಪೆಷಲ್ ವಾರ್ಡ್‌ಗೆ ಸೇರಿಸಿದರೆ ಮತ್ತೊಬ್ಬ ರೋಗಿ ಬರುವವರೆವಿಗೂ ಇವರನ್ನು ಡಿಸ್ಚಾರ್ಜ್ ಮಾಡುವುದಿಲ್ಲ ಎಂಬುದು. ಆದರೆ ವೈದ್ಯರು ತುಂಬಾ ಹುಷಾರು, ಆಪರೇಶನ್ ಮಾಡುವ ಮೊದಲು ಕೊಟ್ಟ ಅನೆಸ್ತೀಷಿಯಾದ ಮಂಪರಿನಲ್ಲಿದ್ದ ನನ್ನ ತಂದೆಯನ್ನು ಮಾತನಾಡಿಸುತ್ತಾ, ನಮ್ಮಲ್ಲಿ ಇನ್ಶುರೆನ್ಸ್ ಇರುವುದು ಮತ್ತು ಆಸ್ಪತ್ರೆಯ ಖರ್ಚಿಗೆ ಹೆದರುವ ಅವಶ್ಯಕತೇ ಏನಿಲ್ಲವೆಂವ ವಿಷಯಗಳನ್ನು ಕಲೆ ಹಾಕಿದ್ದರು.

ನನ್ನ ಕೆಲವು ಅನುಭವಗಳಲ್ಲಿ, ನನ್ನ ಗೆಳೆಯರು ಹೇಳುವ ಪ್ರಕಾರ ಅವರು ಕೇಳಿದ ಯಾವುದೋ ಪ್ರಶ್ನೆಗೆ ನಾನು ನಿದ್ದೆಯ ಮಂಪರಿನಲ್ಲಿ ಇನ್ನೇನೋ ಉತ್ತರ ಕೊಟ್ಟಿದ್ದೆನಂತೆ. ಹಾಗಾಗಿ ಈ ಮಂಪರಿನ ವಿಷಯ ಅರಿತು ಗಾಢ ನಿದ್ರೆಯಲ್ಲಿ ನಾನು ಇದ್ದಾಗ ಯಾರದಾದರೂ ಫೋನ್ ಬಂದರೆ, ಅದನ್ನು ಸ್ವೀಕರಿಸಿ, "ಐದು ನಿಮಿಷ, ನಾನೇ ಫೋನ್ ಮಾಡುತ್ತೇನೆ" ಎಂದು ಹೇಳಿ ನಿದ್ದೆಯಿಂದ ಎದ್ದು ಐದು ನಿಮಿಷದ ನಂತರ ಫೋನ್ ಮಾಡುತ್ತೇನೆ.

ನನ್ನ ಕಾಲೇಜು ಗೆಳೆಯ ಮಂಜುನಾಥ ಬೆಳಗ್ಗೆಯಿಂದ ನಡೆದ ಎಲ್ಲಾ ಸಂಗತಿಗಳನ್ನು ರಾತ್ರಿ ನಿದ್ದೆ ಮಂಪರಿನಲ್ಲಿ ವದರಿ ವರದಿ ಒಪ್ಪಿಸುತ್ತಿದ್ದದ್ದು ಈ ಲೇಖನ ಬರೆಯುತ್ತಿದ್ದಾಗ ನೆನಪಿಗೆ ಬಂತು.

ಮತ್ತೇ ಗುರುಗಳ ವಿಷಯಕ್ಕೆ ಬರೋಣ. ಅಲ್ಲಿ ಅವರು ಜಯಸಿಂಹ ಎಂದು ಮನಸ್ಸಿನಲ್ಲಿ ಅಡಗಿದ್ದ ಯಾವುದೋ ಹಳೆಯ ಪ್ಲೇಟ್ ಓಡಿಸಿದಾಗ ನನಗಂತೂ ತುಂಬಾ ಭಯವಾಯಿತು. ಯಾವುದೇ ಕಾರಣಕ್ಕೂ ನಾನು ಈ ಸ್ಥಿತಿಗೆ ಹೋಗಬಾರದು. ಹಾಗೇನಾದರು ಈ ರೀತಿ ನನಗೆ ಆಗಿ, ನಿದ್ದೆಯ ಅಥವಾ ಅರವಳಿಕೆಯ ಪ್ರಭಾವದಿಂದ ಮಂಪರಿನಲ್ಲಿ ನಾನು "ಸುಶ್ಮಾ, ನಾಳೆ ನಮ್ಮ ಮನೆಯಲ್ಲಿ ಯಾರು ಇರೋಲ್ಲ, ನಮ್ಮ ಮನೆಗೆ ಬಾ", ರೋಜಾ, ನಿನ್ನೆ ಯಾಕೆ ಬರಲಿಲ್ಲ?", ನಳಿನಿ, ನಾನು ನಾಳೆ ನಿಮ್ಮ ಮನೆಗೆ ಬರಲೇ?" ಎಂದೆಲ್ಲಾ ವದರಿಬಿಟ್ಟರೆ, ಆಜನ್ಮ ಬ್ರಹ್ಮಚಾರಿಯೆಂದು ನನ್ನನ್ನು ತಿಳಿದುಕೊಂಡಿರುವ ಬಂಧುಬಳಗ ಏನೇನನ್ನು ಊಹಿಸಿಕೊಂಡಾರು.

ಈ ಮಂಪರಿನ ಬಗ್ಗೆ ಇನ್ನೂ ಹೆಚ್ಚು ಸಂಶೋಧನೆ ನನ್ನ ಕಡೆಯಿಂದ ಆಗಬೇಕಿದೆ. ಇಲ್ಲಿ ಮಂಪರಿನಲ್ಲಿರುವ ವ್ಯಕ್ತಿಯು ತನ್ನ ಜೀವನದ ಸತ್ಯದ ಘಟನೆಗಳನ್ನೂ ಮಾತ್ರ ವದರುತ್ತಾನೋ ಅಥವಾ ಹಿಂದೆ ತಾನು ಮನದಲ್ಲಿಟ್ಟುಕೊಂಡು ಆಡದೇ ಉಳಿದುಕೊಂಡಿದ್ದ ಮಾತುಗಳನ್ನೂ ವದರಿಬಿಡುತ್ತಾನೋ ಎಂಬ ಸಂಶಯ ಇದೆ. ನನ್ನ ವಿಷಯದಲ್ಲಿ ಇವೆರಡರಲ್ಲಿ ಯಾವುದಾದರೂ ಕಷ್ಟವೇ ಆಗಬಹುದು. ಇದರ ಬಗ್ಗೆ ಇನ್ನೂ ಬರೆಯುವ ಆಸೆ ಇದೆ. ಆದರೆ ಧೈರ್ಯ ಇಲ್ಲ, ಮಂಪರಿಲ್ಲದೆ ಎಚ್ಚರವಾಗಿದ್ದಾಗಲೇ ಈ ಲೇಖನದ ಮೂಲಕ ನನ್ನ ಬಹಳಷ್ಟು ಮಾಹಿತಿಯನ್ನು ನಿಮಗೆಲ್ಲಾ ಕೊಟ್ಟುಬಿಟ್ಟೆನೇ ಎಂಬ ಭಯ ಆರಂಭವಾಗಿದೆ.

***

# ಪುಕ್ಕಲ ಪಂಡಿತ

– ಶಾಂತಿ ವಾಸು

ಮಂಜ ತುಂಬಾ ಚುರುಕು. ಒಂದು ಕಡೆ ಕೂರುವ ಜನ್ಮವಲ್ಲ. ವಯಸ್ಸು ನಲವತ್ತೊಂದಾದರೂ ನಿಧಾನವಾಗಿ ನಡೆಯುವುದು ಅವನಿಗೆ ತಿಳಿದಿಲ್ಲ. ಏನಿದ್ದರೂ ದಡದಡನೇ ಓಡುವುದೇ. ಓಡುವ ಭರದಲ್ಲಿ ಎಡವಿದ್ದು ಎಷ್ಟು ಸಲವೋ. ಮನೆಯ ಯಾವುದಾದರೂ ಸಣ್ಣ ಸಮಾರಂಭವಾದರೂ ಮುಗಿದೇಹೋಯಿತು. ಕೆಲಸ ಮಾಡುವುದಕ್ಕಿಂತ ಓಡಾಡಿಯೇ ಸುಸ್ತಾಗುತ್ತಾನೆ.

ಹೆಂಡತಿ ವಿಮಲಾ ಹನ್ನೆರಡು ವರ್ಷದ ಮಗನನ್ನು ಕರೆದುಕೊಂಡು ತವರಿಗೆ ಹೋದಳೆಂದರೆ ರಾತ್ರಿ ಹೊತ್ತು ಮನೆಯಲ್ಲಿರಲು ಹೆದರುವ ಪುಕ್ಕಲ, ಅವಳಿಲ್ಲದಾಗ ಊಟ ಮಾಡಿ ಲೈಟು ಆರಿಸದೇ ಮಂಚದ ಮೇಲೆ ಹತ್ತಿದರೆ, ಎಷ್ಟೇ ಅವಸರವಾದರೂ ಬೆಳಗಾಗುವ ತನಕ ಮೂತ್ರವನ್ನೂ ವಿಸರ್ಜಿಸದೇ ತಡೆದುಕೊಂಡು ಮಲಗುತ್ತಿದ್ದ. ಇನ್ನು ನಿದ್ದೆಯಲ್ಲಿ ಎಚ್ಚರವಾದರಂತೂ ಮುಗಿದೇಹೋಯಿತು. ಕಣ್ಣು ರೆಪ್ಪೆಗಳನ್ನು ಅಗಲ ಮಾಡಿಕೊಂಡು ಕೂತಿರುತ್ತಾನೆ. ಯಾಕೆಂದರೆ ಕಣ್ಣು ಮುಚ್ಚಿದ ಕೂಡಲೇ ದೆವ್ವ ಪ್ರತ್ಯಕ್ಷವಾಗುತ್ತದೆ ಎನ್ನುವ ಭಯ. ವಾಪಸ್ ಬಂದ ಹೆಂಡತಿಗೆ ಹೇಳಿಕೊಂಡರೆ, "ದೆವ್ವ ಬಂದಾಗ ನೋಡಿಕೊಂಡರೆ ಆಯ್ತು. ಬರೋಕ್ಕೆ ಮೊದಲೇ ಯಾಕಷ್ಟು ಹೆದರ್ತೀರ?" ಎನ್ನುವುದೂ ಇದೆ. ಆದರೆ ಇವೆಲ್ಲಕ್ಕೂ ಕಲಶವಿಟ್ಟಂತೆ ಅಪರಿಮಿತ ಕುತೂಹಲಿ. ಈ ಸ್ವಭಾವದಿಂದಲೇ ಅನೇಕ ಬಾರಿ ಪೇಚಿಗೆ ಸಿಲುಕಿ ತತ್ತರಿಸುತ್ತಿದ್ದ.

ರಾತ್ರಿ ಎರಡು ಗಂಟೆ ಆಗಿರಬಹುದು. ಎಲ್ಲಿಯೋ ಒಬ್ಬ ಹೆಣ್ಣು ಚೀರುವ ಸದ್ದು. ಇವನ ಹೆಂಡತಿಯ ದೊಡ್ಡ ಹಾಗೂ ದೀರ್ಘ ಗೊರಕೆಯನ್ನು ಸೀಳಿಕೊಂಡು ಬಂದು ನಿದ್ರಿಸುತ್ತಿದ್ದ ಮಂಜನ ಕಿವಿಗೆ ಅಪ್ಪಳಿಸಿತು. ಸಾಮಾನ್ಯವಾಗಿ ಕುತೂಹಲಿಗಳಿಗೆ ನಿದ್ದೆ ಕಡಿಮೆ. ಕಿವಿಗೊಟ್ಟು ಕೇಳಿದ. ಅದು ಕೇವಲ ಒಬ್ಬಳದಲ್ಲ. ಐದಾರು ಜನ ಎದೆ ಬಡಿದುಕೊಂಡು ಅಳುವ ಶಬ್ದ ಎನ್ನುವ ಅನುಮಾನ ಬಂತು ಅವನಿಗೆ. ದಡಬಡನೆ ಎದ್ದು ಓಡಿಹೋಗಿ ಉಂಗುಷ್ಟದಲ್ಲಿ ನಿಂತು ಮನೆಯ ಎಲ್ಲ ಕಿಟಕಿಗಳನ್ನೂ ಇಣುಕಿ ನೋಡಿದರೆ ಏನೇನೂ ಕಾಣಲಿಲ್ಲ. ಹೆಂಡತಿಯಿರುವ ಧೈರ್ಯದಿಂದ ನೈಟ್ ಲೈಟನ್ನೂ ಹಾಕಿಲ್ಲ ಪುಣ್ಯಾತ್ಮ. ಇರುವುದು ಮೊದಲನೇ ಮಹಡಿಯಲ್ಲಿ.

ಕ್ಷಣಕ್ಷಣಕ್ಕೂ ಕುತೂಹಲ ಹೆಚ್ಚಾಗಿ ಬೆಳಕಿಲ್ಲದ ಕಥೆ ಗಮನಕ್ಕೇ ಬರಲಿಲ್ಲ. ತಕ್ಷಣ ಬಾಗಿಲು ತೆರೆದವನೇ ಮುಚ್ಚುವುದನ್ನೂ ಮರೆತು ದಡದಡನೇ ಮೂರನೇ ಮಹಡಿಯ ಮೇಲಿನ ಟೆರೇಸಿಗೆ ಹೋಗಿಯೇಬಿಟ್ಟ. ನೋಡಿದರೆ ಹಿಂದಿನ ಬೀದಿಯ ಒಂದು ಮನೆಯಲ್ಲಿ ವಿದ್ಯುತ್ ದೀಪಗಳು ಉರಿಯುತ್ತಿವೆ. ಆಗ ತಾನೇ ಪ್ರಾಣಬಿಟ್ಟ ತನ್ನ ಗಂಡನಿಗಾಗಿ ತಲೆಕೂದಲು ಹರಡಿಕೊಂಡು ಕುಳಿತ ನಡುವಯಸ್ಸಿನ ಅವನ ಹೆಂಡತಿ ಚೀರುತ್ತಿದ್ದಾಳೆ. ಜೊತೆಗೊಂದಿಬ್ಬರೂ ಸೇರಿದ್ದರು. ಅರ್ಧ ರಾತ್ರಿ ಮೀರಿದ ನಿಶ್ಯಬ್ದದಲ್ಲಿ ಅವರು ಹೇಳುವ ಪದಗಳಿಂದ ಗಂಡಸು ಸತ್ತು ಅವನ ಹೆಂಡತಿ ಅಳುತ್ತಿರುವುದು ತಿಳಿಯಿತು. ಮಿಕ್ಕ ಕೆಲವರು ಸೆರಗು ಬಾಯಿಗಿಟ್ಟು ನಿಂತಿದ್ದರು. ಗಂಡಸರು ಅಲ್ಲಲ್ಲೇ ಗುಂಪಾಗಿ ನಿಂತು ಚರ್ಚಿಸುವ ದೃಶ್ಯವನ್ನು ತುದಿಗಾಲಿನಲ್ಲಿ ನಿಂತು, ನೋವಾಗುವ ತನಕ ಕತ್ತು ಜಗ್ಗಿ ನೋಡಿದ. ಸರಿ ಅಳುವಿಗೆ ಕಾರಣ ತಿಳಿಯಿತು. ಕುತೂಹಲ ತಣಿಯಿತು.

ಈಗ ಅವನಿಗೆ ತಾನಿರುವ ಸ್ಥಳ, ಪರಿಸ್ಥಿತಿ ಹಾಗೂ ಸಮಯದ ನೆನಪಾಯಿತು. ಮುಂದೇನು? ಸುತ್ತಲೂ ನೋಡುತ್ತಾನೆ. ಕತ್ತಲ ಸಾಮ್ರಾಜ್ಯದಲ್ಲಿ ನಿಂತವನಿಗೆ ದೂರದ ಬೆಳಕಿನಲ್ಲಿ ಹೆಣ ಮತ್ತು ಕೂದಲು ಹರಡಿದ ಅವನ ಹೆಂಡತಿ ಭಯಂಕರವಾಗಿ ಕಂಡು ಕಾಲುಗಳು ಗಡಗಡನೇ ನಡುಗತೊಡಗಿತು. "ವಿಮ್ಮು ವಿಮ್ಮು" ಎಂದು ನಿಂತಲ್ಲೇ ಕಿರುಚತೊಡಗಿದ. ಅಲ್ಲೆಲ್ಲೋ ಅಳುವ ಜನರ ಸದ್ದಿನೊಂದಿಗೆ ಇವನ ಸ್ವರ ಬೆರೆತುಹೋಯಿತು. ವಿಮ್ಮು ಇರುವುದು ಮೊದಲ ಮಹಡಿಯಲ್ಲಿ ಅಂತ ನಿಮಗೆ ನೆನಪಿದೆಯೇ? ಅದೂ ಗಾಢ ನಿದ್ದೆ ಅವಳಿಗೆ. ಹಾಗಾಗಿ ಅವಳಿಗೆ ಇವನ ಧ್ವನಿ ಕೇಳುವುದು ಅಸಾಧ್ಯ. ಇವನು ಚಿಕ್ಕವನಿರುವಾಗ ಚಡ್ಡಿ ಹಾಕಿಕೊಂಡು ಗೋಲಿ, ಬುಗುರಿ ಆಡಲು ನೆರಳು ಕೊಡುತ್ತಿದ್ದ ಒಂದು ಮರ ಬೇರೆ ಹಿಂದಿನ ರಸ್ತೆಯಲ್ಲಿತ್ತು.

ಅದು ಹುಣಸೇ ಮರ. ಇಷ್ಟು ವರ್ಷಗಳೂ ಆ ಮರವನ್ನು ಕೇವಲ ಹಗಲಲ್ಲಿ ಮಾತ್ರವೇ ನೋಡಿದ್ದ. ಆಫೀಸಿನಿಂದ ಬರುವಾಗ ಅಥವಾ ಇನ್ನೇನು ಕೆಲಸವಿದ್ದರೂ ಸಂಜೆ ಹೊತ್ತು ಆ ರಸ್ತೆಯನ್ನ ಸಾಧ್ಯವಾದಷ್ಟು ತಪ್ಪಿಸುತ್ತಿದ್ದ. ಇವನು ಹತ್ತಿರ ಸುಳಿಯದ ಕೋಪಕ್ಕೆ ಬೀದಿ ದೀಪದ ಹಿನ್ನೆಲೆಯಲ್ಲಿ ರೌದ್ರ ರೂಪ ತಾಳಿತ್ತು ಆ ಮರ. ಅದೂ ಅವನನ್ನು ಹಾಗೆ ಹೆದರಿಸಬೇಕೇ? ಪಾಪ ಹೆಂಡತಿಯನ್ನು ಕೂಗಿ ಕರೆಯುವ ಅವಕಾಶವೇ ಇಲ್ಲದಂತೆ ಬಾಯಲ್ಲಿನ ಪಸೆ ಆರಿಹೋಗಿತ್ತು.

ಭಯವಂತೂ 'ಒಂದೇ ಒಂದು ಕ್ಷಣವೂ ನಿಲ್ಲಬೇಡ. ಓಡು ಓಡು' ಅನ್ನುತ್ತಿದೆ. ಆದರೆ ನಡುಗುವ ಕಾಲು ಸಹಕರಿಸಬೇಕಲ್ಲಾ? ದಿಕ್ಕು ತೋಚದೆ ಕುಸಿದು ಕುಳಿತ. ಹೆಣ ಹಾಗೂ ಮರಕ್ಕೆ ತಾನು ಕಾಣಿಸಿಕೊಳ್ಳಬಾರದು ಎನ್ನುವ ಹುಷಾರಿಯಿಂದ ಕುಳಿತಂತೆಯೇ ದೇಕುತ್ತ ಹೋಗಿ, ಒಂದೊಂದೇ ಮೆಟ್ಟಿಲನ್ನು ಇಳಿದು ಒಂದು ಮಹಡಿ ದಾಟಿದನಷ್ಟೇ. ತಲೆ ಕೆದರಿಕೊಂಡು ಅಳುತ್ತಿದ್ದ ಆ ಹೆಂಗಸಿನ ಆಕಾರ ಎದುರಿನಲ್ಲಿ ಕಂಡಿತು. "ಇಲ್ಲೇ ನೋಡೋದು ಬಿಟ್ಟು ಅಲ್ಲಿ ತನಕ ಯಾಕೆ ಹತ್ತುದ್ನಪ್ಪಾ?" ಎಂದುಕೊಂಡ. ಅವನಿಗೆ ಓಡಿ ಬಂದು ಅದೇನಾಗುತ್ತಿದೆಯೋ ಎಂದು ನೋಡುವ ಆತುರದಲ್ಲಿ ಆ ಎಲ್ಲಾ ಕಲಾಪಗಳನ್ನೂ ತನ್ನ ಮನೆಯ ಬಾಗಿಲು ತೆರೆದೊಡನೆ ಅಲ್ಲಿಂದಲೇ ನೋಡಬಹುದು ಅನ್ನುವ ವಿಷಯ ನೆನಪೇ ಆಗಲಿಲ್ಲ.

ಪೆಟ್ಟಾದ ಕಾಲಿಗೇ ಮತ್ತೆ ಪೆಟ್ಟಾಗೋದು ಅನ್ನೋ ಹಾಗೆ ಎಲ್ಲ ಅನ್ಯಾಯವೂ ಇವನಿಗೆ ಆಗುತ್ತಿತ್ತು ನೋಡಿ. ಸಾವಾಗಿರುವ ಮನೆಗೂ ಇವನಿಗೂ ನಡುವಿನ ಮೈದಾನದಲ್ಲಿ ಕಪ್ಪಗೆ ಅದೇನೋ ನಿಂತಿದೆ. ಬೇಡ ಬೇಡವೆಂದರೂ ಕಣ್ಣು ಅತ್ತಲೇ ಹೊರಳಿತು. ಅದರ ಕಣ್ಣುಗಳು ರೇಡಿಯಂ ತರಹ ಹಸಿರಾಗಿ ಹೊಳೆಯುತ್ತಿದೆ. ಅದು ಬೇರೆ ಇವನನ್ನೇ ನೋಡುತ್ತಿದೆ. ರಾತ್ರಿ ಹೊತ್ತು ಓಡಾಡುವ ಎಲ್ಲರಿಗೂ ಅದು ಬೆಕ್ಕು ಎಂದು ತಿಳಿಯುತ್ತದೆ. ಆದರೆ ಮಂಜನ ಪ್ರಯತ್ನವಿಲ್ಲದೆಯೇ ಕಣ್ಣುಗುಡ್ಡೆಗಳು ಒಡೆದೇ ಹೋಗುವಷ್ಟು ದೊಡ್ಡದಾಗಿ ತೆರೆದುಕೊಂಡು ಮುಚ್ಚಲಾಗದೆ ಹೋಯಿತು. ಹೊಟ್ಟೆಯ ಮಾಂಸಖಂಡ ಸಡಿಲವಾಗಿ ಮೆಟ್ಟಿಲಿನಿಂದಲೇ ಪಲ್ಟಿ ಹೊಡೆದುಕೊಂಡು ಕೆಳಗುರುಳಿದ. ಅಷ್ಟು ಉರುಳಿದ ಮೇಲೆ ಮುಚ್ಚಲಾಗದಿದ್ದ ಕಣ್ಣು ಮುಚ್ಚಿ ಕೊಂಡಿತು. ಐದಾರು ಮೆಟ್ಟಿಲು ಉರುಳುವಷ್ಟರಲ್ಲಿ ಝಗ್ಗನೆ ಲೈಟು ಹೊತ್ತಿತು. ಭಯ ತಾಳಲಾರದೆ ಕಣ್ಣು ಮುಚ್ಚಿಕೊಂಡು "ಅಯ್ಯಯ್ಯಪ್ಪಾ" ಚೀರಿಬಿಟ್ಟ. "ಇಷ್ಟು ರಾತ್ರಿನಲ್ಲಿ ಏನ್ಮಾಡ್ತಾ ಇದ್ದೀರ ಇಲ್ಲಿ?" ಕೇಳಿದಳು ವಿಮಲಾ.

ದೆವ್ವಗಳ ಸಾಮ್ರಾಜ್ಯದಲ್ಲಿ ದಿಕ್ಕು ತೋಚದೆ ವಿಲವಿಲಗುಟ್ಟುವವನಿಗೆ ಅಮೃತ ಹಿಡಿದು ನಿಂತ ದೇವತೆಯಂತೆ ಕಂಡಳು ವಿಮಲಾ. ಅವನೆಂದಿಗೂ ತಾನು ಧೈರ್ಯವಂತ ಎಂದು ಅವಳಲ್ಲಿ ಹೇಳಿಕೊಂಡಿಲ್ಲ. ಅವನ ಪುಕ್ಕಲತನ ಅವಳಿಗೂ ಹೊಸದಲ್ಲ. ಅದಕ್ಕಾಗಿಯೇ ತವರುಮನೆಗೆ ಹೋದರೂ ಎರಡು ಮೂರು ದಿನದಲ್ಲೇ ವಾಪಸ್ ಬಂದೇಬಿಡುತ್ತಾಳೆ. ಬರುವಾಗ "ಅದೇನು ಅವಾಂತ್ರ ಮಾಡ್ಕೊಂಡಿದ್ಯೋ ಪ್ರಾಣಿ, ಹೋಗಿ ನೋಡ್ತೀನಿ" ಎಂದೋ, "ಭಯ ಇರೋದ್ರಿಂದ ಸಾಯಂಕಾಲ ಆರು ಗಂಟೆ ಒಳ್ಗೆ ಮನೆಗೆ ಬಂದು ಬಿದ್ದಿರ್ತಾರೆ. ಇಲ್ದೇ ಇದ್ದಿದ್ರೆ ಅವನಪ್ಪನ ತರ ಮೂರು ಮದ್ವೆ ಆಗಿರ್ತಿದ್ರು" ಎನ್ನುವ ಸಮಾಧಾನದ ಮಾತು ಹೇಳಿ ಬರುತ್ತಿದ್ದಳು. ಅವನು ಇಷ್ಟಕ್ಕೂ ಇಂಥಹವರನ್ನ ಸಿನಿಮಾಗಳಲ್ಲಿ ತೋರಿಸೋ ಹಾಗೆ ಸಣ್ಣಗೇನೂ ಇರಲಿಲ್ಲ. ದಪ್ಪ ಎನ್ನಲೂ ಆಗದ ಮೈಕಟ್ಟಿನ ಎತ್ತರದ ಮನುಷ್ಯ.

ಅವನ ತಾಯಿ ಮಂಜಮ್ಮ "ಈ ಗಾತ್ರ ಇರೋವನ್ನ ದೆವ್ವ ಭೂತ ಏನು ಮಾಡುತ್ತೆ ಅಂತ ಅಷ್ಟು ಹೆದರ್ತೀಯ? ಇರೋವ್ರೆಲ್ಲಾ ನಿನ್ನಂಗೇ ಇದ್ದಾರಾ ಅಂತ ಸ್ವಲ್ಪ ಗಮನಿಸಿ ನೋಡಪ್ಪಾ" ಎಂದು ಎಷ್ಟು ಹೇಳಿದರೂ ಊಹೂಂ ಉಪಯೋಗವಿಲ್ಲ. ಹೆಂಡತಿ ಇರುವ ಧೈರ್ಯದಿಂದ ಮಾರ್ಕೆಟ್ಟು, ಸಿನಿಮಾ, ಟ್ರಿಪ್ಪುಗಳಿಗೆ ಹೋಗಿ ಬರುತ್ತಿದ್ದ. ಅವನು ಹಾಗಿದ್ದಷ್ಟೂ ತನಗೇ ಒಳ್ಳೆಯದ್ದೆಂದು ಹೆಂಡತಿ ಅವನನ್ನು ತಿದ್ದುವ ಗೋಜಿಗೇ ಹೋಗುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಅವನ ಗಲಿಬಿಲಿಗೆ ಹೊಟ್ಟೆ ಹಿಡಿದು ನಗುತ್ತಿದ್ದಳು. ಇನ್ನು ಮೇಲಿನಿಂದ ಬಿದ್ದ ಮಂಜ ಏನಾದ ಅಂತ ನೋಡೋಣ ಬನ್ನಿ.

ಹೆಂಡತಿಯಿದ್ದ ಮೇಲೆ ಇನ್ನೇನು ಭಯ? ಕಣ್ಣು ಬಿಟ್ಟು "ಜ್ವರ ಬಂದಿದ್ಯಾ ನೋಡು ವಿಮ್ಮು" ಎಂದ. "ಏನ್ರೀ ವಿಚಿತ್ರ ನೀವು? ಭಯ ಅಂತೀರ. ಅರ್ಧ ರಾತ್ರಿನಲ್ಲೇ ಟೆರೇಸ್ ಮೇಲೆಲ್ಲಾ ಓಡಾಡ್ತೀರ. ಸಿಕ್ಕಾಪಟ್ಟೆ ಕ್ಯೂರಿಯಾಸಿಟಿ ಮನುಷ್ಯ ನೀವು. ನಿದ್ದೆನಲ್ಲಿ

ನಡೆಯೋ ರೋಗ ಅನ್ನೋ ಹಾಗೂ ಆಗಲ್ಲ. ನೀವು ಯಾಕೆ ಹೀಗಾಡ್ತೀರೋ ನಂಗೊಂದೂ ಅರ್ಥ ಆಗಲ್ಲ. ಎದ್ದು ಬನ್ನಿ" ಎಂದು ಒಳಗೆ ಹೋದರೆ, ಹೆಣವಿದ್ದ ಕಡೆ ನೋಡುತ್ತಾ "ಇರು. ನಾನು ಫಸ್ಟ್" ಎನ್ನುತ್ತಾ ಎದ್ದು ಅವಳಿಗಿಂತ ಮೊದಲು ಒಳಗೆ ಓಡಿದ. "ಅಯ್ಯೋ ದೇವ್ರೇ, ಅರ್ಧ ರಾತ್ರಿನಲ್ಲಿ ನಿಮ್ಮ ರನ್ನಿಂಗ್ ರೇಸಾ? ಎಲ್ಲಿ ಹೋಗಿದ್ದೀರ ಅಂತ ನೋಡೋಕ್ಕೆ ನಾನೆದ್ದು ಬಂದ್ರೆ, ಹೀಗೆ ಬಿಟ್ಟು ಓಡೋಗ್ತಾ ಇದ್ದೀರಲ್ಲಾ? ಆ ದೆವ್ವ ನನ್ನನ್ನ ಹಿಡ್ಕೊಳ್ಳಲ್ವಾ?" ಎಂದು ಜೋರಾಗಿಯೇ ಗೊಣಗುತ್ತಾ ಬಾಗಿಲು ಜಡಿದಳು ವಿಮಲಾ. ಕುತೂಹಲದಿಂದ ಇವನು ಪೇಚಾಡುವ ಕಥೆ ಇಷ್ಟಕ್ಕೇ ನಿಲ್ಲುವುದಿಲ್ಲ. ಇನ್ನೂ ಬೀದಿ ಜಗಳದ ಕಥೆ ಒಂದಿದೆ. ಹೇಳ್ತೀನಿ.

ಒಂದು ವಿಷಯ ಈ ಮೊದಲೇ ಹೇಳಬೇಕಿತ್ತು. ಈಗಲೂ ಏನೂ ಮಿಂಚಿಹೋಗಿಲ್ಲ ಬಿಡಿ. ಮಂಜ ಒಂದು ನಾಯಿಯನ್ನ ಸಾಕಿಕೊಂಡಿದ್ದ. ಹೆಸರು ಟಾಮಿ. ಅದು ಅವನಿಗೆ ಕಾವಲು. ಅದೇನೋ ಪಾಪ ನಿಯತ್ತಿನ ಪ್ರಾಣಿ. ಸ್ವಾರ್ಥವಿಲ್ಲದೆ ಕಾಯುವ ಕೆಲಸ ಮಾಡುತ್ತದೆ. ಆದರೆ ಮಂಜನ ಪುಕ್ಕಲು ಸ್ವಭಾವ ಯಾರನ್ನೂ ನಂಬಲು ಬಿಡುವುದಿಲ್ಲ. ಭಯವಾಗುತ್ತದೆ ಎಂದರೆ ಮತ್ತೊಂದು ಯೋಚನೆ ಮಾಡುತ್ತಿರಲಿಲ್ಲ. ಕುತೂಹಲವೂ ಅಷ್ಟೇ, ತನ್ನ ಕುತೂಹಲ ತಣಿಯುವ ತನಕ ಬೇರೆ ಏನೂ ಕಣ್ಣಿಗೆ ಕಾಣುವುದೂ ಇಲ್ಲ. ಅಮ್ಮ ಹಾಗೂ ಹೆಂಡತಿ ಹೇಳುವ ಬುದ್ಧಿ ಮಾತುಗಳು ನೆನಪಿಗೆ ಬರುವುದೂ ಇಲ್ಲ. ಒಂಥರಾ ಗಲಿಬಿಲಿ ಹಾಗೂ ಪುಕ್ಕಲು ಹೆಚ್ಚಾಗಿರುವ ವಿಚಿತ್ರ ಸ್ವಭಾವದವನು.

ಭಾನುವಾರವಾದ್ದರಿಂದ ಆರಾಮವಾಗಿ ಎದ್ದು ಹೆಂಡತಿ ಕೊಟ್ಟ ಕಾಫಿ ಹೀರುತ್ತಾ ಪೇಪರ್ ಓದುತ್ತಿದ್ದ. ಕೆಳಗೆ ಅದ್ಯಾರೋ "ಥೂ ನಾಯಿ" ಎಂದ ಮಾತು ಕಿವಿಗೆ ಬಿದ್ದಿದ್ದೇ ತಡ ಝುಗ್ಗನೆ ಎದ್ದೇಬಿಟ್ಟ. ಪಕ್ಕದಲ್ಲೇ ಅಡಿಷನಲ್ ಪೇಪರ್ ಓದುತ್ತಿದ್ದ ವಿಮಲಾ "ಸುಮ್ನೆ ಕೂತ್ಕೊಳ್ರೀ. ಅವರ್ಯಾರೋ ಏನೋ? ನಿಮಗ್ಯಾಕೆ ಕ್ಯುರಿಯಾಸಿಟಿ" ಎನ್ನುತ್ತಿರುವುದು ಅವನ ತಲೆಗೆ ಹೋಗಲೇ ಇಲ್ಲ. ಕಾಲನ್ನ ಟೀಪಾಯಿಯ ಆ ಕಡೆ ಇಟ್ಟು ದಾಟಿಕೊಂಡು ಹೊರಗೆ ಹೋಗೇಬಿಟ್ಟ. ವಿಮಲ ಎದ್ದು ಹಾಲಿನಲ್ಲಿ ಬೀದಿಯ ಕಡೆಗಿದ್ದ ಕಿಟಕಿಯಿಂದ ಕೆಳಗೆ ನೋಡಿದಳು. ಒಬ್ಬ ಕೊಳಕು ಬಟ್ಟೆ ಹಾಕಿಕೊಂಡು ಕಂಠಪೂರ್ತಿ ಸಾರಾಯಿ ಕುಡಿದು ನಿಲ್ಲಲೂ ಆಗದೆ ತೂರಾಡುವ ಒಬ್ಬ ಮನುಷ್ಯ ಇವರ ಮನೆಯತ್ತಲೇ ನೋಡುತ್ತಿದ್ದ.

ಸುಮ್ಮನಾಗಿದ್ದವನು ಮತ್ತೆ ಪ್ರಾರಂಭಿಸಿದ. "ಥೂ ನಾಯಿ, ಎಷ್ಟು ಅಹಂಕಾರ ನಿನಗೆ? ಕೈಗೆ ಸಿಕ್ಕು ಮಾಡ್ತೀನಿ" ಅನ್ನುತ್ತಿದ್ದಾನೆ. ಅದಾಗಲೇ ಅವಳಿಗೆ ಅರ್ಥವಾಗಿತ್ತು. ರಸ್ತೆ ಕಡೆಗೆ ಕಟ್ಟಿದ್ದ ಟಾಮಿ ನೆಲದ ಮೇಲೆ ಬೀಳುವಂತೆ ಮೂತ್ರ ವಿಸರ್ಜಿಸಿರುತ್ತದೆ. ಅದೇ ಸಮಯದಲ್ಲಿ ಆ ಕುಡುಕ ಮನುಷ್ಯ ಕೆಳಗಿದ್ದಿರಬಹುದು. ಮೂತ್ರಾಭಿಷೇಕ ಮಾಡಿದ ನಾಯಿಯನ್ನು ಬಯ್ದು ಸುಮ್ಮನಾಗಿದ್ದ. ಸ್ವಲ್ಪ ಹೊತ್ತು ಬಿಟ್ಟಿದ್ದರೆ ಸುಮ್ಮನೆ ಹೋಗಿರುತ್ತಿದ್ದ. ಆದರೆ ಮಂಜ ಎದೆಯೊಡ್ಡಿ ಹೋಗಿ ನಿಂತಿದ್ದನ್ನು ನೋಡಿ ಮತ್ತೆ ಬಯ್ಗುಳ ಶುರುಮಾಡಿದ್ದ. ಏನೋ ಅನ್ನುತ್ತಿದ್ದಾನೆಂದು ಟಾಮಿ ಕೂಡ ಅವನನ್ನು ವಾಪಸ್ ಏನೋ ಅನ್ನುತ್ತಿದೆ. ಕಿಟಕಿಯಿಂದ ವಿಮಲಾಳಿಗೆ ಒಂದು ಗಲಾಟೆಯ ಆರಂಭಿಕ ದೃಶ್ಯ ಕಾಣುತ್ತಿದೆ.

ಅವಳ ಕುತೂಹಲ ಕಿಟಕಿಯವರೆಗೆ ಮಾತ್ರ. ಆದರೆ ಮಂಜ ಮಾತ್ರ ಎದ್ದು ಬಿದ್ದು ಹೊರಗೆ ಓಡಿದ್ದ. ಇವನಿಗೂ ಹೆಂಡತಿಗೆ ಕಂಡ ಅದೇ ದೃಶ್ಯವೇ ಕಾಣುತ್ತಿದೆ. ಸಹಜವಾಗಿಯೇ ಆ ಕುಡುಕನ ಕಣ್ಣಿಗೆ ಇವನು ಬಿದ್ದೇಬಿಟ್ಟ. ಕುಡುಕನ ಸಾಮರ್ಥ್ಯಕ್ಕೂ ಐದಾರು ಜನ ಸೇರಿದ್ದರು ಅಲ್ಲಿ. ಅವನು ನೇರವಾಗಿ ಇವನನ್ನು ಬಯ್ಯದೆ, "ಥೂ ಬೇವಾರ್ಸಿ ನಾಯಿ, ಅದಕ್ಕೆ ನಿನ್ನ ಎಲ್ಲಿಡ ಬೇಕೋ ಅಲ್ಲಿಡಬೇಕು. ನಾಯಿನ ಸಿಂಹಾಸನದಲ್ಲಿ ಕೂರಿಸಿದ್ರೂ ಗಲೀಜು ತಿನ್ನೋದು ತಪ್ಪಲ್ಲ. ನಾಚಿಕೆ ಆಗಲ್ವಾ ನಿಂಗೆ? ನೀನು ನನ್ಮೇಲೆ ಉಚ್ಚೆ ಉಯ್ದುಬಿಟ್ಟೆ ತಾನೇ? ನಾನು ನಿನ್ಮೇಲೆ ಉಯ್ಲಾ? ಹೇಳು ಉಯ್ಲಾ? ನಂಗೇನು ಉಚ್ಚೆ ಉಯ್ಯೋಕ್ಕೆ ಬರಲ್ವಾ. ಬಾ, ಇವತ್ತು ನಾನಾ? ನೀನಾ? ತೀರ್ಮಾನ ಆಗೇಹೋಗ್ಲಿ" ಎನ್ನುತ್ತಿದ್ದಾನೆ. ಮಂಜನ ಕಡೆಯೇ ನೋಡುತ್ತಾ ಪಂಥಕ್ಕೆ ಆಹ್ವಾನಿಸುತ್ತಿದ್ದಾನೆ. ಮಂಜ ಈಗ ಏನು ಮಾಡಬಹುದು ಅನ್ನುವ ಕುತೂಹಲದಿಂದ ಇನ್ನೊಂದು ಕಿಟಕಿಯ ಕಡೆ ಧಾವಿಸಿದಳು ವಿಮಲಾ.

ನಾಯಿಯನ್ನ ನೋಡುತ್ತಿದ್ದ ಮಿಕ್ಕ ಜನರು ಇವನನ್ನು ನೋಡಿದರೆ ಏನೋ ಆಗಿಬಿಡುತ್ತದೆ ಎನ್ನುವಂತೆ ಗಲಿಬಿಲಿಗೊಂಡ ಮಂಜ ದಡಕ್ಕನೇ ನೆಲದ ಮೇಲೆ ಕುಳಿತೇಬಿಟ್ಟ. ಅಷ್ಟೇ ಅಲ್ಲ, ಅಂಬೆಗಾಲಿಕ್ಕಿಕೊಂಡು ಉದ್ದದ ಓಣಿ ದಾಟಿ ಬಂದು ಮೊದಲು ಪೇಪರ್ ಓದುತ್ತಿದ್ದ ಜಾಗದಲ್ಲೇ ಕುಳಿತ. ಕೈಗಳು ಎದೆಯ ಮೇಲೆ. ಬಾಯಿ "ಉಫ್" ಎಂದಿತು. ಸದ್ಯ ಹೆಂಡತಿ ನೋಡಲಿಲ್ಲ ಎಂದುಕೊಂಡರೆ ಅವಳಾಗಲೇ ರೂಂನ ಮಂಚದ ಮೇಲೆ ಉರುಳಿ ಹೊಟ್ಟೆ ಹಿಡಿದುಕೊಂಡು ನಗುತ್ತಿದ್ದಳು.

***

# ಹೀಗೊಂದು ವಿಚಾರ ಲಹರಿ

– ಟಿ.ಎಸ್.ಶ್ರವಣ ಕುಮಾರಿ

ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿ ಸಲಿಂಗಿಗಳ ಪ್ರಸಂಗವೊಂದು ಬರುತ್ತದೆ. ನಿಖರವಾಗಿ ಏನಿತ್ತು ಎನ್ನುವುದು ಮರೆತುಹೋಗಿದ್ದರೂ, ಅದರ ಹುರುಳೇನಿತ್ತು ಎನ್ನುವುದನ್ನು ಸ್ಥೂಲವಾಗಿ ನೆನಪಿಸಿಕೊಳ್ಳಬಲ್ಲೆ. ವೇದಿಕೆಯಲ್ಲಿ ಅದನ್ನು ಓದಿದವರಿದ್ದರೆ ಅವರಿಗೂ ನೆನಪಾಗಬಹುದು. ಗಂಡಸೊಬ್ಬ ಇನ್ನೊಂದು ಗಂಡಸನ್ನು ಕೂಡುತ್ತಿದ್ದ ಪ್ರಸಂಗದಲ್ಲಿ ಮೂಕಜ್ಜಿ ಗಂಡು-ಹೆಣ್ಣು ಸೇರಿ ಮಾಡಬೇಕಾದ್ದನ್ನು, ಗಂಡು ಗಂಡೇ ಆಡಿದರೆ ಅದು ನಿಸರ್ಗಕ್ಕೆ ವಿರುದ್ಧವಾದದ್ದು ಎಂದು ಹೇಳುತ್ತಾಳೆ. ಕೂಡುವಿಕೆಯ ಉದ್ದೇಶವೇ ಮುಂದಿನ ಜನಾಂಗದ ಸೃಷ್ಟಿ. ಅದು ನೆರವೇರದಿದ್ದ ಮೇಲೆ ಅದು ಪ್ರಕೃತಿ ವಿರುದ್ಧವಾದ ಕ್ರಿಯೆ ಎನ್ನುವುದು ಅವಳ ನಿಲುವಾಗಿರುತ್ತದೆ. ನನ್ನ ಕಾಲೇಜಿನ ದಿನಗಳಲ್ಲಿ ಅದನ್ನು ಓದಿದಾಗ ಮೂಕಜ್ಜಿಯ ಮಾತು ಸರ್ವಸಮ್ಮತವೆನ್ನಿಸಿತ್ತು; ಇಂತಹ ಪ್ರಸಂಗಗಳು ಇರಬಹುದು ಎನ್ನುವ ಕಲ್ಪನೆಯೇ ಅಸಹ್ಯಕರವೆನ್ನಿಸಿತ್ತು.

ನನಗೆ 'ಗೇ' ಮತ್ತು 'ಲೆಸ್ಬಿಯನ್ನರ' ಬಗ್ಗೆ ತಿಳಿದುಬಂದದ್ದೇ ಇತ್ತೀಚೆಗೆ. ಅದೂ ಗೆಳತಿಯೊಬ್ಬಳು ವಸುಧೇಂದ್ರರು ಇತ್ತೀಚಿನ ಅತಿಯಾಗಿ ಓದಿಸಿಕೊಳ್ಳುತ್ತಿರುವ ಲೇಖಕ; ಅವರೊಬ್ಬ 'ಗೇ' ಎಂದಾಗ. 'ಹಾಗೆಂದರೇನು?' ಎಂದು ಕೇಳಿದ್ದೆ. ಅವಳು ಗಂಡು ಮತ್ತೊಬ್ಬ ಗಂಡಿನ ಜೊತೆಗೆ ಲೈಂಗಿಕ ಸಂಪರ್ಕವಿರಿಸಿಕೊಂಡರೆ ಅವರು ಗೇ; ಹೆಣ್ಣು ಮತ್ತೊಬ್ಬ ಹೆಣ್ಣಿನ ಸಂಬಂಧ ಇರಿಸಿಕೊಂಡರೆ ಅದು ಲೆಸ್ಬಿಯನ್ ಸಂಬಂಧ ಎಂದಾಗ ಮತ್ತೆ ಮೂಕಜ್ಜಿ ಕಣ್ಮುಂದೆ ಬಂದು "ಥೂ! ಅಸಹ್ಯ, ಪ್ರಕೃತಿಗೆ ವಿರುದ್ಧವಾದ ವಿಷಯ ಅದು" ಎಂದಿದ್ದೆ. ಅವಳು ಅಷ್ಟೇ ನಿರಾಳವಾಗಿ "ಹಾಗೇನಿಲ್ಲ; ನೀವೊಮ್ಮೆ ಅವರ ಪುಸ್ತಕಗಳನ್ನು ಓದಿ ನೋಡಿ" ಎಂದಷ್ಟೇ ಹೇಳಿದ್ದಳು. ಅವಳು ಇಂಗ್ಲಿಷ್ ಮತ್ತು ಕನ್ನಡ ಎರಡರ ಸಾಹಿತ್ಯವನ್ನೂ ವಿಫುಲವಾಗಿ ಓದಿಕೊಂಡಿದ್ದವಳು. ಹಾಗಾಗಿ ಅವಳ ಮಾತನ್ನು ತಳ್ಳಿಹಾಕದೇ ಅವರ ಎಲ್ಲಾ ಪುಸ್ತಕಗಳನ್ನೂ ತರಿಸಿಕೊಂಡು ಓದಿದ ನಂತರ LGBTQ ಬಗೆಗಿನ ನನ್ನ ಧೋರಣೆಯೇ ಬದಲಾಯಿತು.

ಒಂದಷ್ಟು ಸಾಹಿತ್ಯವನ್ನು ಓದುವ ಹವ್ಯಾಸವನ್ನು, ನೌಕರಿಯ ಮೂಲಕ ಹೊರಜಗತ್ತಿನ ಸಂಪರ್ಕವನ್ನೂ ನಿರಂತರವಾಗಿ ಇರಿಸಿಕೊಂಡಿರುವ ನನಗೇ ಈ ವರ್ಗದ ಬಗ್ಗೆ ಇಷ್ಟೊಂದು ಅಜ್ಞಾನವಿರುವಾಗ, ಇನ್ನು ಇದಾವುದರಲ್ಲೂ ತೊಡಗಿಕೊಳ್ಳದವರಿಗೆ ಇವರ ಬಗ್ಗೆ ಇನ್ನೆಷ್ಟು ಅರಿವಿರಲು ಸಾಧ್ಯ! ಅಂಥದೊಂದು ಪ್ರಪಂಚವಿರಬಹುದೆಂಬ ಗಂಭೀರವಾದ ಕಲ್ಪನೆಯೂ ಇರದಿದ್ದ ನನ್ನ ಮನೋಚಕ್ಷುವಿನ ಮುಂದೆ ಅಜ್ಞಾತ ಲೋಕವೊಂದು ತೆರೆದುಕೊಂಡು ಭಯ ಮತ್ತು ದಿಗಿಲನ್ನು ಹುಟ್ಟಿಸಿತ್ತು. ಪುಸ್ತಕದಲ್ಲಿದ್ದ ಮೊಬೈಲ್ ಸಂಖ್ಯೆಗೆ ಕರೆಮಾಡಿ ವಸುಧೇಂದ್ರರೊಂದಿಗೆ ಮೂರ್‍ನಾಲ್ಕು ಬಾರಿ ಚರ್ಚಿಸಿದೆ. ಅವರು ಆ ವರ್ಗಗಳ ಪ್ರಪಂಚದ ವಿವರಗಳನ್ನು, ಸಂಕಟಗಳನ್ನು, ನೋವನ್ನು, ವಿಷಾದವನ್ನು, ಹತಾಶೆಯನ್ನು ಅವರ ಪುಸ್ತಕಗಳಲ್ಲಿ ಚರ್ಚಿಸಿದ್ದರು. ನಾನು ಮಾತನಾಡಿದಾಗೆಲ್ಲಾ ತುಂಬಾ ಆತ್ಮೀಯವಾಗಿ, ಸಹಜವಾಗಿ, ತಾಳ್ಮೆಯಿಂದ ಸ್ಪಂದಿಸಿದ್ದರು.

ಆ ವರ್ಗದವರಿಗೆ ಕೇವಲ ಲೈಂಗಿಕ ವಿಷಯಗಳಲ್ಲಿ ಮಾತ್ರಾ ಆಸಕ್ತಿ ಎಂದುಕೊಂಡರೆ ತಪ್ಪಾಗುತ್ತದೆ. ಅದೊಂದೇ ವಿಷಯದಲ್ಲಿ ಅವರಿಗೂ, ನಮಗೂ ವ್ಯತ್ಯಾಸವಿರುವುದು ಅಷ್ಟೇ. ಅದೇ ವರ್ಗದಲ್ಲಿ ಲಕ್ಷಾಂತರ ಡಾಕ್ಟರ್‌ಗಳು, ಇಂಜಿನಿಯರ್‌ಗಳು, ತಂತ್ರಜ್ಞರು, ವಿದ್ಯಾವಂತರು ಇದ್ದಾರೆ. ನಮಗೊಂದು ಸಾಮಾಜಿಕ ವ್ಯವಸ್ಥೆಯಿದೆ. ಆದರೆ ಅನಾದಿಕಾಲದಿಂದ ತಮ್ಮ ಕೊರತೆಯನ್ನು, ಸಮಸ್ಯೆಯನ್ನು ಮುಚ್ಚಿಟ್ಟುಕೊಂಡೇ ಸಾಗಿದ ಆ ವರ್ಗವನ್ನು ಮುನ್ನಡೆಸುವ ಯಾವುದೇ ಸಾಮಾಜಿಕ ಕಟ್ಟುಪಾಡುಗಳೇ ಇಲ್ಲದಂತಾಗಿ ಅವರಿಗೆ ಯಾವುದೇ ನೀತಿನಿಯಮಗಳಿಲ್ಲ. ಪ್ರಪಂಚದ ಮೋಹಸೂತ್ರವಾದ ಹೆಣ್ಣಿಗೆ ಗಂಡಿನ ಆಕರ್ಷಣೆ, ಗಂಡಿಗೆ ಹೆಣ್ಣಿನ ಆಕರ್ಷಣೆ ಅಲ್ಲಿ ಇಲ್ಲವೇ ಇಲ್ಲ. ಅದು ಪ್ರಕೃತಿ ಸಹಜವೋ, ವಿರುದ್ಧವೋ ಅಂತೂ ಅವರ ಭಾವನಾತ್ಮಕ ಪ್ರಪಂಚದಲ್ಲಿ ಸ್ವಲಿಂಗಿಗಳ ಪ್ರಣಯದ್ದೇ ಮೇಲುಗೈ. ಅಮಿತಾಬ್ ಬಚ್ಚನ್ ಮತ್ತು ಧರ್ಮೇಂದ್ರ 'ಏ ದೋಸುತೀ ಹಮ್ ನಹೀ ಛೋಡೇಂಗೆ' ಎಂದು ಆತ್ಮೀಯವಾಗಿ ಹಾಡುತ್ತಾ ಸಾಗುವಾಗ ನಮಗೆ ಅದರಲ್ಲಿ ಅವರ ಸ್ನೇಹದ ಭಾವ ಕಂಡರೆ ವಸುಧೇಂದ್ರರಿಗೆ ಅವರಿಬ್ಬರೂ 'ಗೇ' ಗಳಿರಬೇಕೆನ್ನಿಸುತ್ತದೆ. 'ಯಥೋ ಭಾವಃ ತಥೋ ದೃಷ್ಟಿಃ' ತಾನೇ

ಸಹಜವಾದ ಮನುಷ್ಯನೂ ಅನಾದಿ ಕಾಲದಲ್ಲಿ ಇದ್ದದ್ದು ಪಶುಪಕ್ಷಿಗಳಂತೆ ಸ್ವಚ್ಛಂದ ಲೈಂಗಿಕತೆಯಲ್ಲಿಯೇ ತಾನೇ. ನಂತರದ ದಿನಗಳಲ್ಲೇ ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ನೀತಿನಿಯಮಗಳನ್ನು ರೂಪಿಸಿಕೊಳ್ಳುತ್ತಾ 'ಮದುವೆ'ಯೆಂಬ ವ್ಯವಸ್ಥೆ ಬಂದ ಮೇಲೆ ಗಂಡು–ಹೆಣ್ಣು ಇಬ್ಬರ ಮೇಲೂ ಲೈಂಗಿಕ ಜವಾಬ್ದಾರಿ ಬಿದ್ದು, ಮಕ್ಕಳನ್ನು ನೋಡಿಕೊಳ್ಳುವ, ಕಾಪಾಡಿಕೊಳ್ಳುವ ಹೊಣೆ ಬಿದ್ದು ಸ್ವಾಸ್ಥ್ಯ ಸಮಾಜಕ್ಕೆ ದಾರಿಯಾಯಿತು. ಸಹಜವಾದ ಗಂಡು–ಹೆಣ್ಣಿನ ಸಂಬಂಧದಲ್ಲಿ ಮುಂದಿನ ಪೀಳಿಗೆಯ ಸೃಷ್ಟಿಯಿದೆ. ಜಗತ್ತನ್ನು ಮುಂದುವರೆಸುವ ಉದ್ದೇಶವಿದೆ. ಜವಾಬ್ದಾರಿ ಹೊರಬೇಕಾದ ಅತ್ಯಗತ್ಯವಿದೆ; ಅವಶ್ಯಕತೆಯಿದೆ. ಮಕ್ಕಳ ಉದ್ದೇಶವಿಲ್ಲದ ಮದುವೆ, ಅದು ಮದುವೆಯೇ ಅಲ್ಲ ಎನ್ನುವುದು ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪನವರ ನಿಲುವು. ಆದರೆ ತೃತೀಯಲಿಂಗಿಗಳ ವಿಷಯದಲ್ಲಿ ಆ ಸಂಭವವೇ ಇಲ್ಲ. ಅವರಲ್ಲಿ ಮಕ್ಕಳು ಬೇಕು ಎಂದು ಬಯಸುವವರು ಮಕ್ಕಳನ್ನು ದತ್ತು ತೆಗೆದುಕೊಂಡು ಬೆಳೆಸುತ್ತಿರುವ ಉದಾಹರಣೆಗಳನ್ನು ಕಂಡಿದ್ದೇನೆ.

ಲೈಂಗಿಕತೆಯೆನ್ನುವುದು ಪ್ರತಿ ಮಾನವನಲ್ಲೂ ಒಂದೇ ತೆರದಲ್ಲಿ, ಮಟ್ಟದಲ್ಲಿ ಇರುವುದಿಲ್ಲ. ನಾವು ಕಾಣುತ್ತಿರುವ ಸಮಾಜದಲ್ಲೂ ಮದುವೆಯಲ್ಲಿ ಆಸಕ್ತಿಯಿಲ್ಲ ಎನ್ನುತ್ತಾ ಮದುವೆಯನ್ನು ನಿರಾಕರಿಸಿರುವ ನಿಗ್ರಹಶಕ್ತಿ ಇರುವವರಿರಬಹುದು; ತೃತೀಯ ಲಿಂಗಿಗಳೂ ಇರಬಹುದು. ಒಂದು ಗಂಡು ದೇಹದಲ್ಲಿರುವ ಹೆಣ್ಣು ಮನಸ್ಸನ್ನೂ, ಹೆಣ್ಣು ದೇಹದಲ್ಲಿರುವ ಗಂಡು ಮನಸ್ಸನ್ನೂ – ಅವುಗಳ ಭಾವನಾತ್ಮಕ ಒತ್ತಡವನ್ನು ನಿರ್ವಹಿಸುವುದು ಸುಲಭ ಸಾಧ್ಯವಲ್ಲ. ಹಾಗಾಗಿಯೇ ಎಷ್ಟೋ ಗಂಡುಗಳು ಹೆಣ್ಣುಗಳಾಗಿ ಪರಿವರ್ತನೆ ಹೊಂದುತ್ತಾರೆ – ಎದುರಿಗೆ ಕಾಣುತ್ತಿರುವ ಒಂದು ನಿದರ್ಶನ ಅಕ್ಕೈ ಪದ್ಮಶಾಲಿ. ಅಂತೆಯೇ ಹೆಣ್ಣುಗಳು ಗಂಡುಗಳಾಗಿರುವ ಬಗ್ಗೆಯೂ ಕೇಳಿದ್ದೇನೆ – ಉದಾಹರಣೆಯಾಗಿ ಸುಮತಿ ರೂಮಿ ಹರೀಶ್ ಆಗಿರುವುದು. ಅವರ ಮಟ್ಟಿಗೆ ಅವರು ಹಾಗಿರುವುದೇ ಸಹಜ.

ಇತ್ತೀಚಿನವರೆಗೆ ಇಂತಹ ತೃತೀಯ ಲಿಂಗಿಗಳ ವರ್ಗಕ್ಕೆ ಸೇರಿದವರಲ್ಲಿ ನಮಗೆ ಹಿಜಡಾಗಳ ಬಗ್ಗೆ ಮಾತ್ರವೇ ಸ್ವಲ್ಪಮಟ್ಟಿಗೆ ತಿಳಿದಿತ್ತು. 'ಚನ್ನಪಟ್ಟಣ', 'ಚಪ್ಪಾಳೆ' ಎನ್ನುವ ಸಂಕೇತ ಶಬ್ದಗಳಿಂದ ಕರೆಯುತ್ತಾ ಅದೊಂದು ಅವಮಾನವೆಂದೇ ಭಾವಿಸುತ್ತಿದ್ದೆವು. ತುಂಬಾ ತಿಳಿದುಕೊಳ್ಳಲು ಒಂದು ರೀತಿಯ ಹಿಂಜರಿಕೆ, ಹೇವರಿಕೆ ಎಲ್ಲವೂ. ಈಗಲೂ ಎಷ್ಟೇ ಅನುಕಂಪವಿದ್ದರೂ ಕಾರಿನ ಕಿಟಕಿಯ ಪಕ್ಕಕ್ಕೆ ಅವರು ಬಂದರೆ ಎಲ್ಲಿ ಮೈಮುಟ್ಟುತ್ತಾರೋ ಎನ್ನುವ ಭಯದಿಂದ ಕಿಟಕಿಯ ಗಾಜನ್ನೇರಿಸುತ್ತೇನೆ. ಅವರು ಲೈಂಗಿಕತೆಯನ್ನು ವೈಭವೀಕರಿಸುತ್ತಾರೆ ಎನ್ನಿಸಿದರೂ, ಅವರು ಅದೊಂದರಿಂದಲೇ ನಮಗಿಂತ ಭಿನ್ನರು ಎನ್ನುವುದೂ ಸತ್ಯವಲ್ಲವೇ.

ಯಶೋಧರನಂಥ ಗಂಡನಿದ್ದರೂ ಅಷ್ಟಾವಂಕನಂತವನನ್ನು ಬಯಸುವ ಅಮೃತಮತಿಯರನ್ನು ಕಂಡಿದ್ದೇವೆ. ರಂಭೆಯಂತಹ ಹೆಂಡತಿ ಮನೆಯಲ್ಲಿದ್ದರೂ ಬೆಲೆವೆಣ್ಣುಗಳ ಸಹವಾಸದಲ್ಲಿ ಬೀಳುವ ಗಂಡುಗಳನ್ನೂ ನೋಡಿದ್ದೇವೆ. ಕಾಮದ ವ್ಯಾಪಾರವೇ ಅಂತಹುದು. ಹೀಗಿರುವಾಗ ವಿಕೃತಿಯೆಂದು ನಮಗನ್ನಿಸುವುದೇ ತೃತೀಯಲಿಂಗಿಗಳ ಸಹಜ ಕಾಮವಾಗಿರುವಾಗ ಯಾವುದನ್ನು ನಾವು ತಪ್ಪೆನ್ನಬಹುದು?! ತಮಗೆ ಹೀಗಾಗುತ್ತಿದೆ ಎಂದು ಅವರು ಬೊಬ್ಬೆ ಹೊಡೆಯುವ ತನಕ ನಾವು ಯಾರೂ ಅವರ ಅಳಲನ್ನು ಕುರಿತು ಕೇಳಿಲ್ಲ. ಎಷ್ಟೋ ಸಹಸ್ರಮಾನಗಳು ಬಾಯ್ಮುಚ್ಚಿಕೊಂಡು ಸಹಿಸಿಕೊಂಡೇ ಬಂದವರು ಇಂದು ಜಗತ್ತಿಗೆ ತಮ್ಮ ಸ್ಥಿತಿಯನ್ನು ಸಾರುತ್ತಿದ್ದಾರೆ. ನಾವು ನಮ್ಮ ಕೋಣೆಯ ಪುರಾಣಗಳನ್ನು ಯಾರೆದುರೂ ಬಿಚ್ಚುವುದಿಲ್ಲ; ಏಕೆಂದರೆ ಸರಿಸುಮಾರು ಎಲ್ಲರ ಪುರಾಣವೂ ಒಂದೇ ಆಗಿರುತ್ತದೆ; ಹಾಗಾಗಿ ಅದರ ಅವಶ್ಯಕತೆ ಇಲ್ಲ. ಆದರೆ ಅವರ ಅವಶ್ಯಕತೆಗಳು, ನಿರೀಕ್ಷೆಗಳು ನಮ್ಮಂತಲ್ಲ. ತಮ್ಮಲ್ಲಿರುವುದನ್ನು ಹೊರಹಾಕಿದರೆ ಮಾತ್ರಾ ಅವರೂ ನಿರಾಳವಾಗಬಹುದು. ನಮಗಿನ್ನೇನು ಮಾಡಲು ಸಾಧ್ಯವಿಲ್ಲದಿದ್ದರೂ ಬೇಡ; ಅಂತವರ ಬಗ್ಗೆ ಒಂದು ಸಹಾನುಭೂತಿಯನ್ನಾದರೂ ಹೊಂದೋಣ. ಸಹಜವಾದವರೇ ತಮ್ಮ ಲೈಂಗಿಕ ತೃಷೆಗಾಗಿ ಅಂತವರ ಹಿಂದೆ ಓಡುವಾಗ, ಅವರಿರುವುದೇ ಹಾಗೆ; ಅದನ್ನು ತಪ್ಪೆನ್ನಲು ಸಾಧ್ಯವೇ?

ಪಾಶ್ಚಿಮಾತ್ಯರಲ್ಲಿ ನಮಗಿಂತ ಮುಂಚೆ ಈ ವಿಷಯದ ಬಗ್ಗೆ ಅರಿವು ಮೂಡಿತ್ತು. ಅವರು ಇದನ್ನು ಬಹಳ ಸಹಜವಾಗಿಯೇ ಸ್ವೀಕರಿಸಿದ್ದಾರೆ. ಅಮೇರಿಕಾದ ಸ್ಯಾನ್ ಫ್ರಾನ್ಸಿಸ್ಕೋನಲ್ಲಿ ತೃತೀಯ ಲಿಂಗಿಗಳ ಬಡಾವಣೆಯೇ ಇದೆ. ಅಲ್ಲಿ ಎಲ್ಲರ ಮನೆಯ

ಮುಂದೂ ಸಪ್ತವರ್ಣದ ಧ್ವಜ ಹಾರಾಡುತ್ತಿರುತ್ತದೆ. ಸ್ಯಾನ್ ಫ್ರಾನ್ಸಿಸ್ಕೋದ ನಗರ ವೀಕ್ಷಣೆಯಲ್ಲಿ ಅದೂ ಕೂಡಾ ಒಂದು ನೋಡುವ ಪ್ರದೇಶ. ನಾನು ಅಲ್ಲಿಗೆ ಹೋಗಿದ್ದಾಗ ಸಮಯಮಿತಿಯಿಂದಾಗಿ ನೋಡಿಬರಲು ಸಾಧ್ಯವಾಗಲಿಲ್ಲ. ಆದರೆ ಅದರ ಬಗ್ಗೆ ಕೇಳಿ ತಿಳಿದುಕೊಂಡೆ ಅಷ್ಟೇ.

'ಈಗಿನ ಮಕ್ಕಳಿಗೆ ಈ ವಿಷಯದ ಅರಿವು ಇರಬೇಕೇ ಬೇಡವೇ?' ಎಂದರೆ 'ಇರಬೇಕು' ಎನ್ನುವುದೇ ನನ್ನ ವಾದ. ನಾಳೆ ನಮ್ಮ ಮಕ್ಕಳೇ ಇಂತಹ ಹಿಂಸೆ ಅನುಭವಿಸುತ್ತಿದ್ದರೆ ಅವರಿಗೆ ಅದರ ಮಾಹಿತಿ, ಮಾರ್ಗದರ್ಶನ ಇರಬೇಡವೇ? ವಸುಧೇಂದ್ರರಂತಹ ಆರ್. ಇ. ಸಿ. ಸುರತ್ಕಲ್‌ನ ಸುವರ್ಣಪದಕ ವಿಜೇತರು ತಮ್ಮ ಪರಿಸ್ಥಿತಿಯ ಬಗ್ಗೆ ತಾಯ್ತಂದೆಯರಲ್ಲಿ, ಬಂಧು ಬಳಗಗಳಲ್ಲಿ, ಸುತ್ತಲಿನವರಲ್ಲಿ ಅರಿವು ಮೂಡಿಸಲು ಅದೆಷ್ಟು ಕಷ್ಟಪಟ್ಟಿದ್ದಾರೆ! ಆ ಸಮುದಾಯದ ನೋವು ನಲಿವುಗಳ ಬಗ್ಗೆ ಸಾಕಷ್ಟು ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಯಾರೂ ಇಚ್ಛೆಪಟ್ಟು ಸ್ವಲಿಂಗಿಯಾಗಲು ಸಾಧ್ಯವೇ ಇಲ್ಲ; ಅದು ಅವರಲ್ಲಿ ಸಹಜವಾಗಿ ಮೂಡಿಬರುವ ಒಂದು ಭಾವ ಅಷ್ಟೇ! ಸರಿಯಾದ ಜ್ಞಾನ ಯಾವಾಗಲೂ ಒಳ್ಳೆಯದೇ, ಅಜ್ಞಾನ ಎಡವಟ್ಟುಗಳಿಗೆ ದಾರಿಮಾಡಿಕೊಡುತ್ತದೆ. ಹಾಗಾಗಿಯೇ ನಮ್ಮ ಧರ್ಮದಲ್ಲಿ ವಾತ್ಸಾಯನನ ಕಾಮಶಾಸ್ತ್ರಕ್ಕೆ ಅಷ್ಟೊಂದು ಪುರಸ್ಕಾರ.

ಇಂದಿನ ಜನಾಂಗ ಅವರನ್ನು ಮುಕ್ತ ಮನಸ್ಸಿನಿಂದ ನೋಡುತ್ತಿದೆ. ಅವರ ಬಗ್ಗೆ ಸಹಾನುಭೂತಿ ಇರುವವರು ತಾವೂ ಕೈಗೆ ಸಪ್ತವರ್ಣದ ಪಟ್ಟಿಯನ್ನು ಧರಿಸಿಕೊಂಡು ಅವರಿಗೆ ತಮ್ಮ ಬೆಂಬಲವನ್ನು ಸೂಚಿಸುತ್ತಾರೆ. ಕೆಲವು ವರ್ಷಗಳ ಹಿಂದೆ ನನ್ನ ಮಗಳೂ ಕೈಗೆ ಅಂತಹದೊಂದು ಪಟ್ಟಿಯನ್ನು ಧರಿಸಿಕೊಂಡು ಬಂದಾಗ ನನಗದರ ಮಾಹಿತಿ ದೊರೆಯಿತು. ನಾವು ಸಹಜವಾಗಿ ಅವರನ್ನು ಒಪ್ಪಿಕೊಂಡಾಗ ಅವರೂ ಮುಖ್ಯವಾಹಿನಿಗೆ ಬಂದು ನಮಗೆ ಮುಜುಗರವಾಗದಂತೆ ನಡೆದುಕೊಳ್ಳಲು ಸಹಾಯವಾಗಬಹುದು. ಚಪ್ಪಾಳೆ ತಟ್ಟುವವರು ಕಡಿಮೆಯಾಗಿ ಅವರೂ ದುಡಿದು ಬದುಕುವುದನ್ನು ಕಲಿಯಬಹುದು. ಯಾವುದನ್ನು ನಾವು ವಿರೋಧಿಸುತ್ತೇವೋ ಅದಕ್ಕೆ ಪ್ರತಿರೋಧವೂ ಹೆಚ್ಚು. ಅವರನ್ನು ಸಹಾನುಭೂತಿಯಿಂದ ನೋಡೋಣ. ಅವರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡಾಗ ತೆರೆದ ಮನಸ್ಸಿನಿಂದ ಕೇಳಿಸಿಕೊಳ್ಳೋಣ. ಪ್ರಪಂಚದಲ್ಲಿ ಸ್ತ್ರೀ ಪುರುಷರಷ್ಟೇ ಇಲ್ಲ; ಇಬ್ಬರಿಗಿಂತಲೂ ಭಿನ್ನರಾದವರೂ ಇದ್ದಾರೆ. ನಮಗನ್ನಿಸಿದ್ದೇ ಯಾವಾಗಲೂ ನಿಜವಲ್ಲವಲ್ಲ.

***

# ನಮ್ಮ ಅಪ್ಪನ ಬೀರು

- ಎನ್.ವಿ.ರಘುರಾಂ

ಹೌದು! ನಮ್ಮ ಮನೆಯಲ್ಲೂ ಗಾಡ್ರೆಜ್ ಬೀರು ಇದೆ. ಇದನ್ನು ಮನೆ ಗೃಹ ಪ್ರವೇಶ ಮಾಡಿದಾಗ 1954ರಲ್ಲಿ ತಂದು ಇಟ್ಟಿದ್ದಂತೆ. ಅಂದರೆ ನಾನು ಹುಟ್ಟುವ ನಾಲ್ಕು ವರ್ಷ ಮೊದಲೇ ಮನೆಗೆ ಬಂದಿತ್ತು. ಅದು ಹಾಗೆ ಅಪ್ಪನ ರೂಮಿನ ಬಲಭಾಗದ ಮೂಲೆಯಲ್ಲಿ ಭದ್ರವಾಗಿ ಕುಳಿತಿದೆ. ನಾನು ನೋಡುತ್ತಾ, ನೋಡುತ್ತಾ ಇರುವಂತೆ ನನ್ನ ತಲೆಕೂದಲು ಬಿಳಿಯಾಗುತ್ತಾ ನಡೆದಿದೆ, ಸೊಂಟ ಬಾಗಲು ಪ್ರಾರಂಭ ಮಾಡಿದೆ. ಆದರೆ ಆ ಕಂದು ಬಣ್ಣದ ಬೀರು ಹಳೆಯ ಕಾಲದವರ ಹಾಗೆ ಬಣ್ಣ ಕಳೆದುಕೊಳ್ಳದೆ ನೆಟ್ಟಗೆ ನಿಂತು ನಿಂತುಕೊಂಡಿದೆ. ಈ ಬೀರುವಿನ ಕೀ ಬಾಗಿಲ ಹತ್ತಿರ ಇರುವ ಗೋಡೆಗೆ ಫಿಕ್ಸ್ ಮಾಡಿರುವ ಸಣ್ಣ ಕನ್ನಡಿ ಸ್ಟಾಂಡಿನಲ್ಲಿ ಇಟ್ಟಿದೆ.

ಹೌದು! ಬೀರು ಯಾರು ಬೇಕಾದ್ರು ತೆಗೆದು ಹಾಕಬಹುದಿತ್ತು. ಅದರಲ್ಲಿ ಏನೂ ಗುಟ್ಟು ಇರಲಿಲ್ಲ. ಹಾಗಾದರೆ ಬನ್ನಿ ಬೀರುವಿನಲ್ಲಿ ಏನೇನು ಇದೆ ಎಂದು ತೋರಿಸುತ್ತೇನೆ.

ಬಾಗಿಲು ತೆಗೆದರೆ ಎಲ್ಲಾ ಅಲ್ಮೆರಾ ತರಹ ಇಲ್ಲೂ ಐದು ಖಾನೆಗಳಿವೆ. ಮೇಲಗಡೆ ಖಾನೆಯಲ್ಲಿ ಬ್ಯಾಂಕಿನ ಪಾಸ್ ಬುಕ್ ಗಳು ಇದೆ. ಇದು ನೋಡಿ ಕಾರ್ಪೋರೇಶನ್ ಬ್ಯಾಂಕ್ ಪಾಸ್ ಬುಕ್. ಅದರ ಜೊತೆಗೆ ಸಿಂಡಿಕೇಟ್ ಬ್ಯಾಂಕಿನ ಪಾಸ್‌ಬುಕ್. ನಾನು ಹಿರಿಯ ಪ್ರಾಥಮಿಕ ಶಾಲೆಗೆ ಹೋಗಲು ಪ್ರಾರಂಭ ಮಾಡಿದಾಗ, ನನಗೂ ಪಾಸ್ಬುಕ್ ಬರೆಸಿಕೊಂಡು ಬರಲು ಕಳಿಸುತ್ತಿದ್ದರು. ಅದರಲ್ಲಿ ಯಾವಾಗಲೂ ಸುಮಾರು ಐನೂರು ರೂಪಾಯಿಯ ಆಸುಪಾಸಿನಲ್ಲೇ ಬ್ಯಾಲನ್ಸ್ ಇರುತ್ತಿತ್ತು. ಅದರ ಜೊತೆಗೆ ರೇಡಿಯೋ ಲೈಸೆನ್ಸ್ ಬುಕ್. ಹೌದು. ನಮ್ಮ ಮನೆಯಲ್ಲೂ ನಾಲ್ಕು ಬ್ಯಾಂಡಿನ ಫಿಲಿಪ್ಸ್ ರೇಡಿಯೋ ಇತ್ತು. ಅದರ ಲೈಸೆನ್ಸಿಗೆ ಪ್ರತಿವರ್ಷ ಪೋಸ್ಟ್ ಆಫೀಸ್ನಲ್ಲಿ ದುಡ್ಡು ಕೊಟ್ಟು ಸೀಲ್ ಹಾಕಿಸಿಕೊಂಡು ಬರಬೇಕು! ಪ್ರತಿ ಬಡ್ಜೆಟ್ನಲ್ಲಿ ರೇಟ್ ಜಾಸ್ತಿ ಆಗುತ್ತಿತ್ತು. ವರ್ಷಕ್ಕೆ 5 ರೂಪಾಯಿ ಇದ್ದಿದ್ದು ಕ್ರಮೇಣ 10 ರೂಪಾಯಿ ಆಗಿತ್ತು.

ಅಲ್ಲೇ ಸ್ವಲ್ಪ ಈ ಕಡೆ ಎಡಗಡೆಗೆ ಬಿಳಿ ಬಟ್ಟೆಗಳು ಕಾಣುತ್ತಿದೆಯಲ್ಲ. ಅದೆಲ್ಲಾ ಅಪ್ಪನ ಬಟ್ಟೆಗಳು. ಇದು ನೋಡಿ ರೇಷ್ಮೇ ಜುಬ್ಬ, ಶಲ್ಯ ಮತ್ತು ಹದಿನೆಂಟು ಮೊಳದ ಮಲ್ ಪಂಚೆ. ಇದನ್ನು ಹಾಕಿಕೊಂಡರೆ, ಅಪ್ಪ ಮದುವೆ ಮನೆಗೆ ಹೊರಟಿದ್ದಾರೆ ಎಂದರ್ಥ. ಅದರ ಪಕ್ಕದಲ್ಲಿ ಇರುವುದೇ ಖಾದಿ ಜುಬ್ಬ. ಕಚ್ಚೆಪಂಚೆ ಉಟ್ಟುಕೊಂಡು, ಖಾದಿ ಜುಬ್ಬ ಮತ್ತು ಅದರ ಮೇಲೆ ಕಪ್ಪು ಕಲರ್ ನೆಹರು ಕೋಟ್ ಹಾಕಿಕೊಂಡು ಹೊರಟರೆ ಪುರಸಭೆಯ ಕಾರ್ಯಕ್ರಮಕ್ಕೆ ಅಪ್ಪ ಹೊರಟರು ಎಂದರ್ಥ. ಹೌದು, ಅವರು ಊರಿನ ಪುರಸಭೆಯಲ್ಲಿ 1961ರಲ್ಲಿ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದರಂತೆ. ಮೊದಲಿನಿಂದ ಕಾಂಗ್ರೆಸ್ಸಿನಲ್ಲಿ ಇದ್ದರೂ, ನಂತರ ರಾಜಾಜಿಯವರು ಸ್ಥಾಪಿಸಿದ ಸ್ವತಂತ್ರ ಪಕ್ಷದಲ್ಲಿ ಸೇರಿದ್ದರಂತೆ. ಅದೆಲ್ಲಾ ಇದ್ದರೂ ದಿನಾಲೂ ಸಾಮಾನ್ಯವಾಗಿ ಉಡುತ್ತಿದ್ದುದು ಕೇವಲ ಎರಡು ಮೀಟರಿನ ದಟ್ಟಿ ಪಂಚೆ ಮತ್ತು ಸಾಧಾರಣ ತಿಳಿ ಬಣ್ಣದ ಶರ್ಟು ಮಾತ್ರ. ಇದರ ಪಕ್ಕದಲ್ಲಿ ನೋಡಿ! ಇದು ಮಲ್ ಬಟ್ಟೆಯಲ್ಲಿ ಕತ್ತರಿಸಿ ಹೊಲಿಸಿದ ಕರವಸ್ತ್ರಗಳು. ಅದರ ಜೊತೆಗೆ ಆ ಮಲ್ ಬಟ್ಟೆಯಲ್ಲೇ ಹೊಲಿಸಿದ ಬನಿಯನ್. ಆ ಬನಿಯನ್ನಿಗೆ ಪಾಕೇಟ್ ಕೂಡ ಇತ್ತು. ಆ ಕರಿಬೆಲ್ಟ್ ಇದೆಯಲ್ಲ, ಅದು ಕಚ್ಚೆ ಪಂಚೆ ಉಟ್ಟುಕೊಂಡಾಗ ಮಾತ್ರ ಹೊರಗೆ ಬರುತ್ತಿತ್ತು. ಅದರ ಕೆಳಗೆ ಇರುವುದೇ ಪಟ್ಟಾಪಟ್ಟಿ ಲಾಡಿ ಕಟ್ಟುವಂತೆ ಇರುವ ನಿಕ್ಕರುಗಳು! ಇದರಲ್ಲೂ ಎರಡು ಜೇಬುಗಳಿವೆ. ಅಪ್ಪ ಯಾವಾಗ ಎಲ್ಲಿಗೆ ಹೊರಡುತ್ತಾರೆ ಎಂದು ಗೊತ್ತಿರಲಿಲ್ಲ. ಹಾಗಾಗಿ ಎರಡು ಜೊತೆ ಬಟ್ಟೆ ಮಾತ್ರ ಯಾವಾಗಲೂ ರೆಡಿಯಾಗಿ ಕೂತಿರುತ್ತಿತ್ತು.

ಎರಡನೇಯ ಖಾನಿಯಲ್ಲಿ ಲಾಕರ್. ಇಲ್ಲಿ ಬೆಳ್ಳಿ ಸಾಮಾನು, ಅದರ ಒಳಗೆ ಇನ್ನೊಂದು ಸಣ್ಣ ಲಾಕರ್. ಅದರಲ್ಲಿ ಬಂಗಾರದ ಆಭರಣಗಳಿವೆ. ಎಲ್ಲವೂ ಗೌರಿ, ಗಣೇಶ, ಸತ್ಯನಾರಾಯಣ, ಶ್ರಾವಣ ಮಾಸದ ಸುವಾಸಿನಿ ಪೂಜೆ, ದಸರಾದ ಸರಸ್ವತಿ ಪೂಜೆ, ದೀಪಾವಳಿಯ ಬಲಿಪಾಡ್ಯಮಿ ಪೂಜೆಯ ದಿನಗಳಲ್ಲಿ ಹೊರಗೆ ಬರುತ್ತವೆ, ನಂತರ ಒಳಗೆ ಹೋಗುತ್ತವೆ.

ಮೂರನೇ ಖಾನಿಯಲ್ಲಿ ಸೋಲ್ಲಾಪುರದ ಬೆಡ್ ಶೀಟುಗಳು. ಅದರ ಪಕ್ಕದಲ್ಲಿ ಹೊದೆಯುವ ಕಂಬಳಿಗಳು. ಇದು ನೆಂಟರು ಬಂದಾಗ ಹೊರಗೆ ಬಂದು ನಂತರ ಒಳಗೆ ಹೋಗುತ್ತಿದ್ದವು. ಮಳೆಗಾಲದಲ್ಲಿ ಕಂಬಳಿ ಬೇಕೇಬೇಕು. ಅಪ್ಪನೇ ನಮ್ಮ ನೆಂಟರಲ್ಲಿ ಸ್ವಲ್ಪ ದೊಡ್ಡವು. ಹಾಗಾಗಿ ಮನೆ ಕಟ್ಟಲೀ, ಮದುವೆ ಮಾಡಲಿ, ಮಗು ಹುಟ್ಟಲಿ ಎಲ್ಲದಕ್ಕೂ ಅಪ್ಪನನ್ನು ಕರೆಯಲು ನೆಂಟರು ಮತ್ತು ಊರಿನವರು ಬರುತ್ತಿದ್ದರು. ಬರೀ ಅಷ್ಟೇ ಅಲ್ಲ, ಮಗನಿಗೆ ಓದಲು ಬುದ್ಧಿ ಹೇಳಿಸುವುದರಿಂದ ಹಿಡಿದು ವ್ಯಾಜ್ಯಗಳನ್ನು ಪರಿಹರಿಸುವುದರ ತನಕ ಎಲ್ಲದಕ್ಕೂ ಅಪ್ಪನ ಸಲಹೆ ಪಡೆಯಲು ಬರುತ್ತಿದ್ದರು. ಹಾಗಾಗಿ ಈ ಬೆಡ್ಶೀಟುಗಳು ಯಾವಾಗಲೂ ಒಳಗೆ ಹೊರಗೆ ಓಡಾಡುತ್ತಿದ್ದವು.

ಎಡಗಡೆಗೆ ಬೆಡ್‌ಷೀಟ್‌ಗಳಾದರೆ, ಬಲಗಡೆಗೆ ಎಲ್ಲರಿಗೂ ಪೂಜೆ ದಿನ ಉಡಲು ಕೊಡುವ ರೇಷ್ಮೆ ಮುಗುಟಗಳು. ಉಡಲು ದೊಡ್ಡ ಮುಗುಟ, ಹೊದೆಯಲು ಶಲ್ಯ, ಮನೆಮಂದಿಯ ಜೊತೆಗೆ ಮನೆಗೆ ಬಂದಿರುವ ನೆಂಟರಿಗೂ ಬೇಕಲ್ಲ. ಕೆಲವು ಪೂಜೆಗೆ ಅಪ್ಪ ಕೆಂಪು ಬಣ್ಣದ ಮುಗುಟ ಉಟ್ಟುಕೊಂಡರೆ, ಇನ್ನು ಕೆಲವುದಕ್ಕೆ ಬಿಳಿ ಬಣ್ಣದ ಮುಗುಟ. ಕೆಲವು ವ್ರತದ ಪೂಜೆಯಲ್ಲಿ ಹಾಗೆ ಮಾಡಬೇಕೆಂದು ಹೇಳಿದ್ದಾರಂತೆ.

ಅದರ ಕೆಳಗಿನ ಖಾನಿಯಲ್ಲಿ ಒಂದು ರಟ್ಟಿನ ಬಾಕ್ಸ್. ಅದರಲ್ಲಿ ಇರುವುದು ಸಾಲಾಗಿ ಜೊಡಿಸಿರುವ "ಲೈಫ್ ಬಾಯ್ ಸೋಪುಗಳು". ಕಡಿಮೆ ಎಂದರೂ ಒಂದು 40-50 ಸೋಪುಗಳು. ಇದೇನಿದು ಬೀರುವಿನಲ್ಲಿ ಸೋಪು ಎಂದು ಆಶ್ಚರ್ಯ ಆಗಿರಬೇಕಲ್ಲ! ಮಳೆಗಾಲದ ಥಂಡಿಗೋಸ್ಕರ ಇಲ್ಲಿ ಇಟ್ಟಿರಬಹುದು ಎಂದು ನನ್ನ ಊಹೆ. ಹೌದು, ಸ್ನಾನದ ಮನೆಯಲ್ಲಿ ಒಂದು ಸೋಪು ಇಟ್ಟರೆ ಹೆಚ್ಚು ಕಡಿಮೆ ಒಂದು ವಾರ ಬರುತ್ತಿತ್ತು. ಹಾ!, ಒಂದೊಂದು ಸೋಪು ಒಂದೊಂದು ತೆಂಗಿನಕಾಯಿಯಷ್ಟು ತೂಗುತ್ತಿತ್ತು. ಆಗ ಎಲ್ಲ ಸಾಮಗ್ರಿಗಳನ್ನು ಒಂದು ವರ್ಷಕ್ಕೆ ಆಗುವಷ್ಟು ಒಟ್ಟಿಗೆ ಮಳೆಗಾಲಕ್ಕೂ ಮೊದಲೇ ಎಪ್ರಿಲ್ ತಿಂಗಳಲ್ಲಿ ಮನೆಗೆ ತರುತ್ತಿದ್ದರು. ಹಾಗಾಗಿ ಅಷ್ಟೊಂದು ಸೋಪುಗಳು.

ಅತ್ಯಂತ ಕೊನೆಯಲ್ಲಿ ಒಂದು ಸೀಕ್ರೆಟ್ ಖಾನಿ ಇತ್ತು. ಕೊನೆಯ ಖಾನಿಯ ಷೀಟ್ ನಿಧಾನವಾಗಿ ಹತ್ತಿರದಿಂದ ನೋಡಿದರೆ ಅದರ ಕೆಳಗೆ ಇನ್ನೊಂದು ಷೀಟ್ ಇರುವುದು ಗೊತ್ತಾಗುತ್ತದೆ. ನಿಧಾನವಾಗಿ ಆ ಷೀಟ್ ಎತ್ತಿದರೆ ಇನ್ನೊಂದು ಸೀಕ್ರೆಟ್ ಖಾನಿ ಸಿಗುತ್ತದೆ! ಅದರಲ್ಲಿ ತುಂಬಾ ವರುಷಗಳ ಒಂಟಿಕೊಪ್ಪಲ್ ಪಂಚಾಂಗಗಳಿವೆ! ಇದೇನಪ್ಪ ಸೀಕ್ರೆಟ್ ಖಾನಿಯಲ್ಲಿ ಹಳೇ ಪಂಚಾಂಗಗಳು ಎಂದು ಆಶ್ಚರ್ಯ ಅಲ್ಲವೇ? ಆ ಪಂಚಾಂಗಗಳಲ್ಲಿ ಒಂದು ವಿಶೇಷವಿದೆ! ನಮ್ಮ ಮನೆಯಲ್ಲಿ ನಡೆದ ವಿಶೇಷಗಳು ಏನೇ ಇರಲಿ, ಜನ್ಮ ದಿನಗಳು, ಗೃಹಪ್ರವೇಶ, ಮರಣ ದಿನ, ಇತ್ಯಾದಿಗಳನ್ನು ಆ ವರುಷದ ಪಂಚಾಂಗದ ದಿನದಲ್ಲಿ ಸಮಯ ಮತ್ತು ದಿನಾಂಕವನ್ನು ಪೆನ್ನಿನಲ್ಲಿ ಗುರುತು ಹಾಕಿ, ಆ ಪಂಚಾಂಗವನ್ನು ಜೋಪಾನವಾಗಿ ತೆಗೆದು ಇಟ್ಟಿದ್ದರು. ಮಳೆಗಾಲದಲ್ಲಿ ಥಂಡಿಯಿಂದ ರಕ್ಷಿಸಲು ಅದನ್ನು ಅಲ್ಲಿ ಇಟ್ಟಿರಬಹುದು!

ಬೀರು ಅಂದ ಮೇಲೆ ದುಡ್ಡು ಇರಲೇಬೇಕಲ್ಲವೇ? ನಾನು ನೋಡಿದ ಹಾಗೆ ಜಾಸ್ತಿ ನಗದು ಹಣ ಇರುತ್ತಿರಲಿಲ್ಲ. ಒಂದು ಸಣ್ಣ ಪರ್ಸ್ ನಲ್ಲಿ ಒಂದೆರಡು 50 ರೂಪಾಯಿ ನೋಟು, ಒಂದೆರಡು 10 ರೂಪಾಯಿ ನೋಟು, ಅಪರೂಪಕ್ಕೆ ಒಂದು ನೂರು ರೂಪಾಯಿ ನೋಟು ಇರುತ್ತಿತ್ತು. ಇದು ಮೇಲಗಡೆ ಖಾನಿಯಲ್ಲಿ ಎಲ್ಲರಿಗೂ ಕಾಣುವ ಹಾಗೆ ಇರುತ್ತಿತ್ತು. ಇನ್ನೊಂದು ಸಣ್ಣ ಕರ್ಚೀಫ್‌ನಲ್ಲಿ ಒಂದು ರೂಪಾಯಿ ನೋಟಿನ ಕಟ್ಟು, ಇನ್ನೊಂದು ಐದು ರೂಪಾಯಿ ನೋಟಿನ ಕಟ್ಟು ಇಟ್ಟು, ಅದು ಲಾಕರ್ ಒಳಗಡೆ ಬಂಗಾರದ ಸಾಮಾನು ಇಡುವ ಜಾಗದಲ್ಲಿ ಇರುತ್ತಿತ್ತು. ಇದು ಬಹುಶಃ ಎಲ್ಲರಿಗೂ ಗೊತ್ತಿರಲಿಕ್ಕೆ ಇಲ್ಲ! ಇದು ಆಕಸ್ಮಿಕಗಳ ಸಮಯದಲ್ಲಿ ಉಪಯೋಗಕ್ಕೆ ಇಟ್ಟಿದ್ದು. ಏನಾದರೂ ದುಃಖದ ಸುದ್ದಿಗಳು ಬಂದಾಗ ಅಪ್ಪ ಅವರ ತೆಳು ಬನಿಯನ್‌ನಲ್ಲಿ ಇರುವ ಜೇಬಿನಲ್ಲಿ ಈ ದುಡ್ಡು ಹಾಕಿಕೊಂಡು, ಅದರ ಮೇಲೆ ಶರ್ಟ್ ಹಾಕಿಕೊಂಡು ಹೋಗಿ ತೊಂದರೆ ಆದ ಮನೆಗೆ ತಲಪಿಸುತ್ತಿದ್ದರು. ಈ ಬಗ್ಗೆ ಯಾರಿಗೂ ಹೇಳುತ್ತಿರಲಿಲ್ಲ. ಕಾಲಕ್ರಮೇಣ ಆದಂತೆ 5 ರೂಪಾಯಿ ಕಟ್ಟಿನ ಜೊತೆಗೆ ಇನ್ನೊಂದು 10 ರೂಪಾಯಿ ಕಟ್ಟು ಬಂತು.

ಆ ಬೀರುವಿಗೆ ಇನ್ನೊಂದು ಸ್ಮರಣಿಕೆ (Souvenir) ಬಂದು ಸೇರಿದ್ದು ನನ್ನ ಅಕ್ಕ ಸುಲೋಚನಾ ಮದುವೆ ಆದ ಮೇಲೆ. ಗಾಂಧಿ ಶತಮಾನೋತ್ಸವದ ಅಂಗವಾಗಿ ಭಾರತೀಯ ರಿಸರ್ವ್ ಬ್ಯಾಂಕಿನವರು ಗಾಂಧೀಜಿ ಚಿತ್ರ ಇರುವ ಹೊಸ ಕಾಯಿನ್ ಗಳನ್ನು ಬಿಡುಗಡೆ ಮಾಡಿದ್ದರು. ಅದು ವಿಶೇಷವಾಗಿತ್ತು ಮತ್ತು ಲಿಮಿಟೆಡ್ ಆಗಿ ಬಿಟ್ಟಿದ್ದರು. ಅದು ಬಂಗಾರದ ಸಾಮಾನು ಇಡುವಂತ ರಟ್ಟಿನ ಡಬ್ಬಿಯಲ್ಲಿ ಇಟ್ಟು ಬಿಡುಗಡೆ ಮಾಡಿದ್ದರು. ಅದನ್ನು ಅಪ್ಪನಿಗೆ ಭಾವ ತಂದು ಒಂದು ಸಾರಿ ಕೊಟ್ಟಿದ್ದರು!

ಇನ್ನೊಂದು ಬಹುಶಃ ಬಹಳ ಮುಖ್ಯವಾದ ವಿಷಯ ಇದೆ! ಅದೇ ನಾನು ಸುಮಾರು ನಾಲ್ಕು ವರುಷ ಆದಾಗ ಲಂಗ, ಜಡೆಬಿಲ್ಲೆ, ಬಳೆ, ಶೂ, ಎಲ್ಲಾ ಹಾಕಿ ತೆಗೆಸಿರುವ ಫೋಟೋ ಇರುವ ಒಂದು ಆಲ್ಬಮ್!

ನನ್ನ ಅಪ್ಪನ ಬೀರು ನಮ್ಮ ಮನೆಯ ಎಲ್ಲಾ ವಿಷಯಗಳನ್ನು ತನ್ನ ಒಡಲಿನಲ್ಲಿ ತುಂಬಿಕೊಂಡಿದ್ದರೂ, ಏನೂ ತಿಳಿಯದಂತೆ ತನ್ನ ಪಾಡಿಗೆ ತಾನು ನಿಂತುಕೊಂಡು ತನ್ನ ಕೆಲಸ ಮಾಡುತ್ತಿದೆ.

***

'ವ್ಯೂಹದಲ್ಲಿ ಬಂಧಿ' – ಲೇಖನಮಾಲೆ-4

# ಸಾಂತ್ವನ

– ಮಾಧುರಿ ಕೃಷ್ಣ

ಇತ್ತೀಚೆಗೆ ಕೆಲ ದಿನಗಳಿಂದ ಬೆಳಗ್ಗೆ ಎದ್ದು ವಾಕಿಂಗ್ ಹೊರಟರೆ ಸಾಕು, ಮನಸ್ಸು ಅವನನ್ನು ಅಲ್ಲಿ ಇಲ್ಲಿ, ಪಾರ್ಕಿನ ಬೆಂಚಿನ ಮೇಲೆ ಹಾಗೂ ಆ ಸುಗಂಧಭರಿತ ಸಂಪಿಗೆ ಮರದ ಕೆಳಗೆ- ಎಲ್ಲೆಂದರಲ್ಲಿ ಹುಡುಕಾಡುತಿತ್ತು. ಸುಲಭಕ್ಕೆ ಕಾಣಿಸದಿದ್ದರೆ ಯಾವುದಾದರೂ ಬೆಂಚಿನ ಮೇಲಾದರೂ ಕುಳಿತು ಅವನಿಗಾಗಿ ಕಾಯುತಿತ್ತು.

ಅವನೆಂದರೆ ಯಾರೆಂದು ಗಲಿಬಿಲಿಯಾಯ್ತೇ? ಅವನೇ ಕಣ್ರೀ, ದೊಡ್ಡ ದೊಡ್ಡ ಹೂವು ಪತ್ರೆಯ ಶಾಲಿನವನು! ಈಗ ತಿಳಿಯಿತೇ?

ಹೌದು! ಸರಿಯಾಗಿ ಬೆಳಗಿನ ಸೂರ್ಯೋದಯ ಸಮಯದಲ್ಲಿ ನನ್ನ ಕಣ್ಣಿಗೆ ಕಾಣಿಸಿಕೊಂಡು ನನ್ನ ಓಡುವ ನಡಿಗೆಯೊಂದಿಗೆ ತಾನೂ ಓಟವಿಟ್ಟು, ಇದೂ ಅದೂ ಎಂದು ಮಾತುಗಳಾಡಿಕೊಂಡು ಆ ವಿಲಕ್ಷಣ ಮನುಷ್ಯ ನನ್ನ ಶುಭೋದಯವನ್ನು ಸಂಪನ್ನಗೊಳಿಸದಿದ್ದರೆ ನನಗಂತೂ ಅಂದಿನ ದಿನವೆಲ್ಲ ಬರೇ ಹಾಳು ಹಾಳು ಎನಿಸುತಿತ್ತು: ದಿನವಿಡೀ ಉಮೇದು ಕಾಣದೆ, ಸುಸೂತ್ರವಾಗಿ ಮನೆ ಕೆಲಸದಲ್ಲೂ ತೊಡಗಿಕೊಳ್ಳದೇ ಬರೇ ಜಾನಿಸುತ್ತ (ಧ್ಯಾನಿಸು ಶಬ್ದದ ಅಪಭ್ರಂಶ) ಕುಳಿತಿರುತಿದ್ದೆ. ಕೆಲವೊಮ್ಮೆ ಇದರ ಪರಿಣಾಮ ಗಂಡ ಮತ್ತು ಮಕ್ಕಳ ಮೇಲಾಗುವುದರಲ್ಲೂ ಆಶ್ಚರ್ಯವೇನಿರಲಿಲ್ಲ. ಆದರೂ ಕೂಡ ಅಂತಹ ಸಂದರ್ಭಗಳಲ್ಲಿ ಮರುದಿನ ಮುಂಜಾನೆಯಲ್ಲಿ ಅವನು ಸಿಕ್ಕಿಯೇ ಸಿಗುತ್ತಿದ್ದುದೂ ಉಂಟು. ನಾನಾದರೋ ಆಗಲೆಲ್ಲ ಅವನನ್ನು, "ಏನಪ್ಪ, ನಿನ್ನೆ ನಿನ್ನ ಸವಾರಿ ಯಾವ ಕಡೆ ಸಾಗಿತ್ತು?" ಎಂದು ವ್ಯಂಗ್ಯವಾಗಿಯೇ ಮಾತು ಆರಂಭಿಸುತಿದ್ದೆ. ನಾನು ಹಾಗೆ ಕೇಳಿದಾಗ ತುಸು ಸಂಕೋಚ, ತುಸು ನಾಚಿಕೆ ಲಜ್ಜೆಯ ಮುಖ ಭಾವ ಪ್ರದರ್ಶಿಸುತ್ತ ಶೀಘ್ರವಾಗಿ ಏನೋ ಒಂದು ಉತ್ತರಿಸುವ ಅವನ ರೀತಿ ನಿಜಕ್ಕೂ ಅದೆಷ್ಟೋ ಸುಂದರವಾಗಿ ನನಗೆ ಕಾಣಿಸುತಿತ್ತು.

ಆದರೆ ಈ ಒಂದು ದಿನ ಮಾತ್ರ ಅವನು ಅದೇಕೋ ಉತ್ತರಿಸದೆ ಸುಮ್ಮನೆ ನಡೆದು ಬಂದ. ಇದು ನನ್ನನ್ನು ಒಳಗಿಂದೊಳಗೇ ಸ್ವಲ್ಪ ರೊಚ್ಚಿಗೆಬ್ಬಿಸಿತು. ತುಟಿ ಬಿಗಿದುಕೊಂಡು ನಾನೂ ನಡೆಯತೊಡಗಿದೆ. ಖಾಲಿ ಬೆಂಚು ಕಾಣಿಸಿದ ಕೂಡಲೇ 'ಕೂತುಬಿಡೋಣ' ಎಂದಂದುಕೊಳ್ಳುವುದರಲ್ಲಿ ಅವನೇ ಮೊದಲು ಕೂತದ್ದೂ ಆಯ್ತು. ಮನಸ್ಸಿಲ್ಲದಿದ್ದರೂ ನಾನೂ ಅಲ್ಲಿ ಕೂರಲೇಬೇಕಾಯ್ತು.

ಒಂದಷ್ಟು ಸಮಯ ಕಳೆದರೂ ಯಾವ ಮಾತೂ ಸಾಗಲಿಲ್ಲ. ನನ್ನ ಮನಸ್ಸು ತನ್ನನ್ನು ಮೀರಿ ಏನೋ ಯೋಚಿಸುತ್ತಿತ್ತು. ಮಾತಿಲ್ಲದ ಸಮಯ ವ್ಯರ್ಥವೋ ವ್ಯರ್ಥ ಎಂದಾಗತೊಡಗಿದರೂ ತಿರುಗಿ ಕುಳಿತು ದಾಕ್ಷಿಣ್ಯಕ್ಕಾದರೂ ಒಂದು ಶಬ್ದ ಹೊರಡಿಸುವ ಮನಸ್ಸು ನನ್ನಲ್ಲಿ ಹುಟ್ಟಲಿಲ್ಲ. ಅದೆಷ್ಟೋ ವರ್ಷಗಳಿಂದ ಬೆಳೆದುಬಂದ ಸ್ನೇಹ ಸಂಬಂಧವೊಂದು ಇದ್ದಕ್ಕಿದ್ದಂತೆ ಅತಿಸಣ್ಣ ಕ್ಷುಲ್ಲಕ ವಿಚಾರದಿಂದಾಗಿ ಮುರಿದುಹೋಗಿ ಬಿಟ್ಟಿತ್ತು. ಮನಸ್ಸಿನೊಳಗೇ ತುಂಬ ಬೇಸರವಾಗಿ ಭಗಭಗನೇ ಉರಿಯುತಿತ್ತು. ತಂಪಾಗಿ ಬೀಸುತಿದ್ದ ಮುಂಜಾವಿನ ಗಾಳಿಯೂ ನಿರುಪಯುಕ್ತವಾದಂತಿತ್ತು!

'ಬದುಕಿನಲ್ಲಿ ಎಲ್ಲಕ್ಕೂ ಕಾರಣ ನಮ್ಮ ಮನಸ್ಸೇ! ಸಂಬಂಧಗಳು ಕಳೆದು ಹೋಗುವಾಗ ಆಗುವಷ್ಟು ನೋವು, ಕಳೆದೇಹೋದ ಮೇಲೆ ಮತ್ತೆ ಆಗೂದಿಲ್ಲ! ಮಾನಸಿಕ ಒತ್ತಡ ಇಲ್ಲದವರು ಈ ಜಗತ್ತಿನಲ್ಲಿ ಇಂದು ಯಾರೂ ಉಳಿದಿಲ್ಲ! ಇದು ಮಾನವ ಸಹಜ ವರ್ತನೆ ಎಂದುಕೊಂಡು ಎದುರಿಸುವುದನ್ನು ನಮ್ಮಷ್ಟಕ್ಕೆ ನಾವು ಒಗ್ಗಿಸಿಕೊಳ್ಳಬೇಕು! ' – ಮೆಲುವಾದರೂ ಸ್ಪಷ್ಟವಾಗಿ ದೃಢತೆ, ಧೀರತೆ, ದಿವ್ಯತೆಯಿಂದ ಹೊಮ್ಮಿ ಬಂದ ಮಾತು, ವಸ್ತು ಮತ್ತು ವಿನ್ಯಾಸವಾಗಿ ಎತ್ತರಕ್ಕೇರಿ ಅನುರಣಿಸಿತು.

ಮಾತಿಲ್ಲದೆ ಸುಮ್ಮನೆ ಕುಳಿತಿದ್ದವಳು ಥಟ್ಟನೆ ಅವನೆಡೆ ತಿರುಗಿ ಅವನ ಮುಖವನ್ನೇ ದಿಟ್ಟಿಸಿದೆ. ಅಗತ್ಯಕ್ಕಿಂತಲೂ ಹೆಚ್ಚಿನ ಹೂವು ಪತ್ರೆಗಳಿಂದ ಮುಚ್ಚಿದ ಅವನ ಮುಖದಲ್ಲಿ ಸದ್ದಿಲ್ಲದೇ ಸಮಾಧಾನಿಸುವ ಸಾಂತ್ವನದ ಚಿತ್ರಣವಿತ್ತು; ಧಗಧಗಿಸುವ ಅಂತರಂಗದ ತುಮುಲಗಳನ್ನು ನೇರ್ಪಡಿಸಿಕೊಡುವ ಅಶ್ವಾಸನೆಯೂ ಇತ್ತು! ಜತೆಗೆ ಈ ಸಾಂಸಾರಿಕ ಜಗತ್ತಿನ ಭಾರವನ್ನು ತಾನೊಬ್ಬನೇ ಹೊತ್ತಿರುವೆನೆಂಬ ನಿರ್ಮಲ ನಿಶ್ಚಲ ಭಂಗಿಯಲ್ಲಿ ಕಟೆದ ಕರಿಶಿಲಾಮೂರ್ತಿಯಂತೆ ಸ್ಥಂಭಿಸಿಯೂ ಕುಳಿತಿದ್ದನವನು!!

ಬೇರೇನೂ ಮನಸ್ಸಿನಲ್ಲಿ ಮೂಡಿಬರದೇ ಹಾಗೇ ಅವನನ್ನೇ ನೋಡುತ್ತ ಕುಳಿತೆ.

"ಏನು, ಇಂದು ಮಕ್ಕಳನ್ನು ಸ್ಕೂಲ್ ಬಸ್ಸಿಗೆ ಹತ್ತಿಸುವ ಇರಾದೆಯಿಲ್ಲವೇ?"

'ಹೌದಲ್ವೇ!' ಗಡಬಡಿಸಿಕೊಂಡು ಮೇಲೆದ್ದೆ. ಮೃದು ಮಧುರ ಮಂದಹಾಸವನ್ನು ಬೀರುತ್ತ ಕುಳಿತಿದ್ದ ಅವನಿಗೆ 'ಬಾಯ್' ಕೂಡಾ ಹೇಳದೇ ಅಲ್ಲಿಂದ ಹೊರಟೇಬಿಟ್ಟೆ.

***

# ಪುಕ್ಕಟೆ ಸಲಹೆಗಳ ಸುಳಿಯಲ್ಲಿ

**- ಗಾಯತ್ರಿ ಮೂರ್ತಿ**

ಆಹಾ, ನೀಡಲು ಅಥವಾ ಕೇಳಲು ದುಡ್ಡು ಖರ್ಚಿಲ್ಲ, ಯಾರು ಯಾರಿಗೆ ಬೇಕಾದರೂ ನೀಡಬಲ್ಲ ಸಲಹೆ ಎಂದರೆ ಅದು ಪುಕ್ಕಟೆ ಸಲಹೆ ಮಾತ್ರ. ಅಂದಹಾಗೆ ಪುಕ್ಕಟೆ ಸಲಹೆ ನೀಡುವುದರಲ್ಲಿ ಒಂದು ವಿಧವಾದ ಆನಂದ ಸಿಗುತ್ತದೆ. ಅದನ್ನು ಕೇಳುವವರಿದ್ದರಂತೂ, ನೀಡುವವರ ಉತ್ಸಾಹ ಇಮ್ಮಡಿಯಾಗತ್ತೆ ಅನ್ನೋದರಲ್ಲಿ ಸಂದೇಹವೇ ಇಲ್ಲ. ಅವರ ಉತ್ಸಾಹ ಪುಟಿದೆದ್ದು ಪುಕ್ಕಟೆ ಸಲಹೆಗಳು ಪುಂಖಾನುಪುಂಖವಾಗಿ ಹರಿದು ಬರುತ್ತವೆ.

ಪುಕ್ಕಟೆ ಸಲಹೆಗಳಿಂದ ತೊಂದರೆ ಇದೆ, ಇಲ್ಲ. ಅನುಕೂಲ ಇದೆ, ಇಲ್ಲ. ಇದೇನಿದು ಈ ರೀತಿ ವಿಚಿತ್ರವಾಗಿ ತದ್ವಿರುದ್ಧ ಹೇಳಿಕೆಗಳನ್ನು ನೀಡ್ತಿದೀರಲ್ಲಾ ಅಂತಾ ಮೂಗು ಮುರೀಬೇಡಿ, ಮುಂದೆ ಓದಿ, ನಿಮಗೇ ಗೊತ್ತಾಗತ್ತೆ.

ಒಬ್ಬ ನಿವೃತ್ತ ವ್ಯಕ್ತಿ ತನ್ನ ನಿವೃತ್ತಿಯ ನಂತರ ಸಿಗುವ ಪ್ರಾವಿಡೆಂಟ್ ಫಂಡ್ ಹಣ, ಗ್ರಾಚುಯಿಟಿ ಎಲ್ಲವನ್ನೂ ಒಂದು ಚಿಟ್ ಫಂಡ್ ಕಂಪೆನಿಯಲ್ಲಿ ಇನ್ವೆಸ್ಟ್ ಮಾಡಿದ್ದರು. ಕಾರಣ, ಅವರು ರಾಷ್ಟ್ರೀಕೃತ ಬ್ಯಾಂಕಿಗಿಂತ ಅತಿ ಹೆಚ್ಚು ಬಡ್ಡಿ ಹಣ ಕೊಡುತ್ತಿದ್ದರು. ಆರು ತಿಂಗಳಲ್ಲಿ ಅವರ ಹಣ ದುಪ್ಪಟ್ಟು ಆಗುತ್ತದೆ ಎಂದು ಭರವಸೆ ನೀಡಿದ್ದರು. ಹಾಗೆಯೇ ಅವರ ಹಣ ದುಪ್ಪಟ್ಟು ಆಗಿ ಅದನ್ನು ಮತ್ತೆ ಇನ್ವೆಸ್ಟ್ ಮಾಡಿದ್ದರು. ಹೊಸದಾಗಿ ನಿವೃತ್ತಿ ಹೊಂದಿದ ಗೆಳೆಯನಿಗೆ, ಈ ಕಂಪೆನಿಯಲ್ಲಿ ಇನ್ವೆಸ್ಟ್ ಮಾಡು, ಸಿಕ್ಕಾಪಟ್ಟೆ ಲಾಭ ಸಿಗತ್ತೆ. ಆರಾಮ ಜೀವನ ನಡೆಸಬಹುದು ಎಂದು ಪುಕ್ಕಟೆ ಸಲಹೆ ನೀಡಿದರು. ಗೆಳೆಯ ಅಂತೆಯೇ ಮಾಡಿದ. ಆರು ತಿಂಗಳೊಳಗೆ ಕಂಪೆನಿ ಮಾಲಿಕ ರಾತ್ರೋರಾತ್ರಿ ಹಣವನ್ನೆಲ್ಲಾ ದೋಚಿಕೊಂಡು ಹೇಳಹೆಸರಿಲ್ಲದಂತೆ ಮಾಯವಾದ. ಆ ಕಂಪೆನಿಯಲ್ಲಿ ಬಂಡವಾಳ ಹೂಡಿದವರು ಕಂಪೆನಿಯ ಮುಂದೆ ನಿಂತು ಗಲಾಟೆ ಮಾಡಿದ್ದಷ್ಟೇ ಲಾಭ. ಅಂದಹಾಗೆ ಟಿವಿ ಚಾನಲ್‌ಗಳಿಗೆ ದಿನಪೂರ್ತಿ ಚರ್ವಿತಚರ್ವಣ ಹೇಳಿದ್ದೇ ಹೇಳಿ ಪ್ರಸಾರಮಾಡಲು ಸೊಗಸಾದ ವಿಷಯ ಸಿಕ್ಕಿತ್ತೂನ್ನಿ. ಮೊದಲೇ ದುಡ್ಡು ಕಳೆದುಕೊಂಡು ದುಃಖಪಡುತ್ತಿದ್ದ ಜನರನ್ನು ಸಂದರ್ಶನಗಳಲ್ಲಿ ಪ್ರಶ್ನೆಗಳ ಸುರಿಮಳೆಯಿಂದ ಮತ್ತಷ್ಟು ಮುಜುಗರ, ದುಃಖಕ್ಕೀಡು ಮಾಡಿದ ಚಾನಲ್‌ಗಳ ಟಿಆರ್‌ಪಿ ಮಾತ್ರ ಏರಿ ಅವರ ಬೇಳೆ ಬೆಂದಿತ್ತೂನ್ನಿ. ಇತ್ತಕಡೆ ಗೆಳೆಯನ ಪುಕ್ಕಟೆ ಸಲಹೆಯಿಂದ ತನ್ನ ಹಣವನ್ನೆಲ್ಲಾ ಕಳೆದುಕೊಂಡಿದ್ದ ಆತ ಮತ್ತೆ ಗೆಳೆಯನ ಕಡೆ ತಿರುಗಿ ನೋಡಲಿಲ್ಲ. ಪುಕ್ಕಟೆ ಸಲಹೆಯ ಪ್ರಭಾವ ಎಷ್ಟೋ ವರ್ಷಗಳ ಅವರ ಆತ್ಮೀಯ ಗೆಳೆತನವನ್ನು ಕೊಚ್ಚಿ ಹಾಕಿತ್ತು.

**

ಖ್ಯಾತ ನಟಿ ಲೀಲಾವತಿಯವರು ನಿಧನರಾದ ಸುದ್ದಿ ಓದುತ್ತಿದ್ದೆ. ಅದರಲ್ಲಿ ಅವರ ಬಗ್ಗೆ ಇದ್ದ ಈ ಮಾಹಿತಿ ನನ್ನ ಗಮನ ಸೆಳೆಯಿತು. ಲೀಲಾವತಿಯವರಿಗೆ ಜಿಡ್ಡುಕೂಡಿದ ಚರ್ಮ ಇತ್ತಂತೆ. ಅದರ ನಿವಾರಣೆಗೆ ಯಾರೋ 'ಹಬೆಗೆ ಮುಖ ಒಡ್ಡಿಕೊಳ್ಳಿ. ನಿಮ್ಮ ಚರ್ಮ ಸರಿಹೋಗತ್ತೆ' ಎಂದು ಪುಕ್ಕಟೆ ಸಲಹೆ ನೀಡಿದರಂತೆ. ಅವರು ಹಾಗೆ ಮಾಡಿ, ಉರಿ ಉರಿ ಎಂದು ಒದ್ದಾಡಿದರಂತೆ. ಪುಕ್ಕಟೆ ಸಲಹೆ ನೀಡಿದವರು ಸರಿಯಾಗಿ ನೀಡಿರಲಿಲ್ಲವೇನೋ ಎಂದು ನನಗನ್ನಿಸಿತು. ಅಥವಾ, ತಿಳಿಯದೆ ಲೀಲಾವತಿ ಅವರು ಹೆಚ್ಚು ಹೊತ್ತು ಹಬೆಗೆ ಮುಖ ಒಡ್ಡಿಕೊಂಡಿದ್ದ ಸಂಭವವೂ ಇದೆ. ಅಂತೂ ಅವರು ಮತ್ತೊಮ್ಮೆ ಹಬೆಗೆ ಮುಖವೊಡ್ಡುವ ಸಾಹಸವಂತೂ ಮಾಡಿರಲಾರರು.

**

ಇತ್ತೀಚೆಗೆ ದೂರದರ್ಶನದಲ್ಲಿ ನೋಡಿದ ಪ್ರಸಂಗ - ಹೆಂಡತಿಯ ಪುಕ್ಕಟೆ ಸಲಹೆ, ಏನಪ್ಪಾಂದ್ರೆ, ಜ್ಯೂಯಲರಿ ಶಾಪ್‌ನಲ್ಲಿ ಕಳ್ಳತನ ಮಾಡು, ಒಂದೇ ಬಾರಿಗೆ ಅಪಾರ ಹಣ ಸಂಪದಿಸಬಹುದು ಎಂದು. ನನ್ನ ಪ್ರಕಾರ ಅವನು ಸಣ್ಣಪುಟ್ಟ ಕಳ್ಳತನವನ್ನೋ ಇಲ್ಲವೆ ಸರಗಳ್ಳತನವನ್ನೋ ಮಾಡುತಿದ್ದ ಕಳ್ಳನಿರಬೇಕು. ಸರಿ, ಅವನಿಗೆ ಹೆಂಡತಿಯ ಪುಕ್ಕಟೆ ಸಲಹೆ ಬಹುವಾಗಿ ಹಿಡಿಸಿ, ಏಕಾಏಕಿ ಶ್ರೀಮಂತನಾಗುವ ಕನಸು ಕಾಣುತ್ತ, ಬಹಳಷ್ಟು ಪ್ರಯಾಸ, ಪ್ರಯತ್ನದ ನಂತರ, ರಾತ್ರಿ ಆಭರಣದ ಅಂಗಡಿಯೊಂದಕ್ಕೆ ಲಗ್ಗೆ ಹಾಕಿ, ಒಂದೂವರೆ ಕಿಲೋಗ್ರಾಮ್‌ನಷ್ಟು ಬಂಗಾರದ ಒಡವೆಗಳನ್ನು ಲೂಟಿ ಮಾಡಿ

ಕೊಂಡೊಯ್ದು. ಸಿಸಿಟಿವಿಯ ಮೂಲಕ ಕಳ್ಳನ ಪತ್ತೆಯಾಯ್ತು, ಪತಿ ಪತ್ನಿ ಜೈಲು ಸೇರಿದರು. ನೋಡಿದಿರಾ, ಹೆಂಡತಿಯ ಪುಕ್ಕಟೆ ಸಲಹೆ ಗಂಡಹೆಂಡಿರ ಪಾಲಿಗೆ ಹೇಗೆ ದುಷ್ಟ ಸಲಹೆಯಾಯ್ತು.

**

ಈಗ ನೋಡಿ, ಪುಕ್ಕಟೆ ಸಲಹೆ ಬಗ್ಗೆ ಯೋಚಿಸುತ್ತಿರುವಂತೆ ನನಗೆ ರಾಮಾಯಣದಲ್ಲಿ ಮಂಥರೆಯ ನೆನಪಾಗುತ್ತಿದೆ. ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನಿಗೆ ಯುವರಾಜ ಪಟ್ಟಾಭಿಷೇಕದ ಸಂದರ್ಭ. ಆದರೆ ದಶರಥನ ಮೂರನೆಯ ರಾಣಿ ಕೈಕೇಯಿಯ ಸೇವಕಿ ಮಂಥರೆಗೆ ಸಂತೋಷವಿಲ್ಲ. ಶ್ರೀರಾಮನು ಯುವರಾಜನಾಗಿ, ಮುಂದೆ ಮಹಾರಾಜನಾದರೆ, ಕೈಕೇಯಿಗೆ ಪ್ರಾಶಸ್ತ್ಯವಿರುವುದಿಲ್ಲ, ತನ್ನ ಪರಿಸ್ಥಿತಿ ಆಗ ಹೀನಾಯವಾಗಬಹುದು ಎಂದು ಯೋಚಿಸಿದಳೇನೋ, ಸೀದಾ ಕೈಕೇಯಿಯ ಬಳಿ ಬಂದು, ಹಿಂದೆ ದಶರಥ ಮಹಾರಾಜ ಕೈಕೇಯಿಗೆ ನೀಡಿದ್ದ ಎರಡು ವರಗಳ ನೆನಪು ಮಾಡಿಸಿ, ನಂತರ ಅದರ ಪ್ರಯೋಗಕ್ಕೆ ಈಗ ಕಾಲ ಒದಗಿಬಂದಿದೆ, ಮೊದಲು ಭರತ ಯುವರಾಜನಾಗಬೇಕೆಂಬ ವರ, ಎರಡನೆಯದು ಶ್ರೀರಾಮಚಂದ್ರ ಹದಿನಾಲ್ಕು ವರ್ಷಗಳ ಕಾಲ ವನವಾಸ ಮಾಡಬೇಕೆಂಬ ವರಗಳನ್ನು ಕೇಳು ಎಂದು ಪುಕ್ಕಟೆ ಸಲಹೆ ನೀಡಿದಳು. ಇದೇ ರಾಮ–ರಾವಣ ಯುದ್ಧಕ್ಕೆ ನಾಂದಿಯಾದದ್ದು ನಿಮಗೆಲ್ಲ ಗೊತ್ತೇ ಇದೆ. ನೋಡಿದಿರಾ, ಪುಕ್ಕಟೆ ಸಲಹೆ ಹೇಗೆ ರಾಮಾಯಣ ಕಥೆಯಲ್ಲಿ ಪ್ರಮುಖ ಪಾತ್ರವಹಿಸಿತು.

**

ನಮ್ಮ ಅಜ್ಜಿ ಮನೆಯಲ್ಲಿ ನಡೆದ ಪ್ರಸಂಗ. ದಶಕಗಳ ಹಿಂದಿನ ಮಾತು. ಆಗ, ಈಗಿನಂತೆ ಹೆಣ್ಣು ಮಕ್ಕಳು ಬಾಬ್ ಕಟ್ ಮಾಡಿಸುವುದಿರಲಿ, ತುದಿಗೂದಲು ಕತ್ತರಿಸುವುದೂ ನಿಷಿದ್ಧ. ಒಂದು ದಿನ ನನ್ನ ಅಜ್ಜಿಯ ಗೆಳತಿಯೊಬ್ಬರು ನಮ್ಮನೆಗೆ ಬಂದು ಅವರೊಂದಿಗೆ ಹರಟುತ್ತ, 'ನನ್ನ ಮೊಮ್ಮಗಳು ಸ್ಕೂಲಿಗೆ ಹೋಗಿ ಒಂದು ರಾಶಿ ಹೇನು ತರಿಸಿಕೊಂಡಿದಾಳೆ. ಏನು ಮಾಡೋದು ಪಾರ್ವತಮ್ಮನೋರೆ?' ಎಂದು ಅವರನ್ನು ಕೇಳಿದರೆ, ಅಲ್ಲಿಯೇ ಪುಟ್ಟ ಕನ್ನಡಿಯಲ್ಲಿ ನೋಡಿಕೊಂಡು ತಲೆ ಬಾಚಿಕೊಳ್ಳುತ್ತಿದ್ದ ನನ್ನ ಚಿಕ್ಕಪ್ಪನ ಬಾಯಿಂದ ಪುಕ್ಕಟೆ ಸಲಹೆ, 'ಯಾಕೆ ಯೋಚನೆ ಮಾಡ್ತೀರಾ, ಟಾಕಿ ಹೊಡಿಸ್ಬಿಡಿ, ಸರಿಹೋಗತ್ತೆ' ಅಂತ ಥಟ್ಟಂತ ಉದುರಿತು. 'ನೋಡಿದ್ರಾ ಪಾರ್ವತಮ್ಮೋನೋರೆ, ನಿಮ್ಮಗ ಹೇಗೆ ಮಾತಾಡ್ತಾರೆ? ಏನೋ ಕಷ್ಟಸುಖಾಂತ ನಿಮ್ಮ ಹತ್ರ ಹೇಳಿದ್ರೆ, ಹೆಣ್ಣು ಮಗು ವಿಷಯದಲ್ಲಿ ಇವರು ಹೀಗಾ ಸಲಹೆ ಕೊಡೋದು?' ಎಂದು ಕೋಪ ಮಾಡಿಕೊಂಡು ಎದ್ದು ಹೋದರು.

'ಏನೋ ಇದು, ಹೆಣ್ಣು ಮಗಳಿಗೆ ಟಾಕಿ ಹೊಡೆಸೂಂತೀಯಾ? ನಿಂಗೇನು ಬುದ್ಧಿಗಿದ್ಧಿ ಇದಿಯೋ ಇಲ್ವೋ' ಎಂದು ನನ್ನ ಅಜ್ಜಿ ಬೈದು ಅವರನ್ನು ಸುಮ್ಮನಾಗಿಸಿದರು. 'ಅಲ್ಲಿಯೇ ರೂಮಿನಲ್ಲಿದ್ದ ನನ್ನ ಚಿಕ್ಕಮ್ಮ, 'ಬೇಕಿತ್ತಾ ಇದು? ಇಲ್ಲದ ಉಸಾಬರಿ ನಿಮಗೇಕೆ'' ಎಂದು ಗುಟುರು ಹಾಕಿದರು. ಕೊನೆಗೆ ಚಿಕ್ಕಪ್ಪ ತಪ್ಪಾಯ್ತು, ಶಾಂತಂ ಪಾಪಂ, ಶಾಂತಂ ಪಾಪಂ ಎಂದು ತಪ್ಪೊಪ್ಪಿಕೊಂಡ ಮೇಲೇ ಬಂದ ಅಜ್ಜಿಯ ಕೋಪ ತಣ್ಣಗಾಗಿದ್ದು.

ಉಚಿತ ಸಲಹೆ ನೀಡುವುದರಲ್ಲಿ ನಾನೇನೂ ಕಮ್ಮಿ ಇರಲಿಲ್ಲ ಅಥವಾ ಇಲ್ಲ!!! ಒಮ್ಮೆ ಮದುವೆ ಮನೆಗೆ ಹೋಗಿದ್ದೆ. ಅಲ್ಲಿ ನನ್ನ ದೂರದ ಬಂಧುವೊಬ್ಬರು ಬಹಳ ದಿನಗಳ ಮೇಲೆ ಸಿಕ್ಕಿದ್ದರು. ಅವರು ಮೊದಲು ಮಾಮೂಲು ತೂಕ ಇದ್ದವರು, ಈಗ ಸಿಕ್ಕಾಪಟ್ಟೆ ದಪ್ಪಗಾಗಿದ್ದರು. ಅವರನ್ನು ಮಾತಾಡಿಸಿ ಸುಮ್ಮನಿರಬಾರದೇ? ಅದ್ಹೇಗೆ ಸಾಧ್ಯ? ರ್ರೀ... ನೀವು ತುಂಬಾ ದಪ್ಪಗಾಗಿದೀರಾ. ಸ್ವಲ್ಪ ತೂಕ ಕಮ್ಮಿ ಮಾಡ್ಕೊಳಿ. ಮೊದಲು ಥೈರಾಯಿಡ್ ಏನಾದ್ರೂ ಇದೀಯಾಂತ ಚೆಕ್ ಮಾಡ್ಸಿ. ಆಮೇಲೆ ಡಯಟ್ ಮಾಡಿ ತೂಕ ಇಳಿಸಿ, ನಿಮ್ಮ ಆರೋಗ್ಯಕ್ಕೆ ಒಳ್ಳೇದು' ಎಂದು ನನ್ನ ಪುಕ್ಕಟೆ ಸಲಹೆ ಬಾಯಿಂದ ಉದುರಬೇಕೇ? ಆಗಲೇ ಅವರ ಮುಖ ಕಪ್ಪಿಟ್ಟಿದ್ದು ನೋಡಿ, ಸುಮ್ಮನಿರಬಾರದಿತ್ತೇ ಎನ್ನಿಸಿತು. ಆದರೇನು, ಮಾತು ಬಾಯಿಂದ ಉದುರಿದ ಮೇಲೆ ಮುಗಿಯಿತಲ್ಲ. ಪರಿಣಾಮ ಎದುರಿಸಲೇಬೇಕು. ಸರಿ, ನಂತರ ಅವರು ಬೇರಾರೊಂದಿಗೋ, 'ನಾನು ದಪ್ಪಗಿರೋದು ಎಲ್ಲರಿಗೂ ಕಷ್ಟ ಆಗಿದೆ. ಅವರೇನು ನನ್ನನ್ನು ಹೊತ್ಕೊಂಡು ನಡೀಬೇಕಾ? ನಾನು ದಪ್ಪಗಿರೋದ್ರಿಂದ ಇವರಿಗೇನು ಕಷ್ಟ? ನನ್ನ ಭಾರ ನಾನು ಹೊರ್ತೀನಿ. ಥೈರಾಯಿಡ್ ಟೆಸ್ಟ್ ಮಾಡ್ಸೀಂತ ಪುಕ್ಕಟೆ ಸಲಹೆ ನೀಡಿದ್ರು. ನಂಗೇನೂ ಆಗಿಲ್ಲ, ನಾನು

ಆರೋಗ್ಯವಾಗೇ ಇದೀನಿ' ಲೊಟ್ಟೆ ಲೊಸಕೂಂತ ಜೋರಾಗಿಯೇ ಮಾತಾಡುತ್ತಿದ್ದುದು ಕೇಳಿ, ಮೆಲ್ಲನೆ ಅಲ್ಲಿಂದ ಜಾಗ ಖಾಲಿ ಮಾಡಿದೆ.

ಮತ್ತೊಮ್ಮೆ ಹೀಗೇ ಒಬ್ಬ ಪರಿಚಿತರು ಸಿಕ್ಕಾಗ ತುಂಬಾ ಕೃಶವಾಗಿದ್ದು ಕಂಡು, ವಿಪರೀತ ಕಾಳಜಿಯಿಂದ 'ತುಂಬಾ ಸಣ್ಣಗಾಗಿದೀರಾ, ಯಾಕೆ? ಶುಗರ್ ಟೆಸ್ಟ್ ಮಾಡಿಸಿದೀರಾ ತಾನೇ?' ಎಂದು ಕೇಳಿದಾಗ, 'ನೀವೂ ಅದೇ ಪ್ರಶ್ನೆ ಕೇಳಿದ್ರಾ? ಎಲ್ಲರಿಗೂ ಉತ್ತರ ಹೇಳಿ ಹೇಳಿ ನಂಗೆ ತಲೆ ಚಿಟ್ಟು ಹಿಡಿದಿದೆ. ನಂಗೇನೂ ಆಗಿಲ್ಲ. ಎಲ್ಲಾ ಟೆಸ್ಟ್ ಮಾಡಿಸಿಯಾಗಿದೆ. ಡಯಟ್ ಮಾಡಿ ಸಣ್ಣಗಾಗಿದೀನಿ ಅಷ್ಟೆ' ಎಂದು ನಿಷ್ಠೂರವಾಗಿ ನುಡಿದಾಗ, ಸುಮ್ಮನಿರಬಾರದಿತ್ತೇ? ಅನ್ನಿಸಿದ್ದು ನಿಜ. ಅಂದಿನಿಂದ ಯಾರು ದಪ್ಪಗೆ ಕಾಣಲಿ ಅಥವಾ ಕೃಶವಾಗಿ ಕಾಣಲಿ, ಮನಸ್ಸಿಗೆ ಬಂದದ್ದನ್ನು ಒದರುವ ಉತ್ಸಾಹವನ್ನು ಕಡಿತಗೊಳಿಸಿದ್ದೇನೆ. ಇದೆಲ್ಲಾ ಯಾಕೆ ಹೇಳಿದ್ದು ಅಂತೀರಾ? ಯಾಕೇಂದ್ರೆ, ದಪ್ಪಗಾಗಕ್ಕೆ, ಸಣ್ಣಗಾಗಕ್ಕೆ ಎಲ್ಲದಕ್ಕೂ ಪುಕ್ಕಟೆ ಸಲಹೆ ನೀಡಲು ಸಾಕಷ್ಟು ಮಾಹಿತಿ ಗೂಗಲ್ ಗುರುವಿನ ಕೃಪೆಯಿಂದ ಕಲಿತಿರೋದ್ರಿಂದ ಹೇಳ್ತಿದ್ದೆ. ಗೂಗಲ್ ಗುರು ಇದಕ್ಕೆಲ್ಲಾ ಉತ್ತರ ಇಟ್ಟಿರೋವಾಗ, ಅವರೇ ತಿಳ್ಕೊತಾರೆ ಅಲ್ವಾ? ಜೊತೆಗೆ ತೂಕ ನಿರ್ವಹಿಲು ಕಂಕಣ ತೊಟ್ಟಿರುವ ಸಂಸ್ಥೆಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡಿರುವಾಗ ನಾನ್ಯಾಕೆ ಮಧ್ಯೆ ತಲೆ ತೂರಿಸಿ ಕೆಟ್ಟವಳಾಗಬೇಕು? ಅಂತೀರಾ? ಒಪ್ದೆ ನಿಮ್ಮಾತು.

ಇನ್ನೊಂದು ಸಮಾರಂಭದಲ್ಲಿ ಒಬ್ಬಳು ಪರಿಚಯಸ್ಥ ಯುವತಿ, ಹಳದಿ ಬಣ್ಣದ ಸುಂದರವಾದ ಸೀರೆಗೆ ತಿಳಿ ನೀಲಿ ಬಣ್ಣದ ರವಿಕೆ ತೊಟ್ಟಿದ್ದಳು. ನಾನು ಸುಮ್ಮನಿರದೆ, 'ಈ ತಿಳಿ ಹಳದಿ ಸೀರೆ ತುಂಬಾ ಚೆನ್ನಾಗಿದೆ. ಆದರೆ ನೀಲಿ ರವಿಕೆ ಅಷ್ಟಾಗಿ ಸರಿ ಹೊಂದುತ್ತಿಲ್ಲ. ಕಪ್ಪು ಬಣ್ಣ, ಕಡುಕೆಂಪು ಇಲ್ಲವೇ ಕಡುಕಂದು ಬಣ್ಣದ ರವಿಕೆ ಚೆನ್ನಾಗಿರತ್ತೆ' ಎಂದು ಉದಾರವಾಗಿ ಪುಕ್ಕಟೆ ಸಲಹೆ ನೀಡಿದೆ. ಅಲ್ಲಿಯವರೆಗೆ ಚೆನ್ನಾಗಿ ಮಾತನಾಡುತ್ತಿದ್ದ ಆ ಯುವತಿಯ ಮುಖಭಾವ ಬದಲಾಗಿದ್ದು ನನ್ನ ಗಮನಕ್ಕೆ ಬಂತು. ಯಾಕೋ ನಾನು ಹೇಳಿದ್ದು 'ಬ್ಯಾಕ್ ಫೈರ್' ಆಯ್ತಲ್ಲಾ, ಎಂದುಕೊಂಡೆ. ಅಂದಿನಿಂದ ನನ್ನ ಪುಕ್ಕಟೆ ಸಲಹೆ ನೀಡುವುದನ್ನು ಕಡಿಮೆ ಮಾಡಿದ್ದೇನೆ ಎನ್ನಿ. ಆದರೂ ಸ್ವಭಾವ, ಕೆಲವು ಸಾರಿ ನನ್ನ ಬಾಯಿ ನನಗೇ ತಿಳಿಯದಂತೆ ಪುಕ್ಕಟೆ ಸಲಹೆ ಉದುರಿಸಿಬಿಡುತ್ತೆ.

**

ಹಾಂ, ಅಂದಹಾಗೆ ಪುಕ್ಕಟೆ ಸಲಹೆ ಅಂದರೆ, ಒಂದು ಪ್ರಸಂಗ ನೆನಪಿಗೆ ಬರುತ್ತದೆ. ನಮ್ಮ ಬೀಗರಿಗೆ ಡೆಂಗ್ಯೂ ಜ್ವರ ಬಂದು ಆಸ್ಪತ್ರೆಗೆ ದಾಖಲಾಗಿದ್ದರು. ಈ ವಿಷಯವನ್ನು ಮೈಸೂರಿನಲ್ಲಿದ್ದ ನನ್ನ ತಾಯಿಯೊಂದಿಗೆ ಲೋಕಾಭಿರಾಮವಾಗಿ ಹೇಳಿದ್ದೆ. ಅವರಿಗೆ ಅದನ್ನು ಕೇಳಿ ತುಂಬಾ ಬೇಸರವಾಗಿರಬೇಕು. ತಕ್ಷಣವೇ ಅವರಿಂದ ಪುಕ್ಕಟೆ ಸಲಹೆ ದೂರವಾಣಿಯಿಂದ ತೂರಿ ಬಂತು, 'ಪರಂಗಿ ಎಲೆ ರಸ ತೆಗೆದು ಕಳಿಸು, ಬೇಗ, ಪಾಪ, ಆತ ಬದುಕಿಕೊಳ್ಳಲಿ'. ಅದಾಗಲೇ ನಮ್ಮ ಬೀಗರು ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ಪಡೆಯುತ್ತಿದ್ದರಿಂದ ನನ್ನ ತಾಯಿಯ ಮಾತು ಕೇಳಿ ನಾನು ಅವರ ಸಲಹೆ ಮನ್ನಿಸದೆ ಸುಮ್ಮನಾದೆ. ಆದರೆ ನನ್ನ ತಾಯಿ 'ಪರಂಗಿ ಎಲೆ ಕಷಾಯ ಮಾಡಿ ಕಳಿಸಿದೆಯಾ' ಎಂದು ಅಂದೇ ಎರಡು ಮೂರು ಬಾರಿ ಕೇಳಿದರು. ಸರಿ, ಇನ್ನು ಈ ಬಗ್ಗೆ ಸುಮ್ಮನಿದ್ದರೆ, ನನ್ನ ತಾಯಿಯೇ ಕಷಾಯದ ಸಮೇತ ಮೈಸೂರಿಂದ ಬರಬಹುದು ಎಂದು ಯೋಚಿಸಿ, ಪರಂಗಿ ಎಲೆ ತರಿಸಿ ಕಷಾಯ ಮಾಡಿ ನನ್ನ ಸೊಸೆಯೊಂದಿಗೆ ಆಸ್ಪತ್ರೆಗೆ ಕಳಿಸಿದೆ. ಆದರೆ, ಅವರಿಗೆ ಅದು ಒಗ್ಗಲಿಲ್ಲ, ವಾಂತಿಯಾಯಿತು ಎಂದು ನನ್ನ ಸೊಸೆ ಹೇಳಿದಳು. ಅಲ್ಲಿಗೆ ನಾನು ಸುಮ್ಮನಾದೆ. ಎರಡು ದಿನ ಬಿಟ್ಟು ನಾನು, ನನ್ನ ಪತಿ ಆತನನ್ನು ನೋಡಿ ವಿಚಾರಿಸಿ ಬರಲು ಆಸ್ಪತ್ರೆಗೆ ಹೋದೆವು. ಆತ ಸಾಕಷ್ಟು ಚೇತರಿಸಿಕೊಂಡಿದ್ದರು. ನೋಡಿ ಖುಷಿಯಾಯಿತು. ವಾರ್ಡಿನಿಂದ ಆಚೆಗೆ ಬರುತ್ತಿದ್ದಂತೆ ನಮ್ಮ ಫ್ಯಾಮಿಲಿ ಡಾಕ್ಟರ್ (ಫಿಸೀಶಿಯನ್) ಬರುತ್ತಿದ್ದುದನ್ನು ಕಂಡೆವು. ಮಾತನಾಡಿಸುವಷ್ಟರಲ್ಲಿ ಅವರು ಒಂದು ವಾರ್ಡಿನೊಳಗೆ ಹೋದದ್ದು ಕಂಡು ವಾಪಸು ಹೊರಟೆವು. ಅಷ್ಟರಲ್ಲಿ ಅವರು ಆಚೆಗೆ ಬಂದು ನಮ್ಮನ್ನು ಮಾತನಾಡಿಸಿದರು. ಏನೂಂತೀರಾ? 'ಅಂತೂ ಪರಂಗಿ ಎಲೆ ರಸ ಕುಡಿಸಿ, ನಿಮ್ ಬೀಗರಿಗೆ ಚಿಕಿತ್ಸೆ ಮಾಡಿ ಅವರನ್ನು ಉಳಿಸಿಬಿಟ್ರಿ,' ಎಂದು ದೇಶಾವರಿ ನಗೆ ಬೀರಿ ತಮಾಷೆ ಮಾಡಿದರು. ನನಗೋ ಭೂಮಿ ಬಾಯಿ ಬಿಡಬಾರದೇ ಎನ್ನುವಷ್ಟು ಸಂಕೋಚವಾಯಿತು. 'ಅದು ಹಾಗಲ್ಲ ಡಾಕ್ಟ್ರೇ, ನನ್ನ ತಾಯಿ ಬಲವಂತಕ್ಕೆ ಹಾಗೆ ಮಾಡ್ದೆ. ಇಲ್ಲದೇ ಹೋಗಿದ್ದರೆ, ಅವರೇ ಕಷಾಯ ಮಾಡಿ, ತಂದು ಕುಡಿಸಿಬಿಡ್ತಿದ್ರೇನೋ?' ಎಂದು ಹೇಳಿದಾಗ ಅವರು 'ಓ ಹಾಗಾ?' ಎಂದು ಹೇಳಿ ಹೊರಟರು. ಯಾಕಾದ್ರೂ ಈ ಅಮ್ಮನ ಪುಕ್ಕಟೆ ಸಲಹೆಗೆ ಓಗೊಟ್ಟೆನೋ ಎಂದು ಮನಸ್ಸು ಚಿಕ್ಕದು ಮಾಡಿಕೊಂಡು ಮನೆಗೆ ಬಂದೆ.

ಅಂದಹಾಗೆ, ನಿಮ್ಮ ಪರಿಚಿತರೊಂದಿಗೆ ನಿಮಗೆ ಒದಗಿರುವ ಕಾಯಿಲೆ ಬಗ್ಗೆ ಏನಾದರೂ ಹೇಳಿದಿರೋ, ಅವರಿಂದ ಮನೆ ವೈದ್ಯದ ಪುಕ್ಕಟೆ ಸಲಹೆಗಳು ಪುಂಖಾನುಪುಂಖವಾಗಿ ಹರಿದು ಬರುವುದು ಗ್ಯಾರಂಟಿ. ಅಕಸ್ಮಾತ್ ಹೊಸದಾಗಿ ಮಧುಮೇಹ ಕಾಯಿಲೆ ಬಂತೂನ್ನಿ. ವಿಷಯ ತಿಳಿದರೆ, ಜನರು ಸುಮ್ಮನಿರ್ತಾರೆಯೇ? ಖಂಡಿತಾ ಇಲ್ಲ. ಅಮೃತ ಬಳ್ಳಿ ಕಷಾಯ ಕುಡೀರಿ, ದಿನಾ ಬೆಳಿಗ್ಗೆ ಎದ್ದ ಕೂಡಲೇ ನಾಲ್ಕು ಬೇವಿನ ಎಲೆ ತಿನ್ನಿ, ಅರ್ಧ ಚಮಚ ಮೆಂತ್ಯ ಕಾಳುಗಳನ್ನು ರಾತ್ರಿ ನೀರಿನಲ್ಲಿ ನೆನಸಿ, ಬೆಳಿಗ್ಗೆ ಎದ್ದ ಕೂಡಲೇ ಆ ನೀರು ಕುಡಿದು ಮೆಂತ್ಯ ತಿಂದು ಬಿಡಿ, ಸಕ್ಕರೆ ಕಾಯಿಲೆ ಓಡಿ ಹೋಗತ್ತೆ, ಹಾಗಲಕಾಯಿ ರಸ ತೆಗೆದು ಕುಡೀರಿ, ಸಕ್ಕರೆ ಕಾಯಿಲೆಗೆ ಅದು ರಾಮಬಾಣ, ಅಂತ ಒಂದೇ ಎರಡೇ, ಹತ್ತಾರು ಪುಕ್ಕಟೆ ಸಲಹೆಗಳ ಸರಮಾಲೆ ನಿಮ್ಮ ಮುಂದಿರುತ್ತದೆ. 'ನಿಮಗೆ ವಾಸಿಯಾಯ್ತಾ?' ಎಂದು ನೀವು ಪ್ರಶ್ನೆ ಕೇಳಿದರೆ, ಉತ್ತರ ಸಕಾರವಾಗೇನೂ ಇರುವುದಿಲ್ಲ. ಆದರೂ, ಸಾಕಷ್ಟು ಕಂಟ್ರೋಲ್‌ನಲ್ಲಿದೆ ಎಂದು ಹಾರಿಕೆ ಉತ್ತರವೇ ಖಂಡಿತಾ ಬರುತ್ತದೆ. ಇದೇ ರೀತಿಯ ಸಲಹೆಗಳು ಉತ್ಸಾಹಿತರಿಂದ ಮಂಡಿನೋವಿಗೆ, ಕೂದಲು ಉದುರುವುದಕ್ಕೆ, ನೆಗಡಿಗೆ, ಕೆಮ್ಮಿಗೆ ಎಲ್ಲದಕ್ಕೂ ಪುಕ್ಕಟೆ ಸಲಹೆಗಳು ಗ್ಯಾರಂಟಿ ಸಿದ್ಧವಾಗಿರುತ್ತವೇನ್ನಿ.

ಹಿಂದೊಮ್ಮೆ 'ಡಾಕ್ಟರ್' ಎಂಬ ಮ್ಯಾಗಜೀನ್ ಓದುತ್ತಿದ್ದೆ. ಅದರಲ್ಲಿ ಓದಿದ ಅನೇಕ ಮನೆ ಮದ್ದುಗಳನ್ನು ಬರೆದಿಟ್ಟುಕೊಂಡು, ಪುಕ್ಕಟೆ ಸಲಹೆ ನೀಡುವುದೆಂದರೆ ನನಗಂತೂ ಬಲು ಖುಷಿ. ಕೇಳುವವರು ಸ್ವಲ್ಪ ಉತ್ಸಾಹ ತೋರಿಸಿದರೆನ್ನಿ, ಅವರ ತೊಂದರೆಯ ಬಗ್ಗೆ ನನ್ನಲ್ಲಿರುವ ಮನೆ ಮದ್ದಿನ ಸಲಹೆಗಳನ್ನೆಲ್ಲಾ ಒದರಿಬಿಡುತ್ತೇನೆ.

ಬಾಯಿ ಹುಣ್ಣು ಅಂತ ಯಾರ ಬಾಯಲ್ಲಾದರೂ ಬಂದ್ರೆ ಸಾಕು, ಅದಕ್ಕೆ ರಾಮಬಾಣದಂತಹ ಪರಿಹಾರದ ಪುಕ್ಕಟೆ ಸಲಹೆ ಸಿದ್ಧವಾಗತ್ತೆ. ಅದೇನೂಂತ ಕುತೂಹಲವೇ? ಅಯ್ಯೋ, ಅದಕ್ಕೇನು? ಪುಕ್ಕಟೆ ಸಲಹೆ ನೀಡೇಬಿಡ್ತೀನಿ – ನೋಡಿ, ಸುಮ್ಮನೆ ಬಂಡಲ್ ಬಿಡೋದಲ್ಲ ಕಣ್ರೀ, ನಾನು ಉಪಯೋಗಿಸಿ, ಮನೆಯವರಿಗೆ ಸಹ ಬೇಕಾದಾಗ ಈ ಮದ್ದು ಮಾಡಿದ್ದು ಉಂಟು. ಅದು ಯಶಸ್ವಿಯಾಗಿ, ಬಾಯಿಹುಣ್ಣು ನೋವು ಕಡಿಮೆಯಾಗಿರುವುದು ಖಂಡಿತಾ ಸತ್ಯ – ಅಂದಹಾಗೆ ತೆಂಗಿನಕಾಯಿ ಹೋಳು ಗಳನ್ನು/ತುರಿಯನ್ನು ಸ್ವಲ್ಪ ನೀರು ಸೇರಿಸಿ ಮಿಕ್ಸಿಗೆ ಹಾಕಿ ನುಣ್ಣಗೆ ರುಬ್ಬಿ. ನಂತರ ಅದನ್ನು ಹಿಂಡಿ ಹಾಲು ತೆಗೆಯಿರಿ. ಮತ್ತೊಮ್ಮೆ ಸ್ವಲ್ಪ ನೀರು ಸೇರಿಸಿ ರುಬ್ಬಿ ತೆಂಗಿನ ಹಾಲು ಹಿಂಡಿ, ಶೋಧಿಸಿ. ಒಲೆಯ ಮೇಲಿಟ್ಟು ಕುದಿಸಿ, ಸ್ವಲ್ಪ ಬೆಲ್ಲ ಸೇರಿಸಿ, ಬಿಸಿಯಿರುವಾಗಲೇ ರಾತ್ರಿ ಮಲಗುವ ಮುಂಚೆ ಕುಡಿಯಿರಿ. ಬೆಳಿಗ್ಗೆ ಏಳುವ ವೇಳೆಗೆ ಬಾಯಿಹುಣ್ಣು ನೋವು ಸಾಕಷ್ಟು ಕಡಿಮೆಯಾಗಿರುತ್ತದೆ. ನನ್ನ ಪುಕ್ಕಟೆ ಸಲಹೆಗಳು ಅನ್ನೋ ಬತ್ತಳಿಕೇಲಿ ಇನ್ನೂ ಕೆಲವು ಮನೆ ಮದ್ದುಗಳು ಸಿದ್ಧವಿವೆ.

ಸುಟ್ಟ ಗಾಯವಾದಾಗ ಗೋಧಿಹಿಟ್ಟನ್ನು ಗಾಯದ ಮೇಲೆ ಹಾಕಿ ಹತ್ತು ನಿಮಿಷವಾದರೂ ಅದು ಗಾಯದ ಮೇಲೆ ಇರುವಂತೆ ಮಾಡಿದರೆ, ಬೊಬ್ಬೆ ಬರುವುದಿಲ್ಲ, ಸುಟ್ಟ ಗಾಯದ ಕೆಂಪು ಸಹ ಕಡಿಮೆಯಾಗಿ, ಉರಿ ನೋವು ಕಡಿಮೆಯಾಗಿ ಸುಟ್ಟ ಗಾಯ ಬೇಗ ವಾಸಿಯಾಗುತ್ತದೆ. ಸುಟ್ಟ ಗಾಯ ತೀವ್ರವಾಗಿಲ್ಲದಿದ್ದರೆ ಸ್ವಲ್ಪ ಹೊತ್ತಿನ ನಂತರ ಗಾಯದ ಸುಳಿವೂ ಇರುವುದಿಲ್ಲ' ಎಂದು ವಾಟ್ಸಾಪ್‌ನಲ್ಲಿ ಪುಕ್ಕಟೆ ಸಲಹೆ ನೀಡಿದ್ದು, ಖಂಡಿತಾ ಅತ್ಯುಪಯುಕ್ತ ಸಲಹೆಯಾಗಿದೆ. ಈ ಸಲಹೆಯನ್ನು ನಾನು ಗಂಭೀರವಾಗಿ ಪರಿಗಣಿಸಿ, ಪರೀಕ್ಷಿಸಿ ಸಫಲಳಾಗಿದ್ದೇನೆ ಎಂದು ರಾಜಾರೋಷಾಗಿ ಹೇಳಬಲ್ಲೆ.

**

ಒಂದು ದಿನ ನಮ್ಮ ಮನೆಗೆ ಬಂಧುವೊಬ್ಬರ ಆಗಮನವಾಯಿತು. ಹೀಗೇ ಮನೆಯವರೆಲ್ಲ ಅವರೊಂದಿಗೆ ಹರಟಿದೆವು. ಆಕೆಗೆ ಮಾತಿನ ಮಧ್ಯೆ ಕೆಮ್ಮು ಆರಂಭವಾಗಿ ಮಾತನಾಡಲು ತೊಂದರೆಯಾಗುತ್ತಿತ್ತು. ಕೂಡಲೇ ನನ್ನ ಪುಕ್ಕಟೆ ಸಲಹೆ ನೀಡುವ ಬುದ್ಧಿ ಜಾಗೃತವಾಗಿ, ಅವರಿಗೆ ಕೆಮ್ಮು ನಿವಾರಿಸಬಲ್ಲ ಮನೆ ಮದ್ದನ್ನು, ಅಲ್ಲ ಮನೆ ಮದ್ದುಗಳ ಪಟ್ಟಿ ನೀಡಿದೆ. ಅವರು ಸುಮ್ಮನಿರದೆ, 'ನಾನು ಹಾಗೆಲ್ಲ ಮನೆ ಮದ್ದು ತೊಗೋಳಲ್ಲ. ಡಾಕ್ಟರ್ ಹೇಳಿದ ಔಷಧಿ ಮಾತ್ರ ತೊಗೋತೀನಿ,' ಎಂದು ಹೇಳಿದಾಗ ನನ್ನ ಮುಖ ಇಂಗು ತಿಂದ ಮಂಗನಾಗಿತ್ತು. ಅವರು ಹೊರಟುಹೋದ ಮೇಲೆ 'ಅಮ್ಮ, ಇನ್ನಾದರೂ ಸುಮ್ಮನೆ ಎಲ್ಲರಿಗೂ ಪುಕ್ಕಟೆ ಸಲಹೆ ನೀಡೋ ಅಭ್ಯಾಸ ಬಿಡು' ಎಂದು ನನ್ನ ಮಗ ವಿಕ್ರಮ ನನಗೆ ಪುಕ್ಕಟೆ ಸಲಹೆಯ ಬಾಣ ಬಿಟ್ಟ!

***

ಪ್ರವಾಸ ಕಥನ

# ಶ್ರೀ ಬೃಹದೀಶ್ವರ ದೇವಸ್ಥಾನ, ತಂಜಾವೂರು

– ರವಿ ಕುಸಬಿ



ನಮ್ಮ ಬಸ್ಸು ತಂಜಾವೂರನ್ನು ತಲುಪಿದಾಗ ಸಂಜೆ 5:50 ಆಗಿತ್ತು. ಬಿಸಿಲ ಧಗೆ ಇದ್ದರೂ ಕೂಡ ಸೂರ್ಯನು ಆಗಲೇ ತನ್ನ ಕರ್ತವ್ಯ ಮುಗಿಸಿ ಮೆಲ್ಲಗೆ ದೇವಾಲಯದ ಹಿಂದುಗಡೆಗೆ ಜಾರಿ ಕೊಳ್ಳುತ್ತಿದ್ದ. ಆರು ಗಂಟೆ ವೇಳೆಗೆ ನಮ್ಮ ಬಸ್ಸಿನ ಎಲ್ಲ ಪ್ರಯಾಣಿಕರು ಬೃಹದೇಶ್ವರ ದೇವಸ್ಥಾನದ ಮುಂದೆ ನಿಂತಿದ್ದೆವು.

ತಂಜಾವೂರಿನ ಬೃಹದೇಶ್ವರ ದೇವಾಲಯ ಅತ್ಯಂತ ದೊಡ್ಡದಾದ ಹಾಗೂ ಅನೇಕ ವಿಸ್ಮಯಕಾರಿ ಅಂಶಗಳನ್ನು ಒಳಗೊಂಡ ದೇವಸ್ಥಾನ. ಇಂತಹ ಒಂದು ದೇವಸ್ಥಾನ ನಮ್ಮ ದೇಶದಲ್ಲಿ ಇರುವುದೇ ನಮ್ಮ ಸಾಂಸ್ಕೃತಿಕ ಹೆಮ್ಮೆಯ ಒಂದು ಭಾಗ. ಏಕೆಂದರೆ 11ನೇ ಶತಮಾನದಲ್ಲಿ ಇಂಥ ಒಂದು ಅದ್ಭುತವಾದ ಕಲಾಕೃತಿಯನ್ನು ನಿರ್ಮಿಸಿ ಜಗತ್ತಿಗೆ ಸಮರ್ಪಿಸಿದ ಅಂದಿನ ಚೋಳ ರಾಜರ ಬಗ್ಗೆ, ಇದನ್ನು ಕಟ್ಟಿದ ಶಿಲ್ಪಿಗಳ ಬಗ್ಗೆ ನಿಮ್ಮ ಮನದಲ್ಲಿ ಪೂಜ್ಯ ಭಾವನೆ ಮೂಡದೆ ಇರಲಾರದು. ಈ ದೇವಸ್ಥಾನದಲ್ಲಿ ಹಲವಾರು ವಿಸ್ಮಯಕಾರಿ ಸಂಗತಿಗಳು ಮೂಡಿಬಂದಿವೆ. ಅದಕ್ಕೆಂದೇ ಇದನ್ನು ಯುನೆಸ್ಕೋ ಹೆರಿಟೇಜ್ ಕೇಂದ್ರವನ್ನಾಗಿ ಮಾಡಿದ್ದಾರೆ. ಈ ದೇವಸ್ಥಾನವನ್ನು ನೋಡುವುದೇ ಒಂದು ಭಾಗ್ಯ. ಸಂತಸಕ್ಕೆ ಪಾರವಿಲ್ಲದ ಪರಮಭಾಗ್ಯ. ಆದರೆ ಅದನ್ನು ಅರಿಯುವ ಮನಸ್ಸಿರಬೇಕು ಅಷ್ಟೇ. ಹತ್ತರಲ್ಲಿ ಹನ್ನೊಂದರ ದೇವಸ್ಥಾನದಂತೆ ಕೈಮುಗಿದು ಹೊರ ಬಂದರೆ ನೀವು ಹಲವಾರು ಶಾಸ್ತ್ರೀಯ (ಇಂಜಿನಿಯರಿಂಗ್) ವಿಷಯಗಳ ಶಾಸ್ತ್ರೋಕ್ತ ಮಹಾ ಸಂಕೀರ್ಣವನ್ನು ಕಡೆಗಾಣಿಸಿದಂತೆ.

ಕ್ರಿ.ಶ. 1003ರಿಂದ ಕ್ರಿ.ಶ. 1010ರಲ್ಲಿ ಈ ದೇವಾಲಯ ಅಂದಿನ ಚೋಳ ರಾಜನಾದ ರಾಜ ರಾಜ ಚೋಳ–1 ರಿಂದ ಕಟ್ಟಲ್ಪಟ್ಟಿತು. ಇದನ್ನು ಕಟ್ಟಿದ ಶಿಲ್ಪಿ ಕುಂಜರ ಮಲ್ಲನ್ ರಾಜಾರಾಮ್. ಈ ದೇವಾಲಯವನ್ನು ಅದ್ದೂರಿಯಾಗಿ ಕಟ್ಟಬೇಕೆಂದು ರಾಜನ ಆಸೆಯಾಗಿತ್ತು. ಅದ್ದೂರಿಯ ಜೊತೆ ಅದ್ಭುತವನ್ನೂ ಸೇರಿಸಿ ದೇವಾಲಯ ಕಟ್ಟಿದ ಶಿಲ್ಪಿ ಕುಂಜರ ಮಲ್ಲ ರಾಜಾರಾಮ. ಇದು ಶಿವನಿಗೆ ಅರ್ಪಿತವಾದ ದೇವಾಲಯ. ಗರ್ಭಗುಡಿಯಲ್ಲಿ ಇರುವ ಏಕಶಿಲಾ ಶಿವಲಿಂಗ ಮೂರ್ತಿ ತೂಕ 20 ಟನ್. ಲಿಂಗದ ಎತ್ತರ 29 ಅಡಿ. (ಇದನ್ನ ನೋಡುವುದೇ ಒಂದು ಆನಂದದ ಸಂಗತಿ) ಭಾರತದಲ್ಲಿರುವ ಅತ್ಯಂತ ದೊಡ್ಡ ಶಿವಲಿಂಗ ಇದು. ಈ ದೇವಸ್ಥಾನದ ಗೋಪುರವನ್ನು ಕೂಡಾ ಅದ್ದೂರಿಯಾಗಿ ಕಟ್ಟಲಾಗಿದೆ. ಇದರ ತೂಕ 80 ಟನ್ನುಗಳು. ಬೃಹದೀಶ್ವರ ದೇವಾಲಯದ ಎಲ್ಲ ಪ್ರತಿಕೃತಿಗಳು ಬೃಹದಾಕಾರದಲ್ಲೇ ಇವೆ. ಇಲ್ಲಿ ಕೆತ್ತಿರುವ ನಂದಿ– ನೆನಪಿರಲಿ ಅದೂ ಏಕಶಿಲಾ ವಿಗ್ರಹ (monolithic)– ಕೂಡಾ ಅಂದು ಇಡೀ ಭಾರತದಲ್ಲೇ ಅತ್ಯಂತ ದೊಡ್ಡ ನಂದಿ ವಿಗ್ರಹವಾಗಿತ್ತು. ಈಗ ಭಾರತದಲ್ಲಿರುವ ಅತ್ಯಂತ ದೊಡ್ಡದಾದ ಎರಡನೇ ನಂದಿ ವಿಗ್ರಹ ಈ ಬಸವ.

ಒಂದು ಅಂದಾಜಿನ ಪ್ರಕಾರ 1,30,000 ಟನ್ ಕಲ್ಲನ್ನು ಈ ದೇವಾಲಯದಲ್ಲಿ ಉಪಯೋಗಿಸಲಾಗಿದೆ. ಈ ಗ್ರಾನೈಟ್ ಕಲ್ಲುಗಳನ್ನು ಇಲ್ಲಿಗೆ ಬೇರೆ ಸ್ಥಳಗಳಿಂದ ಸಾಗಿಸಲಾಗಿದೆ. ಅದು ಇಲ್ಲಿಯೇ ದೊರೆತದ್ದಲ್ಲ. ಬಳಸಿದ ಕಲ್ಲಿನ ವಿವರವೇ ಇಷ್ಟಿರುವಾಗ ಬಳಸದೆ ಉಳಿದ ಹಾಗೂ ವಿಗ್ರಹಗಳ ಕೆತ್ತುವಾಗ ಹಾಳಾದ ಕಲ್ಲುಗಳ ಗಾತ್ರ ಎಷ್ಟಿರಬಹುದು? ನೀವೇ ಯೋಚಿಸಿ. ಅಂದು ಕಲೆಗೆ ರಾಜಾಶ್ರಯವಿದ್ದುದರಿಂದಲೇ ಇಂತಹ ಅಗಾಧ ಪ್ರಮಾಣದ ಅದ್ಭುತ ಕಲಾಕೃತಿಯೊಂದು ಮೂಡಲು ಸಾಧ್ಯವಾಯಿತು.

ಈ ಗುಡಿ ಕಟ್ಟಿದ ಬಗ್ಗೆ ಒಂದು ಕುತೂಹಲಕಾರಿ ಕಥೆಯೊಂದಿದೆ. ಅದನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಗುಡಿಯು ಪೂರ್ಣವಾದ ನಂತರ ಅದನ್ನು ನೋಡಲು ರಾಜರಾಜ ಚೋಳನು ಬಂದ. ಬಂದಾಗ ಇದರ ಅಗಾಧ ಪ್ರಮಾಣವನ್ನು, ಎತ್ತರವಾದ ಗೋಪುರವನ್ನು ನೋಡಿ ಸ್ವಲ್ಪ ಭಯಗೊಂಡ ರಾಜ, ಅದರ ನಿರ್ಮಾತೃವಾದ ಕುಂಜರ ಮಲ್ಲನ್ ರಾಜಾರಾಮನನ್ನು ಕೇಳುತ್ತಾನೆ. "ಶಿಲ್ಪಿಗಳೆ, ಎಲ್ಲವೂ ಸ್ಥಿರವಾಗಿ ಇದೆ ತಾನೆ? ದೇವಸ್ಥಾನಕ್ಕೆ ಬರುವ ಭಕ್ತರಿಗೆ ಏನು ಅಪಾಯವಿಲ್ಲವಲ್ಲ?" ಎಂದು ಅದಕ್ಕೆ ವಿನಮ್ರನಾಗಿ ಕೈಮುಗಿದು ಶಿಲ್ಪಿ ಕುಂಜರ ಮಲ್ಲನ್ ರಾಜಾರಾಮ್ ಹೇಳುತ್ತಾನೆ, "ಚಿಂತೆ ಬೇಡ ಮಹಾಪ್ರಭು, ಈ ದೇವಸ್ಥಾನದ ನೆರಳು ಕೂಡ ಕೆಳಗೆ ಬೀಳುವುದಿಲ್ಲ." ಎಂದು

ಈ ಮಾತನ್ನು ಅವನು ರಾಜನನ್ನು ಮೆಚ್ಚಿಸಲು ಹೇಳಿದ್ದಲ್ಲ. ಇದು ಸತ್ಯ ಕೂಡ. ತಂಜಾವೂರಿನ ಈ ಬೃಹದೇಶ್ವರ ದೇವಸ್ಥಾನದ ನೆರಳು ಭೂಮಿಗೆ ಬೀಳುವುದಿಲ್ಲ. ಅದು ಹೇಗೆ ಎಂದು ನೀವು ಯೋಚಿಸುವಿರಾ? ಈ ಇಡೀ ದೇವಸ್ಥಾನವನ್ನು ಯಾವ ರೀತಿ ಕಟ್ಟಿದ್ದಾರೆ ಎಂದರೆ, ಗರ್ಭಗುಡಿಯ ಮೇಲೆ ಬಂದಿರುವ 216 ಅಡಿ (64.8ಮೀ) ಗೋಪುರ, ಅದರ ಮುಂದೆ ಹಿಂದೆ ವಿಸ್ತರಿಸಿರುವ ದೇವಸ್ಥಾನ ಇವುಗಳ ಅಳತೆ ಅಗಲ ಉದ್ದಗಳನ್ನು ಒಂದು ನಿರ್ಧಾರಿತ ಮಾಪನದಲ್ಲಿ ಕಟ್ಟಿದ್ದಾರೆ. ಹೀಗಾಗಿ ಸೂರ್ಯನು ಯಾವ ದಿಕ್ಕಿನಲ್ಲಿ ಯಾವುದೇ ಕೋನದಲ್ಲಿ ಇದ್ದರೂ (ಉತ್ತರಾಯಣವಿರಲಿ, ದಕ್ಷಿಣಾಯಣವಿರಲಿ) ದೇವಸ್ಥಾನದ ಗೋಪುರದ ಅಥವಾ ದೇವಸ್ಥಾನದ ನೆರಳು ನೆಲಕ್ಕೆ ಬೀಳುವುದಿಲ್ಲ. ಹಾಗೆ ದೇವಸ್ಥಾನ ಕಟ್ಟಿದ್ದಾರೆ. ಅಂದರೆ ಇದು ಬರೀ ಆಕಸ್ಮಿಕವಲ್ಲ. ದೇವಸ್ಥಾನ ಕಟ್ಟುವಾಗ ದೇವಸ್ಥಾನದ ಶಿಲ್ಪಿಗಳ ಜೊತೆಗೆ ಖಗೋಲ ಶಾಸ್ತ್ರಜ್ಞರೂ ಕೂತು, ಇದನ್ನು ಮೊದಲೇ ಯೋಚಿಸಿ, ಯೋಜಿಸಿ, ನಂತರ ದೇವಸ್ಥಾನವನ್ನು ಕಟ್ಟಿದ್ದಾರೆ. ಹೀಗಾಗಿಯೇ ಬೃಹದೇಶ್ವರ ದೇವಸ್ಥಾನದ ನೆರಳು ಕೂಡ ಭೂಮಿಯನ್ನು ತಲುಪುವುದಿಲ್ಲ.


ಈ ದೇಗುಲದ ಇನ್ನೊಂದು ಕುತೂಹಲಕಾರಿ ಅಂಶ ಎಂದರೆ ಈ ದೇವಸ್ಥಾನ ಕಟ್ಟುವಾಗ ಯಾವುದೇ ರೀತಿಯ ಗಾರೆ (ಅಂದರೆ ಅಂದಿನ ಕಾಂಕ್ರೀಟ್) ಅಥವಾ ಬೇರೆ ಯಾವುದೇ ರೀತಿಯ ಅಂಟು ಪದಾರ್ಥಗಳನ್ನು ಬಳಸಿಲ್ಲ. ಈ



ದೇವಸ್ಥಾನವನ್ನು ಕಟ್ಟಿರುವುದು ಕಲ್ಲುಕಲ್ಲುಗಳ ಮಧ್ಯದ ಇಂಟರ್ ಲಾಕ್ ಪದ್ದತಿಯಿಂದ. ಅಂದರೇ ಇಡೀ ದೇವಾಲಯದ ಪ್ರತಿಯೊಂದು ಕಲ್ಲನ್ನೂ ಮೊದಲೇ ಬರೆದು, ಅದನ್ನ ನೂರಕ್ಕೆ ನೂರು ಸರಿ ಹೊಂದುವ ಪ್ರತಿಕೃತಿ ಮಾಡಿ ನಂತರ ನಿಜವಾದ ಕಲ್ಲಿನ ಆಕೃತಿ ಮಾಡಿ ಅನಂತರ ಅವುಗಳನ್ನು ದೇವಾಲಯವಾಗಿ ಹೊಂದಿಸಿದ್ದಾರೆ. ಅಂಥ ನೈಪುಣ್ಯತೆ ಅಂದಿನ ಚೋಳ ರಾಜ್ಯದಲ್ಲಿ ಇತ್ತು ಎಂಬುದೇ ಭಾರತೀಯರ ಹೆಮ್ಮೆ ಅಲ್ಲವೆ?

ದೇವಾಲಯದ ಗೋಪುರದ ಎತ್ತರ 216 (12*18) ಅಡಿ. ಒಂದು ಯವ್ವನಭರಿತ ಆನೆಯ ಎತ್ತರ 12 ಅಡಿ. ಅಂತಹ 18 ಆನೆಗಳ ಎತ್ತರಕ್ಕೆ ಈ ಗೋಪುರವಿದೆ. ಅಲ್ಲಿರುವ ನಂದಿಯ ಮೂರ್ತಿಯೂ ಬೃಹದಾಕಾರದ್ದೇ. ಅದರ ಉದ್ದ 16 ಅಡಿ, ಎತ್ತರ 13 ಅಡಿ. ಇಂದೂ ಕೂಡಾ ಅದು ನಮ್ಮ ದೇಶದಲ್ಲಿ ಎರಡನೇ ಎತ್ತರದ ನಂದಿ. ಅದೂ ಒಂದೇ ಕಲ್ಲಿನಲ್ಲಿ ಕೆತ್ತಿದ ಶಿಲ್ಪ. ಒಳಗೆ ಪೂಜಿಸಲ್ಪಡುವ ಶಿವಲಿಂಗದ ಎತ್ತರವೂ ಅಸಾಧಾರಣವಾದದ್ದು. ಅದರ ಉದ್ದ 29 ಅಡಿ (8.7ಮೀ). ಅದು ಎರಡು ಮಹಡಿ ಎತ್ತರವಿದ್ದು ಅಭಿಷೇಕ ಮಾಡುವಾಗ ಪೂಜಾರಿಗಳು ಮೇಲೆಯೇ ಹೋಗಿ ಅಭಿಷೇಕ ಮಾಡುತ್ತಾರೆ. ಇದು ನಮ್ಮ ದೇಶದಲ್ಲೇ ಅತ್ಯಂತ ದೊಡ್ಡದಾದ ಶಿವಲಿಂಗ ಮೂರ್ತಿ.

ಈ ದೇವಸ್ಥಾನದ ಗೋಪುರದ ಮೇಲೆ ಒಂದು 80 ಟನ್ ಕಲ್ಲಿನ ಶಿಖರವನ್ನು ನಿಲ್ಲಿಸಲಾಗಿದೆ. ಈ ಶಿಖರವನ್ನು ಅಲ್ಲಿಗೆ ಹೊತ್ತೊಯ್ಯಲು ಹೇಗೆ ಸಾಧ್ಯ? ಯೋಚಿಸಿ. ಯಾಕೆಂದರೆ ಇನ್ನೂರು ಅಡಿ 80 ಟನ್ ಕಲ್ಲನ್ನು ಎತ್ತುವುದು ಆನೆಗಳಿಗೂ




ಸಾಧ್ಯವಿಲ್ಲ. ಅದಕ್ಕೆ ಆಗಿನ ಶಿಲ್ಪಿಗಳು ಮಾಡಿದ ಉಪಾಯವೆಂದರೆ ಈ ದೇವಸ್ಥಾನದ ಗೋಪುರ ಕಟ್ಟುವಾಗಲೆಲ್ಲ ಒಂದೊಂದು ಹಂತದ ಸ್ಲೋಪುಗಳು– ಅಂದರೆ ಜಾರು ಬಂಡೆಗಳ ರೀತಿಯ ತಾತ್ಕಾಲಿಕ ಕಟ್ಟಡವನ್ನು– ಮಾಡಿ ಅದರ ಮೇಲೆ ಕಲ್ಲುಗಳನ್ನು ಉರುಳಿಸುತ್ತ ಅಥವಾ ಆನೆಗಳಿಂದ ಎಳೆದು ತಂದು ಈ ಗೋಪುರವನ್ನು ಕಟ್ಟಿದ್ದಾರೆ. ಅದೇ ರೀತಿ ಕೊನೆಯ 80 ಟನ್ ಭಾರದ ಗೋಪುರದ ಕಲ್ಲನ್ನ ಸರಿಸುಮಾರು ಏಳು ಕಿಲೋಮೀಟರ್ ದೂರದವರೆಗೆ ಈ ಇಳಿಜಾರು ಬಂಡಿ ಅಂದರೆ ಸ್ಲೋಪನ್ನು ಮಾಡಿ ಅದರ ಮೇಲೆ ತಂದರು ಎಂದು ಕೆಲವು ಉಲ್ಲೇಖಗಳು ತಿಳಿಸುತ್ತವೆ. ಅಂದರೆ ಅಂದಿನವರ ತಾಂತ್ರಿಕತೆಯ ಪರಿಣಿತಿಯನ್ನು ಏನೆಂದು ಕರೆಯುತ್ತೀರಿ? ಸರಿ ಸುಮಾರು 5000 ಆನೆಗಳನ್ನ ಈ ದೇವಸ್ಥಾನ ಕಟ್ಟಲು ಬಳಸಲಾಗಿದೆ. ಕಲ್ಲುಗಳನ್ನ ಬೇರೆಡೆಯಿಂದ ತರಲು ಆನೆಗಳೇ ಆಧಾರ. ಯಾಕೆಂದರೆ ಅಂದು ಭಾರಿ ವಸ್ತುಗಳ ಸಾಗಾಣಿಕೆಗೆ ಆನೆಯನ್ನೇ ಬಳಸುತ್ತಿದ್ದರು. ಬೇರೆ ಮಾರ್ಗಗಳಿರಲಿಲ್ಲ. ಸಾವಿರಾರು ಆನೆಗಳು, ಸಾವಿರಾರು ಮಾವುತರು, ಕಲ್ಲಿನಶಿಲ್ಪ ಮಾಡಲು ಶಿಲ್ಪಿಗಳು, ಅವುಗಳ ಮೇಲ್ವಿಚಾರಕರು, ಉನ್ನತ ಜ್ಞಾನ ಹೊಂದಿದ ಶಿಲ್ಪಶಾಸ್ತ್ರಜ್ಞರು, ಚಿತ್ರಕಾರರು, ಖಗೋಲ ಶಾಸ್ತ್ರಜ್ಞರು ಇವರೆಲ್ಲರ ಸಮಾಗಮದಿಂದ ಸತತ 6 ವರ್ಷಗಳ ಕಾಲ ಅವರನ್ನೆಲ್ಲ ಸೂತ್ರ ಬದ್ಧವಾಗಿ ಬಳಸಿ ಈ ಭವ್ಯ, ಸುಂದರ, ಅತಿ ವೈಶಿಷ್ಟ್ಯಪೂರ್ಣ ದೇವಾಲಯ ನಿರ್ಮಿಸಿದ ಶಿಲ್ಪಿ ಕುಂಜರ ಮಲ್ಲನ್ ರಾಜಾರಾಮನನ್ನು ನೀವು ವಂದಿಸದೇ ಇರಲಾರಿರಿ. ಹಾಗೆ ಇದಕ್ಕೆಲ್ಲ ಪ್ರೇರಣೆಯಾಗಿ ನಿಂತ ಒಂದನೇ ರಾಜ ರಾಜ ರಾಜ ಚೋಳನನ್ನು ಕೂಡಾ. 2010ರಲ್ಲಿ ಈ ದೇವಾಲಯ 1000 ವರ್ಷ ಪೂರೈಸಿದೆ. 1000 ವರ್ಷ ತಲೆ ಎತ್ತಿ ನಿಂತಿರುವ ಈ ಭವ್ಯ ಕಟ್ಟಡ ರು ಭೂಕಂಪಗಳನ್ನ ಎದುರಿಸಿದೆ. ಯಾವುದೇ ಹಾನಿಗೆ ಒಳಗಾಗಿಲ್ಲ.

ನಾವು ದೇವಸ್ಥಾನದ ಒಳಗೆ ಹೋದಾಗ ಸಂಜೆಗತ್ತಲು ಕವಿಯುತ್ತಿತ್ತು ವಿಶಾಲವಾದ ದೇವಸ್ಥಾನದ ಹಜಾರದಲ್ಲಿ ಬಹಳ ಜನಗಳು ಗುಂಪು ಗುಂಪುಗಳಲ್ಲಿ ಅಲೆಯುತ್ತಿದ್ದರು. ನಾವು ನೇರವಾಗಿ ಬೃಹದೇಶ್ವರನ ಸನ್ನಿಧಾನಕ್ಕೆ ನಡೆದೆವು. 10 ನಿಮಿಷಗಳನ್ನು ಸರತಿ ಸಾಲಿನಲ್ಲಿ ಕಳೆದ ನಂತರ ದೇವರ ದರ್ಶನವಾಯಿತು. ನಮ್ಮ ಜೊತೆ ಸರತಿ ಸಾಲಿನಲ್ಲಿ ಬಂದಿದ್ದ ಕಾಲೇಜಿನ ಹುಡುಗರ ಗುಂಪೊಂದು "ಹರ ಹರ ಮಹದೇವ್" ಎಂದು ಕೂಗುತ್ತಿದ್ದರು. ದೇವರ ದರ್ಶನ ಮಾಡಿ ಹೊರ ಬಂದಾಗ ಯಾವುದೋ ನಿರಾಳತೆ ಮನಸ್ಸನ್ನ ಮೀಯೀಸಿತ್ತು. ನಾವು ಹೊರಬರುವ ಹೊತ್ತಿಗೆ ದೇವಸ್ಥಾನದ ವಿದ್ಯುತ್ ದೀಪಗಳು ಬೆಳಗಿದ್ದವು. ದೀಪಗಳನ್ನು ದೇವಸ್ಥಾನಕ್ಕೆ ಡಿಸೈನ್ ಮಾಡಿರುವುದರಿಂದ ವಿದ್ಯುತ್ ದೀಪಗಳ ಬೆಳಕಿನಲ್ಲಿ ಮುಖ್ಯ ದೇವಸ್ಥಾನ ಹಾಗೂ ಉಳಿದ ದೇವಸ್ಥಾನಗಳು ಅಂದವಾಗಿ ಕಾಣುತ್ತಿದ್ದವು. ಮುಳುಗುತ್ತಿರುವ ಸೂರ್ಯನ ಬೆಳಕು ಹಾಗೂ ವಿದ್ಯುತ್ ದೀಪಗಳ ಅಲಂಕಾರ ಬೇರೊಂದು ರೀತಿಯ ಪ್ರಭೆಯನ್ನು ದೇವಸ್ಥಾನದ ಸುತ್ತಮುತ್ತ ಹರಡಿದ್ದವು. ನಾವು ದೇವಸ್ಥಾನದ ಸುತ್ತ ಒಂದು ಪ್ರದಕ್ಷಣೆ ಹಾಕಿ ಅಲ್ಲಿ ಹುಲ್ಲುಹಾಸಿನ ಮೇಲೆ ಸ್ವಲ್ಪ ಹೊತ್ತು ಕುಳಿತಿವು. ಅಲ್ಲಿರುವ ವಿಶಾಲವಾದ ಹರವಿನಲ್ಲಿ ಅನೇಕ ಕುಟುಂಬಗಳು ಕುಳಿತು ವಿಶ್ರಾಂತಿಯನ್ನು ಪಡೆಯುತ್ತಿದ್ದವು. ಅವರ ಪುಟ್ಟ ಪುಟ್ಟ ಮಕ್ಕಳು ವಿವಿಧ ರೀತಿಯ ಆಟಗಳನ್ನು ಆಡುತ್ತಿದ್ದರು. ಭಾನುವಾರ ಆಗಿದ್ದರಿಂದ ಜನದಟ್ಟಣೆ ಕೊಂಚ ಹೆಚ್ಚಾಗಿತ್ತು. ದೇವಸ್ಥಾನದ ಸುತ್ತಮುತ್ತ ಇನ್ನೂ ಎರಡು ಮೂರು ದೇವಸ್ಥಾನಗಳಿದ್ದವು. ಅವುಗಳಿಗೆ ದೂರದಿಂದಲೇ ಕೈಮುಗಿದು ನಾವು ನಂದಿಯ ದರ್ಶನಕ್ಕೆ ನಡೆದೆವು.




ನಂದಿಗಾಗಿ ಒಂದು ಬೇರೆಯೇ ಮಂಟಪವನ್ನು ಕಟ್ಟಲಾಗಿದೆ. ಎಡ ಭಾಗದಿಂದ ಏರಿ ನಂದಿಯ ದರ್ಶನ ಪಡೆದು ನಂತರ ಇಳಿದು ಹೋಗಬಹುದು. 13 ಅಡಿ ಎತ್ತರದ ಈ ನಂದಿಯನ್ನು ನೋಡುವುದೇ ಒಂದು ಖುಷಿಯ ವಿಷಯ. ನಂದಿಯನ್ನು ಒಂದೇ ಕಲ್ಲಿನಲ್ಲಿ ಅತ್ಯಂತ ಅಂದವಾಗಿ ಕೆತ್ತಿದ್ದಾರೆ. ಅದರ ಮೇಲೆ ಬಟ್ಟೆ ಹೊದಿಸಿದ್ದರಿಂದ ಮೈ ಮೇಲಿನ ಕೆತ್ತನೆ ಕುಸರಿ ಕಾರ್ಯಗಳು ಸರಿಯಾಗಿ ಕಾಣಲಿಲ್ಲ. ಆದರೆ ನಂದಿಯ ಮುಖ, ಕಿವಿ, ಕಣ್ಣು ಇವೆಲ್ಲವುಗಳನ್ನು ಅತ್ಯಂತ ಪ್ರಮಾಣಾನುಸಾರವಾಗಿ ಕೆತ್ತಿದ್ದಾರೆ. ಕುತ್ತಿಗೆಯ ಸುತ್ತ ಎರಡು ಗೆಜ್ಜೆಯ ಸರಗಳು ಇವೆ. ಇದೆಲ್ಲದರ ಜೊತೆಗೆ ವಿಶೇಷವೇನೆಂದರೆ ನಂದಿ ಬಾಯಿ ತೆಗೆದು ತನ್ನ ನಾಲಿಗೆಯನ್ನು ತುಟಿಯ ಸುತ್ತ ಸುತ್ತಿಸುತ್ತಿದ್ದಾನೆ. ಹಾಗೆ ಮಾಡುವಾಗ ಅವನ ದಂತಪಂಕ್ತಿಗಳು ಕೂಡಾ ಕಾಣುತ್ತಿವೆ. ಈ ಅಂದವಾದ ದಂತಪಂಕ್ತಿಗಳನ್ನ ಅತ್ಯಂತ ನಾಜೂಕಿನಿಂದ ಕೆತ್ತಿದ್ದಾರೆ. ನಂದಿ ಬಾಯಿ ಮುಚ್ಚಿದ್ದರೂ ನಡೆಯುತ್ತಿತ್ತು. ಆದರೆ ಈ ರೀತಿ ಅದು ನಾಲಿಗೆ ತೆಗೆದು ತನ್ನ ಹಲ್ಲುಗಳನ್ನ ಪ್ರದರ್ಶಿಸುವುದು, ಕಲಾವಿದ ತನ್ನ ನೈಪುಣ್ಯತೆಯನ್ನು ತೋರಲು ಮಾಡಿದ ಸಂಜ್ಞೆ ಎನ್ನಿಸುತ್ತದೆ.

ನಾವು ನಂದಿಯ ದರ್ಶನ ಮಾಡಿ ಬಂದಾಗ ಪೂರ್ಣ ಕತ್ತಲಾಗಿತ್ತು. ಆದಾಗ್ಯೂ ದೇವಸ್ಥಾನಕ್ಕೆ ಮಾಡಿದ ವಿದ್ಯುದಲಂಕಾರ ದೇವಸ್ಥಾನದ ಅಂದವನ್ನ ಬೇರೆಯದೇ ಆಯಾಮದಲ್ಲಿ ಶ್ರೀಮಂತಗೊಳಿಸಿತ್ತು. ಅದನ್ನು ನೋಡಿ ಕಣ್ತುಂಬಿಕೊಳ್ಳುತ್ತ ನಾವು ಚಪ್ಪಲಿ ಸ್ಟ್ಯಾಂಡಿನ ಕಡೆಗೆ ನಡೆದೆವು.

ಅಲ್ಲಿಗೆ ನಮ್ಮ 4ನೇ ದಿನದ ಪ್ರವಾಸ ಮುಕ್ತಾಯವಾಯ್ತು.

***

## ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
## ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

# ಸಾಹಿತ್ಯ ದಾಸೋಹ – 236

# ಅಧ್ಯಕ್ಷರ ಅನಿಸಿಕೆಗಳು



**– ಎನ್.ವಿ. ರಘುರಾಂ**

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯಲ್ಲಿ ನಡೆಯುತ್ತಿರುವ ೨೩೬ನೇ ನೋಡಿಯೋ ಸಾಹಿತ್ಯ ದಾಸೋಹದ ಅಧ್ಯಕ್ಷತೆಯನ್ನು ವಹಿಸಿಸಲು ಅವಕಾಶವಿತ್ತ ಸಂಚಾಲಕ ಸಮಿತಿಯವರಿಗೆ ನನ್ನ ವಂದನೆಗಳು. ನನ್ನ ಪರಿಚಯ ಮಾಡಿಕೊಟ್ಟ ಶ್ರೀಮತಿ ರೇಣುಕಾ ದೇಸಾಯಿಯವರಿಗೆ ಧನ್ಯವಾದಗಳು.

ಬಹಳಷ್ಟು ಹೆಸರಾಂತ ಸಾಹಿತಿಗಳು ಇರುವ ಈ ವೇದಿಕೆಯಲ್ಲಿ ನಾನೊಬ್ಬ ಸಾಮಾನ್ಯ ಸಾಹಿತ್ಯಾಸಕ್ತ ಮಾತ್ರ. ಹಾಗಾಗಿ ನಾನು ಹೇಳುವ ಮಾತುಗಳು ಸಾಮಾನ್ಯ ಓದುಗನ ದೃಷ್ಟಿಕೋನ ಹೊಂದಿರುತ್ತದೆ. ಇದನ್ನು ತಾವೆಲ್ಲ ತಿಳಿದವರು ಸೂಕ್ತವಾದ ರೀತಿಯಲ್ಲಿ ತೆಗೆದುಕೊಳ್ಳುತ್ತೀರಿ ಎಂಬ ನಂಬಿಕೆ ನನಗೆ ಇದೆ. ಈ ವೇದಿಕೆಯಲ್ಲಿ ಆಸಕ್ತರಿಗೆ ಕಲಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ. ಈ ಅವಕಾಶವನ್ನು ಕೂಡ ನಾನು ಕಲಿಕೆಯ ಒಂದು ಭಾಗವಾಗಿವೇ ತೆಗೆದುಕೊಂಡಿರುತ್ತೇನೆ.

ಈ ದಿನ ಪ್ರಸ್ತುತಿಪಡಿಸಿದ ಬರಹಗಳ ಬಗ್ಗೆ ನನ್ನ ಸಂಕ್ಷಿಪ್ತ ಅನಿಕೆಗಳನ್ನು ಈಗ ನೋಡೋಣ.

### ೧. 'ಗುಂಡನ ಗರ್ವಭಂಗ' – ಲೇಖಕರು: ಶ್ರೀ ಕೆ.ಆರ್.ವೆಂಕಟೇಶ್

ಶ್ರೀಯುತ ವೆಂಕಟೇಶ್ ವಿರಚಿತ 'ಗುಂಡನ ಗರ್ವಭಂಗ' ಪ್ರಹಸನ ಅನೇಕ ಆಯಾಮಗಳನ್ನು ಮುಟ್ಟಲು ಪ್ರಯತ್ನಪಟ್ಟಿದೆ. ಆಧುನಿಕ ತಂತ್ರಜ್ಞಾನ ಮತ್ತು ಗ್ರಾಮೀಣ ಪ್ರದೇಶದಲ್ಲಿ ಆ ಬಗ್ಗೆ ಇರುವ ಅಜ್ಞಾನ, ಮನುಷ್ಯನ ಒಳಗಿರುವ ಗರ್ವ ಮತ್ತು ಅದಕ್ಕೆ ಆಗುವ ಮುಖಭಂಗ, ಕನಸು ಮತ್ತು ವಾಸ್ತವಕ್ಕೆ ಇರುವ ವ್ಯತ್ಯಾಸವನ್ನು ಲೇಖನ ಹಾಸ್ಯದ ಪ್ರಸಂಗದ ಮೂಲಕ ಅನಾವರಣ ಮಾಡಿದೆ. ಮೇಲುನೋಟಕ್ಕೆ ಒಂದು ಹಾಸ್ಯದ ಪ್ರಹಸನದಂತೆ ಕಂಡರೂ ಗರ್ವವಿಲ್ಲದೆ ಬದುಕಬೇಕು ಎನ್ನುವ ಪಾಠವನ್ನು ಗುಂಡನ ಕಥೆಯ ಮೂಲಕ ಲೇಖಕರು ಕಟ್ಟಿ ಕೊಟ್ಟಿದ್ದಾರೆ.

ಈ ಲೇಖನ ತಮಾಷೆಯ ಪ್ಯಾಕಿಂಗ್‌ನಲ್ಲಿ ಪ್ಯಾಕ್ ಮಾಡಿದ ಬದುಕಿನ ಬಗ್ಗೆ ಬುದ್ಧಿವಾದವನ್ನು ಹೇಳುವ ಕಥನ. ವಿಜ್ಞಾನದ ವಿದ್ಯಾರ್ಥಿಯಾಗಿ ನೋಡಿದರೆ ಕಥೆಯ ಸೂತ್ರ ಹೀಗಿದೆ:
ಗುಂಡನ ಕನಸು + ಟೆಸ್ಲಾ ಕಾರ್ + ಹಳ್ಳಿ ಫೀಲ್ = ಪಕ್ಕಾ ಕಾಮೆಡಿಯ ದರ್ಬಾರ್.
ಬೇವಿನ ಸೊಪ್ಪಿನ ಕಂತೆ+ಮಂತ್ರ= ಕಾರಿನ ಗೋಸ್ಟ್ ಬಸ್ಟರ್. ಅಂದರೆ ಗರ್ವಭಂಗ.

ಉತ್ತಮ ಕನಸಿನ ಕಥೆ ಕೊಟ್ಟಿರುವುದಕ್ಕೆ ಅಭಿನಂದನೆಗಳು.

### ೨. 'ವಕ್ರದಂತ ಮಂದಸ್ಮಿತ' – ಲೇಖಕಿ: ಶ್ರೀಮತಿ ಸ್ನೇಹ ಶಶಿಧರ್

ಶ್ರೀಮತಿ ಸ್ನೇಹ ಶಶಿಧರರವರ ಪ್ರಸ್ತುತಿ 'ವಕ್ರದಂತ ಮಂದಸ್ಮಿತ' ಬರಹ ಓದಿದ ತಕ್ಷಣ ಕಾಣುವುದು ಅವರಿಗೆ ಬರವಣಿಗೆಯಲ್ಲಿ ಇರುವ ಉತ್ಸಾಹ. ಆ ಉತ್ಸಾಹ ಬರಹದ ಉದ್ದಕ್ಕೂ ಎದ್ದು ಕಾಣುತ್ತದೆ. ಹಲ್ಲು ನೋವಿನ ವಿಷಯವನ್ನು ಲಘುಬರಹದ

ಮೂಲಕ ಹೇಳುವ ಪ್ರಯತ್ನ ಮಾಡಿರುವುದು ಶ್ಲಾಘನೀಯ. ಕೊನೆಯಲ್ಲಿ ವಕ್ರಪಂಕ್ತಿ ಸರಿಯಾಗಿದ್ದು ಸಂತೋಷದ ಅಂಶ. ತಮ್ಮ ಉತ್ಸಾಹ ಸದಾ ಇರಲಿ ಎಂದು ಆಶಿಸುತ್ತೇನೆ. ಅಭಿನಂದನೆಗಳು.

### ೩. 'ಅವರವರ ಭಾವಕ್ಕೆ' – ಲೇಖಕಿ: ಸಿಂಧು ಹರಿಥಸ್

ಈ ಕಥೆಯನ್ನು "ನಿಗೂಢ" ಕಥೆ ಶೈಲಿಯಲ್ಲಿ ಓದುಗರಲ್ಲಿ ಕುತೂಹಲ ಹುಟ್ಟಿಸುವಂತೆ ಕಟ್ಟಿಕೊಡಲಾಗಿದೆ. ಆದರೆ ಇದೊಂದು ಸಾಮಾನ್ಯ ನಿಗೂಢ ಕಥೆಯಲ್ಲ. ಇದೊಂದು 'ಮನಃಶಾಸ್ತ್ರೀಯ ನಿಗೂಢ ಕಥೆ'. ಓದುಗರನ್ನು ಕಥೆಯಲ್ಲಿ ತಲ್ಲೀನಗೊಳಿಸಿ, ತಾವೂ ಕಥೆಯ ಭಾಗವೆಂಬ ಭಾವನೆ ಮೂಡಿಸುತ್ತೆ.

ಕಥೆಯು ವಾಸ್ತವಿಕತೆ ಮತ್ತು ಕಲ್ಪನೆಯ ನಡುವಿನ ಗೆರೆಯನ್ನು ಅಸ್ಪಷ್ಟಗೊಳಿಸುತ್ತದೆ. ಪುಸ್ತಕದ ಕಥೆಗಳು ನಿಜ ಜೀವನದಲ್ಲಿ ನಡೆಯುವುದರಿಂದ ಪಾತ್ರಗಳು ಗೊಂದಲಕ್ಕೆ ಒಳಗಾಗುತ್ತವೆ. ಪುಸ್ತಕವು ಪಾತ್ರಗಳ ಮೇಲೆ ಮಾನಸಿಕ ಪ್ರಭಾವ ಬೀರುತ್ತದೆ. ಅವರು ತಮ್ಮ ಜೀವನವನ್ನು ನಿಯಂತ್ರಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಪುಸ್ತಕದ ರಹಸ್ಯಮಯ ಸ್ವರೂಪ ಮತ್ತು ಅದು ಅನಿರೀಕ್ಷಿತವಾಗಿ ಮುಗಿಯುವುದು ಓದುಗರನ್ನು ಆಕರ್ಷಿಸುತ್ತದೆ.

"ಅವರವರ ಭಾವಕ್ಕೆ" ಎಂಬ ಶೀರ್ಷಿಕೆ, ಈ ಕಥೆಗೆ ಅತ್ಯಂತ ಸೂಕ್ತವಾಗಿದೆ. ಉತ್ತಮ ಕಥೆ ಕಟ್ಟಿಕೊಟ್ಟಿರುವ ಶ್ರೀಮತಿ ಸಿಂಧು ಹರಿಥಸ್ ರವರಿಗೆ ಅಭಿನಂದನೆಗಳು.

## ಎನ್.ವಿ. ರಘುರಾಂ

**1958ರಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಅವಿಭಕ್ತ ಕುಟುಂಬವೊಂದರಲ್ಲಿ ಜನನ. ಪಿಯುಸಿವರೆಗೆ ತೀರ್ಥಹಳ್ಳಿಯಲ್ಲಿ ವಿದ್ಯಾಭ್ಯಾಸ. 1980ರಲ್ಲಿ ಸುರತ್ಕಲ್‌ನ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಲೆಕ್ಟ್ರಿಕಲ್ ವಿಭಾಗದಲ್ಲಿ ಪದವಿ ಗಳಿಕೆ.**

**1981ರಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ಉದ್ಯೋಗ ದೊರಕಿ ವೃತ್ತಿಜೀವನ ಪ್ರಾರಂಭ. ಜೋಗದ ಶರಾವತಿ ಜಲ ವಿದ್ಯುದಾಗರದಲ್ಲಿ ಐದು ವರ್ಷ, ರಾಯಚೂರಿನ ಉಷ್ಣ ವಿದ್ಯುದಾಗಾರದಲ್ಲಿ ನಾಲ್ಕು ವರ್ಷ, ಬೆಂಗಳೂರಿನಲ್ಲಿರುವ ಜಲ ವಿದ್ಯುದಾಗಾರಗಳ ವಿನ್ಯಾಸ ಕಛೇರಿಯಲ್ಲಿ ಸುಮಾರು 25 ವರ್ಷ ಕಾರ್ಯನಿರ್ವಹಣೆ. 36 ವರ್ಷಗಳ ಸೇವೆಯ ನಂತರ ಅಧೀಕ್ಷಕ ಅಭಿಯಂತರ ಹುದ್ದೆಯಿಂದ 2018ರಲ್ಲಿ ನಿವೃತ್ತಿ.**

**ಸೇವಾನಿವೃತ್ತಿಯ ನಂತರ ಸಮಾಜ ಸೇವೆಯತ್ತ ಆಸಕ್ತಿ. ಕಾಲೇಜಿನ ಹಳೇ ವಿದ್ಯಾರ್ಥಿಮಿತ್ರರೆಲ್ಲ ಸೇರಿ ಸ್ಥಾಪಿಸಿದ ಸ್ನೇಹ ಟ್ರಸ್ಟಿನ ಸ್ವಯಂಸೇವಕರಾಗಿ ಅಶಕ್ತ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕನ್ನಡ ಪಾಠ ಮಾಡುವಿಕೆ, ಯೂತ್ ಫಾರ್ ಸೇವಾ ಸಂಸ್ಥೆಯ ಸ್ವಯಂಸೇವಕರಾಗಿ ಎನ್.ಎಂ.ಎಂ.ಎಸ್. ಪರೀಕ್ಷೆಗೆ ಸರ್ಕಾರಿ ಶಾಲಾ ಮಕ್ಕಳಿಗೆ ಬೋಧನೆ ಮತ್ತು ಸಮರ್ಥನಂ ಟ್ರಸ್ಟಿನ ಸ್ವಯಂಸೇವಕರಾಗಿಯೂ ಕಾರ್ಯನಿರ್ವಹಣೆ.**

**ಇವರಿಗೆ ಬಾಲ್ಯದಿಂದಲೇ ಸಾಹಿತ್ಯದಲ್ಲಿ ಅಪಾರ ಆಸಕ್ತಿ. ನಿವೃತ್ತಿಯ ನಂತರ 'ಸಾಹಿತ್ಯ ಜಗಲಿ' ಎನ್ನುವ ವ್ಯಾಟ್ಸಾಪ್ ಸಮೂಹ ಸೇರಿ ಅದರಲ್ಲಿ ಪ್ರಕಟವಾದ ಒಂದೆರಡು ಸಣ್ಣ ಲೇಖನಗಳು ಇವರ ಸಾಹಿತ್ಯ ರಚನೆಗೆ ಬುನಾದಿ. 'ಆಕೃತಿ ಕನ್ನಡ' ಸಾಮಾಜಿಕ ಜಾಲತಾಣ ಹಾಗೂ ನಮ್ಮ 'ಸಮನ್ವಯ ಸಮಿತಿ ಕನ್ನಡವೇ ಸತ್ಯ' ವೇದಿಕೆಯಲ್ಲಿ ಇವರು ಸದಾ ಸಕ್ರಿಯ. ಇವರು ಬರೆದ ಅನುಭವ ಕಥನ, ಬಾಲ್ಯ ಜೀವನ, ನಗೆಬರಹ, ಲಲಿತ ಪ್ರಬಂಧ, ಪುಸ್ತಕ ಪರಿಚಯ ಇತ್ಯಾದಿ ಹಾಗೂ ವೇದಿಕೆಯ ಇತರ ಸದಸ್ಯರು ಬರೆದ ಲೇಖನಗಳು, ಕವನಗಳ ವಿಶ್ಲೇಷಣೆ ಮುಂತಾದುವುಗಳನ್ನು ಸುಲಲಿತವಾಗಿ, ವಿಮರ್ಶಾತ್ಮಕವಾಗಿ ಪ್ರಸ್ತುತಿಪಡಿಸುವ ಇವರ ಬರವಣಿಗೆಯ ಶೈಲಿ ಎಲ್ಲರಿಗೂ ಅಚ್ಚುಮೆಚ್ಚು.**

***

### ೪. 'ತಥ್ಯ' – ಲೇಖಕಿ: ಶ್ರೀಮತಿ ಗಿರಿಜಾ ರಾಜ್

ಜೀವನೋತ್ಸಾಹಿ ಲೇಖಕಿ ಎಂದು ಹೆಸರು ಮಾಡಿರುವ ಶ್ರೀಮತಿ ಎಲ್.ಗಿರಿಜಾರಾಜ್ ರವರು ಹೆಸರಾಂತ ಹಿಂದಿ ಸಾಹಿತಿ 'ಪ್ರೇಮ್ ಚಂದರ ಆಯ್ದ ಜನಪ್ರಿಯ ಕಥೆಗಳು' ಪುಸ್ತಕದಿಂದ 'ತಥ್ಯ' ಎಂಬ ಪ್ರೇಮಕಥೆಯನ್ನು ಆಳವಾಗಿ ವಿವೇಚಿಸಿ ಪರಿಚಯಿಸಿರುತ್ತಾರೆ. ಈ ಪುಸ್ತಕ ಶ್ರೀಮತಿ ಟಿ.ವಿ.ಅನ್ನಪೂರ್ಣಮ್ಮರವರು ಕನ್ನಡಕ್ಕೆ ಅನುವಾದ ಮಾಡಿರುವ ಕಥಾಸಂಗ್ರಹ. ಇಲ್ಲಿ ನಾಯಕ ಅಮೃತ ಮಾನವೀಯ ಪ್ರೀತಿಯ ಪ್ರತೀಕದಂತೆ ಮೊದಲಿಗೆ ಕಂಡರೂ ಕೊನೆಗೆ ಸಾಮಾನ್ಯ ಮನುಷ್ಯನ ತರಹ ಹಳೇ ಪ್ರೀತಿಗೆ ಬೀಳುವ ಇನ್ನೊಬ್ಬ ಸಾಮಾನ್ಯ ಮನುಷ್ಯನಾಗುತ್ತಾನೆ. ನಾಯಕಿ ಪೂರ್ಣಿಮಾ ದಿಟ್ಟ ಮತ್ತು ಸಂಪ್ರದಾಯಕ್ಕೆ ಬದ್ಧಳಾದ ಹೆಣ್ಣು. ಆವಳ ನಿಷ್ಠೆ ಮತ್ತು ತಪಸ್ಸಿನಂತಹ ಜೀವನಶೈಲಿ ಆಕೆಯ ವ್ಯಕ್ತಿತ್ವವು ವಿಕಸಿತವಾಗಿರುವುದನ್ನು ತೋರಿಸುತ್ತದೆ. ಲೇಖಕಿ ಮಾಡಿರುವ ವಿಶ್ಲೇಷಣೆ ಇದೊಂದು ಸಾಮಾನ್ಯ ಪ್ರೇಮ ಕಥೆ ಎಂದು ಹೇಳದೆ ಜೀವನದ ತತ್ವ, ತ್ಯಾಗ ಮತ್ತು ನಿರೀಕ್ಷೆಗಳನ್ನು ತೆರೆದಿಡುತ್ತದೆ. ಅದರ ಜೊತೆಗೆ ಅಂದಿನ ಸಾಮಾಜಿಕ ಕಟ್ಟಲೆಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಈ ಕಥೆಯ ಪರಿಚಯ ಲೇಖನವು ಕಥಾಸಂಗ್ರಹದ ಎಲ್ಲಾ ಕಥೆಗಳನ್ನು ಓದಬೇಕೆಂಬ ಹಂಬಲ ಮೂಡಿಸುತ್ತದೆ. ಖ್ಯಾತ ಸಾಹಿತಿ ಪ್ರೇಮ ಚಂದ್ರರ ಕಥೆಗಳನ್ನು ಎಲ್ಲಾ ಸಾಹಿತ್ಯಾಸಕ್ತರು ಒಮ್ಮೆಯಾದರೂ ಓದಲೇಬೇಕು. ಉತ್ತಮ ಪರಿಚಯ ಲೇಖನ ಕೊಟ್ಟ ಶ್ರೀಮತಿ ಗಿರಿಜಾರಾಜ್ ರವರಿಗೆ ಧನ್ಯವಾದಗಳು.

### ೫. 'ಯಾರು ಶ್ರೇಷ್ಠರು' – ಲೇಖಕ: ಶ್ರೀ ವಿಠ್ಠಲ.ಇಜೇರಿ

ಕಥೆಗಳ ಮೂಲಕ ನೀತಿಗಳನ್ನು ತಿಳಿಹೇಳುವ ಕೆಲಸ ಬಹಳ ಕಾಲದಿಂದ ನಡೆದು ಬಂದಿದೆ. ಶ್ರೀಯುತ ಇಜೇರಿಯವರು ಈ ನೀತಿ ಕಥೆಗಳನ್ನು ಹೇಳುವುದರ ಜೊತೆಗೆ ಅವುಗಳು ನಡೆದುಬಂದ ದಾರಿಯನ್ನು ಹಿಂದಿನ ಅನೇಕ ಸಾಹಿತ್ಯ ದಾಸೋಹಗಳಲ್ಲಿ ಪ್ರಸ್ತುತಿಪಡಿಸಿಕೊಂಡು ಬಂದಿರುತ್ತಾರೆ. ಈ ಸಾರಿ 'ಯಾರು ಶ್ರೇಷ್ಠರು?' ನೀತಿ ಕಥೆಯನ್ನು ಸ್ವಾಮಿ ವಿವೇಕಾನಂದ ಕಥಾಮಂಜರಿ ಪುಸ್ತಕದಿಂದ ಆಯ್ದು ಪ್ರಸ್ತುತಿಪಡಿಸಿದ್ದಾರೆ. ಈ ಕಥೆಯ ಸಾರಾಂಶ ಹೀಗಿದೆ. ಚಂದ್ರವರ್ಮ ಎಂಬ ಅರಸನು ಗೃಹಸ್ಥಾಶ್ರಮ ಮತ್ತು ಸನ್ಯಾಸಾಶ್ರಮಗಳಲ್ಲಿ ಯಾವುದು ಶ್ರೇಷ್ಠ ಎಂದು ತಿಳಿಯಲು ಬಯಸಿದಾಗ ಸತ್ಯಾನಂದರು ಈ ಪ್ರಶ್ನೆಗೆ ಉತ್ತರವನ್ನು ಪ್ರಾಯೋಗಿಕವಾಗಿ ತೋರಿಸಲು ರಾಜನನ್ನು ಕರೆದುಕೊಂಡು ಕಾಶ್ಮೀರಕ್ಕೆ ಹೋಗುತ್ತಾರೆ. ಅಲ್ಲಿ ನಡೆಯುತ್ತಿದ್ದ ಸ್ವಯಂವರದಲ್ಲಿ ಯುವ ಸನ್ಯಾಸಿಯು ರಾಜಕುಮಾರಿಯನ್ನು ಮತ್ತು ರಾಜನಾಗುವ ಅವಕಾಶವನ್ನು ತಿರಸ್ಕರಿಸುವುದನ್ನು ರಾಜ ಕಾಣುತ್ತಾನೆ. ನಂತರ ಆ ಸನ್ಯಾಸಿಯ ಹಿಂದೆ ಕಾಡಿಗೆ ಹೋದಾಗ ಪಕ್ಷಿ ದಂಪತಿಗಳು ಪ್ರಾಣತ್ಯಾಗ ಮಾಡಿ ಈ ರಾಜನಿಗೆ ಆಹಾರವಾಗುತ್ತವೆ. ಆಗ ಚಂದ್ರವರ್ಮಾ ರಾಜನಿಗೆ ಪಕ್ಷಿಗಳ ತ್ಯಾಗವನ್ನು ಕಂಡು ಗೃಹಸ್ಥರು ಮತ್ತು ಸನ್ಯಾಸಿಗಳು ತಮ್ಮ ನಡವಳಿಕೆಯಿಂದ ಶ್ರೇಷ್ಠರಾಗಬಲ್ಲರು ಎಂದು ಅರಿವಾಗುತ್ತದೆ.

ಉತ್ತಮ ಕಥೆ. ಇಲ್ಲಿ ಗೃಹಸ್ಥಾಶ್ರಮದ ಪ್ರತಿನಿಧಿಯಾಗಿ ಪಕ್ಷಿಗಳನ್ನು ತೆಗೆದುಕೊಂಡಿರುವುದು ಇನ್ನೊಂದು ವಿಶೇಷ. ಈ ಮೂಲಕ ಎಲ್ಲರೂ ಸಮಾನರು ಎಂದು ಹೇಳುವ ಪ್ರಯತ್ನ ಕೂಡ ಇರುವುದು ಎದ್ದು ಕಾಣುತ್ತದೆ. ಒಳ್ಳೆಯ ಕಥೆಯನ್ನು ಪ್ರಸ್ತುತಪಡಿಸಿದ ಶ್ರೀಯುತ ಇಜೇರಿಯವರಿಗೆ ಅಭಿನಂದನೆಗಳು.

ಶ್ರೀಯುತ ವಿಠ್ಠಲ ಇಜೇರಿಯವರು ಸಮೂಹದಲ್ಲಿ ತಮ್ಮ ಹೆಸರು ನೊಂದಾಯಿಸಿಕೊಂಡು ಆ ದಿವಸವೇ ತಮ್ಮ ಪ್ರಸ್ತುತಿ ಕಳುಹಿಸಿದ್ದಾರೆ. ಅವರಿಗೆ ಗೌರವ ಅರ್ಪಿಸಲು ಬೇರೆಲ್ಲಾ ಪ್ರಸ್ತುತಗಳಿಗಿಂತ ಒಂದೆರೆಡು ಸಾಲು ಇಲ್ಲಿ ಹೆಚ್ಚಿಗೆ ಬರೆದೆ.

### ೬. 'ಗಝಲ್' – ಲೇಖಕಿ: ಶ್ರೀಮತಿ ಸುಜಾತ ರವೀಶ್

ಶ್ರೀಮತಿ ಸುಜಾತ ರವೀಶ್ ರವರು ಪ್ರಸ್ತುತಿಪಡಿಸಿದ ಗಝಲಿನಲ್ಲಿ ಮನುಷ್ಯನ ಆಂತರಿಕ ತುಡಿತಗಳನ್ನು, ಬಯಕೆಗಳನ್ನು, ತೊಡಕುಗಳನ್ನು ಹಾಗೂ ಜೀವನದ ಕಾಳಜಿಗಳನ್ನು ಸೂಕ್ಷ್ಮವಾಗಿ ವರ್ಣಿಸಿದ್ದಾರೆ. ಈ ಗಝಲ್ ಆಂತರಿಕ ಮೌನ ಮತ್ತು ಭಾವನೆಗಳು, ಜೀವಿತದ ನಿರ್ಬಂಧ ಮತ್ತು ಬಯಕೆಗಳು, ಕನಸು–ನಿಜಗಳ ನಡುವಿನ ವ್ಯತ್ಯಾಸ ಮತ್ತು ಸಂಘರ್ಷ, ಸಮಯದ ಪರಿಗಣನೆಗಳನ್ನು ಹೃದಯಸ್ಪರ್ಶಿಯಾಗಿ ಅನಾವರಣ ಮಾಡುತ್ತದೆ. ಕೊನೆಯಲ್ಲಿ ಬೆಳಕಿನ ಪ್ರತೀಕವನ್ನು ಬಳಸಿ ಜೀವನದ

ಕತ್ತಲೆಯನ್ನು ದೂರ ಮಾಡುವ ಮಾರ್ಗವನ್ನು ಸೂಚಿಸುವಂತೆ ಮೂಡಿಬಂದಿದೆ. ಉತ್ತಮ ಗಝಲ್ ಕೊಟ್ಟ ಕವಿಯತ್ರಿಗೆ ಅಭಿನಂದನೆಗಳು.

### ೭. 'ರವಿ ಬೆಳಗೆರೆಗೊಂದು ಪತ್ರ' – ಲೇಖಕಿ: ಪೂರ್ಣಿಮ ಭಗವಾನ್

ಈ ಲೇಖನವು ಒಂದು ಆತ್ಮೀಯ ಪತ್ರದ ರೂಪದಲ್ಲಿದೆ. ವೈಯಕ್ತಿಕ ನುಡಿಗಟ್ಟು, ಪ್ರೀತಿಯ ಸಂಭಾಷಣಾ ಶೈಲಿ ಈ ಪತ್ರದ ಹೃದಯವಾಗಿದೆ. ಭಾವಪೂರ್ಣ ಬಾಷೆ, ಆತ್ಮೀಯವಾದ ನೇರ ಸಂಭಾಷಣಾ ಶೈಲಿ ಪತ್ರದ ವಾಸ್ತವಿಕತೆಯನ್ನು ಹೆಚ್ಚಿಸುತ್ತದೆ.

ಈ ಲೇಖನವು ಒಂದು ಭಾವನಾತ್ಮಕ ಪತ್ರವೂ ಹೌದು. ಇದು ಕೇವಲ ಪತ್ರ ಮಾತ್ರವಲ್ಲದೇ, ಅದು ರವಿ ಬೆಳಗೆರೆ ಅವರು ಕನ್ನಡಪ್ರಜ್ಞೆಗೂ, ಬದುಕಿನ ದರ್ಶನಕ್ಕೂ ನೀಡಿದ ಕೊಡುಗೆಗೆ ವ್ಯಕ್ತಪಡಿಸಿದ ಕೃತಜ್ಞತೆಯ ಲೇಖನವಾಗಿದೆ. ಅವರ ಪ್ರಭಾವದಿಂದ ಲೇಖಕಿ ತಮ್ಮಲ್ಲಿರುವ ಸಾಹಿತ್ಯದ ಶಕ್ತಿಯನ್ನು ಅರಿತುಕೊಂಡಿರುವುದು ಮತ್ತು ಆ ಶಕ್ತಿ ಈಗ ಅರಳಿರುವುದನ್ನು ಕಟ್ಟಿಕೊಟ್ಟಿದ್ದಾರೆ. ಪತ್ರದ ಶೈಲಿ, ಭಾವಪೂರ್ಣತೆ ಮತ್ತು ವ್ಯಕ್ತಿತ್ವದ ಬಗ್ಗೆ ಮೆಚ್ಚುಗೆಯು ಲೇಖನವನ್ನು ಹೃದಯಸ್ಪರ್ಶಿಯಾಗಿ ಮಾಡಿದೆ.

ಉತ್ತಮ ವ್ಯಕ್ತಿತ್ವಗಳು ನಮ್ಮ ಬದುಕಿನಲ್ಲಿ ಹೇಗೆ ಪ್ರೇರಣೆ ನೀಡಬಹುದು ಎಂಬುದಕ್ಕೆ ಈ ಪತ್ರ ಸಾಕ್ಷಿಯಾಗಿದೆ. ಉತ್ತಮ ಪತ್ರ ಬರೆದಿರುವ ಶ್ರೀಮತಿ ಪೂರ್ಣಿಮಾ ಭಗವಾನ್ ರವರಿಗೆ ಅಭಿನಂದನೆಗಳು.

### ೮. 'ಬಹುರೂಪಿ ಸಾಲ' – ಲೇಖಕಿ: ಶ್ರೀಮತಿ ಉಷಾರಾಣಿ ಟಿ.ಆರ್.

ಶ್ರೀಮತಿ ಉಷಾರಾಣಿ ಟಿ.ಆರ್.ರವರು ತಮ್ಮ ಬರಹದಲ್ಲಿ "ಸಾಲ" ಎಂಬ ಪದದ ಬಹುರೂಪಿ ಸ್ವರೂಪವನ್ನು ತೆರೆದಿಡುತ್ತಾರೆ. ಬರಹವು ಬರಹವು ಸಾಲದ ಸಂಕೀರ್ಣತೆಗಳ ಜೊತೆಗೆ ಅದು ಬೀರುವ ಸಾಮಾಜಿಕ ಪ್ರಭಾವಗಳನ್ನು ಎತ್ತಿ ತೋರಿಸುತ್ತದೆ. ಒಗಟಿನ ಮೂಲಕ ಪ್ರಾರಂಭವಾಗುವ ಬರಹದಲ್ಲಿ ಗಾದೆ ಮಾತುಗಳು, ಉಪಮೆಗಳು ಹಿತಮಿತವಾಗಿ ಬೆರೆತುಕೊಂಡು ಓದಲು ಖುಷಿ ಕೊಡುತ್ತದೆ. ಉತ್ತಮ ಲೇಖನ. ಅಭಿನಂದನೆಗಳು ಮೇಡಂ.

### ೯. 'ಸ್ಪಂದನೆ' – ಲೇಖಕಿ: ಶ್ರೀಮತಿ ರೇಣುಕಾ ದೇಸಾಯಿ

ಈ ಲೇಖನವು ಶ್ರೀಮತಿ ರೇಣುಕಾ ದೇಸಾಯಿ ಅವರ ಭಾವನಾತ್ಮಕ ಸ್ಪಂದನೆಯುಳ್ಳ ಬರಹವಾಗಿದೆ. ಲೇಖಕಿಗೆ ರವೀಂದ್ರರ ವ್ಯಕ್ತಿತ್ವಕ್ಕೆ ಮೆಚ್ಚುಗೆ ಸಲ್ಲಿಸುತ್ತಾ ಕೃತಜ್ಞತೆಯನ್ನು ಸಲ್ಲಿಸುವುದು ಈ ಲೇಖನದ ಉದ್ದೇಶ. ರವೀಂದ್ರರು ಮೊದಲು ಬ್ಯಾಂಕಿನ ಅಧಿಕಾರಿಗಳ ಸಂಘದಲ್ಲಿ ಮಾಡಿದ ಸಂಘಟನೆ, ವೈಯುಕ್ತಿಕವಾಗಿ ಕಾಡುತ್ತಿದ್ದ ದೈಹಿಕ ನೋವನ್ನು ಮೀರಿ ಧೈರ್ಯದಿಂದ ಸಾಹಿತ್ಯ ಸೇವೆಯ ಜೊತೆಗೆ ಸಾಹಿತ್ಯಾಸಕ್ತರನ್ನು ಬೆಳೆಸುವ ರೀತಿ, ಲೇಖಕಿಗೆ ವೈಯುಕ್ತಿಕವಾಗಿಯೂ ಬೆಳೆಯಲು ಸಹಾಯ ಮಾಡಿದ ಅಂಶಗಳು ಮೂಡಿಬಂದಿವೆ. ಅವರು ಬಳಸಿದ ಭಾಷೆ ಭಾವಪೂರ್ಣವಾಗಿದೆ. ಇದರ ಜೊತೆಗೆ ಶ್ರೀಇಜೇರಿ ಯವರು ಬರೆಯುತ್ತಿರುವ "ನಾವು-ನಮ್ಮವರು" ಬರಹ ಶ್ರೇಣಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಲೇಖನವು ಧೈರ್ಯವಂತ ಸಂಘಟಕರೊಬ್ಬರ ಸ್ಪೂರ್ತಿದಾಯಕ ಕಥನವಾಗಿದೆ. ಶ್ರೀಮತಿ ರೇಣುಕಾ ದೇಸಾಯಿಯವರಿಗೆ ಅಭಿನಂದನೆಗಳು.

### ೧೦. 'ಶಾಯರಿಗಳು' – ಲೇಖಕ: ಶ್ರೀ ಸೀತಾರಾಮ ಕಟ್ಟಿ

'ಜಾನಕಿರಾಮ' ಕಾವ್ಯ ನಾಮದಿಂದ ಬರೆಯುವ ಸೀತಾರಾಮ ಕಟ್ಟಿಯವರು ಶಾಯರಿಗಳ ಮೂಲಕ ಮಾನವನ ಆತ್ಮ ಸಂವೇದನೆ, ಸಾಮಾಜಿಕ ಸಂಬಂಧಗಳು ಮತ್ತು ಜೀವನದ ಅರ್ಥವನ್ನು ಅನ್ವೇಷಿಸುವ ಪ್ರಯತ್ನಮಾಡುತ್ತಾರೆ. ಕವಿ ಮನದ ಕವಾಟವನ್ನು ತೆರೆದು ದಿಗಂತದ ತುದಿವರೆಗೆ ನೋಡಲು ಆಹ್ವಾನಿಸುತ್ತಾರೆ. ನುಡಿಗಳ ಶಕ್ತಿ, ದಾನದ ಮಹತ್ವ ಮತ್ತು ಸ್ವಯಂ ಅನ್ವೇಷಣೆಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತಾರೆ. "ಶತ್ರುವಿಗು ಒಳಿತಿಂದ ಕನಸಿನಲಿ ಕಾಡು" ಸಾಲುಗಳು ವಿಶೇಷವಾಗಿ ನನ್ನ ಗಮನ ಸೆಳೆಯಿತು. ಇದರ ವಿಡಿಯೋ ರೂಪವೂ ಬೇಗನೇ ಬರಲಿ ಮತ್ತು ಆ ಮೂಲಕ ಎಲ್ಲ ಸಾಹಿತ್ಯಾಸಕ್ತರನ್ನು ತಲುಪಲಿ ಎಂದು ಆಶಿಸುತ್ತೇನೆ. ಚಂದದ ಕವನ ಕೊಟ್ಟ ಶ್ರೀ ಸೀತಾರಾಮ ಕಟ್ಟಿಯವರಿಗೆ ಅಭಿನಂದನೆಗಳು.

## ೧೧. 'ಮಂಪರು' – ಲೇಖಕ: ಶ್ರೀ ಗುರುರಾಜ ಶಾಸ್ತ್ರೀ

ಈ ಲೇಖನದ ಶೀರ್ಷಿಕೆ ಮಾತ್ರ ಮಂಪರು. ಆದರೆ ನಿಜಕ್ಕೂ ಇದು ಹಾಸ್ಯದ ಲಡ್ಡು! ಲೇಖಕರು ಓದುಗರನ್ನು ಮಂಪರಿನ ಮೆಟ್ಟಿಲುಗಳಲ್ಲಿ ಏರಿಸಿ, ನಂತರ ಹಾಸ್ಯ ಸಾಗರದೊಳಗೆ ತಳ್ಳುತ್ತಾರೆ. ಮೊದಲಿಗೆ ಗಂಭೀರವಾಗಿ ಶುರುವಾಗಿ ಓದುಗರ ಮನವೂ ಗಂಭೀರವಾಗಿ ಕಂಪಿಸುವ ಮೊದಲೇ ಕೀಲಿ ತಿರುಗಿಸಿ ಮಂಪರಿನಲ್ಲಿ ಬೀಳಿಸುತ್ತಾರೆ! ಒಂದೆಡೆ ವೈದ್ಯರ ಮುಂದೆ ಇನ್ಶುರೆನ್ಸ್ ಬಗ್ಗೆ ಸತ್ಯ ಹೇಳುವ ಮರುಳತನ, ಇನ್ನೊಂದೆಡೆ "ಸುಶ್ಮಾ, ರೋಜಾ, ನಳಿನಿ..." ಇನ್ನೂ ಮುಂತಾದವರು ಇರುವ ಪಾಂಡೋರಾ ಪೆಟ್ಟಿಗೆ ತೆಗೆದಿಡುವ ಧೈರ್ಯ. ಒಟ್ಟಾರೆ, ಈ ಲೇಖನ ಓದಿ ನಗು ಬರದೇ ಇದ್ದರೆ, ಅದು ಪಕ್ಕಾ ತಾವು ಮಂಪರಿನಲ್ಲಿದ್ದೀರಿ ಅನ್ನೋ ಸುಳಿವು ಕೊಡುತ್ತದೆ! ಉತ್ತಮ ಲೇಖನ ಕೊಟ್ಟ ಶ್ರೀ ಗುರುರಾಜ ಶಾಸ್ತ್ರಿಯವರಿಗೆ ಅಭಿನಂದನೆಗಳು.

## ೧೨. 'ಪುಕ್ಕಲು ಪಂಡಿತ' – ಲೇಖಕಿ: ಶ್ರೀಮತಿ ಶಾಂತಿ ವಾಸು

ಪುಕ್ಕಲ ಪಂಡಿತ, ಹೆಸರೇ ಹೇಳಿದಂತೆ, ಪುಕ್ಕಲತನದಲ್ಲಿ ಪಂಡಿತ! ಮಂಜ ಎಂಬ ನಮ್ಮ ಕಥಾನಾಯಕ, ಅಬ್ಬಬ್ಬಾ... ಓಡಾಟಕ್ಕೂ, ಕುತೂಹಲಕ್ಕೂ ಈತನಿಗೆ ಯಾವ ಗಡಿಯೂ ಇಲ್ಲ. ದೆವ್ವ ಎಲ್ಲಿ? ಕುತೂಹಲ ಎಲ್ಲಿ? ಇವನು ಅಲ್ಲಿ! ನಾಲ್ಕನೆಯ ಮಹಡಿಗೆ ಹೋಗಿ, ಟೆರೇಸಿನಲ್ಲಿ ಓಡಾಡಿ, ಮರ ಮತ್ತು ಹೆಣವನ್ನು ಒಂದೇ ಕಣ್ಣಿನಿಂದ ನೋಡಿ ಭಯದಿಂದ ಥಕ, ಥಕಾ! ನಾನು ವಿಜ್ಞಾನದ ವಿದ್ಯಾರ್ಥಿ. ಹಾಗಾಗಿ ಎಲ್ಲವನ್ನೂ ಸಮೀಕರಣ ಮಾಡಿ ನೋಡುವ ಅಭ್ಯಾಸ. ನಾಯಕನ ಪಾತ್ರದ ಬಗ್ಗೆ ಸಮೀಕರಣ ಬರೆದರೆ ಮೂಢತೆ + ಭಯ + ಕುತೂಹಲ = ಮಂಜ ಎಂದಾಗುತ್ತದೆ. ಹಾಗಂತ ಈ ಕಥೆ ಒಂದು ಧೈರ್ಯದ ಪಾಠವಲ್ಲ. ಓದಿ, ಓದಿ ನೆನೆಸಿದಾಗಲೂ ನಗೆಯೇ ಬರುವ ಪುಕ್ಕಲ ಪಂಡಿತನ ಪಾಠ. ಹೆಚ್ಚಿನ ಕಥೆ ಬೇಕಾ? ಲೇಖನ ಓದಿ! ಉತ್ತಮ ಲೇಖನ ಕೊಟ್ಟ ಶ್ರೀಮತಿ ಶಾಂತಿ ವಾಸುರವರಿಗೆ ಧನ್ಯವಾದಗಳು.

## ೧೩. 'ಹೀಗೊಂದು ವಿಚಾರ ಲಹರಿ' – ಲೇಖಕಿ: ಶ್ರೀಮತಿ ಶ್ರವಣಕುಮಾರಿ

ಶ್ರೀಮತಿ ಶ್ರವಣಕುಮಾರಿಯವರ ಸಂದೇಶ ಚತುರವಾಣಿಯಲ್ಲಿ ಬಂದಾಗ ಸಣ್ಣ ಕಥೆ ಇರಬಹುದು ಎಂದು ಊಹೆ ಮಾಡಿದೆ. ಆದರೆ ತೆರೆದು ನೋಡಿದಾಗ ಅವರು ಬರೆದ ವಿಚಾರ ಲಹರಿಯ ಲೇಖನ ಕಣ್ಣಿಗೆ ಬಿತ್ತು. ಕುತೂಹಲದಿಂದ ಓದಿದೆ.

ಲೇಖಕಿಯು ಸಲಿಂಗಿಗಳ ಬಗ್ಗೆ ತಮಗಿದ್ದ ಅಜ್ಞಾನವನ್ನು ತಿಳಿಸಿ ಅವರ ಬಗ್ಗೆ ಓದುವ ಮೂಲಕ ಅರಿವು ಮೂಡಿಸಿ ಕೊಂಡಿರುವುದನ್ನು ತಿಳಿಸುತ್ತಾರೆ ಮತ್ತು LGBTQ ಸಮುದಾಯದವರ ಸ್ಥಿತಿ–ಗತಿಯ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಲೇಖನವು ಸಲಿಂಗಿಗಳ ಬಗ್ಗೆ ಅರಿತುಕೊಳ್ಳುವ ಮತ್ತು ಸಹಾನುಭೂತಿ ತೋರುವ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. "ಆ ವರ್ಗದವರಿಗೆ ಕೇವಲ ಲೈಂಗಿಕ ವಿಷಯಗಳಲ್ಲಿ ಮಾತ್ರ ಆಸಕ್ತಿ ಎಂದುಕೊಂಡರೆ ತಪ್ಪಾಗುತ್ತದೆ. ಅದೊಂದೇ ವಿಷಯದಲ್ಲಿ ಅವರಿಗೂ ನಮಗೂ ವ್ಯತ್ಯಾಸವಿರುವುದು ಅಷ್ಟೇ" ಎನ್ನುವ ಲೇಖಕಿಯ ಸಾಲುಗಳನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ. ಈ ಲೇಖನವನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸುವುದು ಸಾಧ್ಯವಾದರೆ ಇನ್ನಷ್ಟು ಜನಸಾಮಾನ್ಯರಿಗೆ ತಲುಪುವಂತೆ ಆಗುತ್ತದೆ. ಚಿಂತನಾರ್ಹವಾದ ಲೇಖನವನ್ನು ಬರೆದಿರುವ ಶ್ರೀಮತಿ ಶ್ರವಣಕುಮಾರಿಯವರಿಗೆ ಧನ್ಯವಾದಗಳು.

## ೧೪. 'ವ್ಯೂಹದಲ್ಲಿ ಬಂಧಿ' ಲೇಖನಮಾಲೆ – 'ಸಾಂತ್ವನ' : ಲೇಖಕಿ: ಶ್ರೀಮತಿ ಮಾಧುರಿ ಕೃಷ್ಣ.

ಶ್ರೀಮತಿ ಮಾಧುರಿ ಕೃಷ್ಣ ರವರ "ಎನ್ ಟ್ರಾಪ್ಡ್ – ವ್ಯೂಹದಲ್ಲಿ ಬಂಧಿ'– ಲೇಖನ ಮಾಲೆಯಲ್ಲಿ ನಾಲ್ಕನೆಯ ಲೇಖನವನ್ನು ಪ್ರಸ್ತುತಿಪಡಿಸಿದ್ದಾರೆ. ಇದು ಧಾರಾವಾಹಿ ತರಹ ಬರುತ್ತಿದ್ದರೂ ಪ್ರತಿಯೊಂದು ಲೇಖನವನ್ನು ಸ್ವತಂತ್ರವಾಗಿಯೂ ನೋಡಬಹುದು. ಶೀರ್ಷಿಕೆಯೇ ಹೇಳುವಂತೆ ಈ ಲೇಖನವು ಆಂತರಿಕ ಭಾವನೆಗಳ ಬಲೆಗೆ ಸಿಕ್ಕಿಕೊಂಡಿರುವ ಮನಸ್ಸಿನ ಸ್ಥಿತಿಯನ್ನು ಅತಿ ಸೂಕ್ಷ್ಮವಾಗಿ ಚಿತ್ರಿಸುತ್ತದೆ. ಸಂಬಂಧಗಳು ತಾನಾಗಿಯೇ ಬೆಳೆಯುವಂತಹವು, ಆದರೆ ಕಾಳಜಿಯಿಂದ ಮಾತ್ರ ಅವು ಉಳಿಯುತ್ತವೆ ಎಂದು ಸೂಕ್ಷ್ಮವಾಗಿ ತೆರೆದಿಡಲು ಯಶಸ್ವಿಯಾಗಿದೆ. ಹಾಗಾದರೆ ಲೇಖನದಲ್ಲಿ ಬರುವ 'ಅವನು ಯಾರು?' ಎಂಬ ಪ್ರಶ್ನೆ ಓದುಗರ ಮನದಲ್ಲಿ ಮೂಡುವುದು ಸಾಮಾನ್ಯ. ಸಾಮಾನ್ಯವಾಗಿ ಓದಿದರೆ ಅವನು ಒಬ್ಬ ಸ್ನೇಹಿತ ಆಗಿರಬಹುದು. ಸ್ವಲ್ಪ ಗಹನವಾಗಿ ಓದಿದರೆ 'ಅವನು' ಲೇಖಕಿಯ 'ಆತ್ಮ'ವೇ ಆಗಿರಬಹುದು. ಆವರವರ ಭಾವಕ್ಕೆ ತಕ್ಕಂತೆ

'ಅವನು' ಕಾಣುತ್ತಾನೆ. ಯಾರೇ ಓದುಗನಾಗಿರಲಿ, ಓದಿದಾಗ ತನಗೆ ಅರ್ಥವಾಯಿತು ಎಂದುಕೊಂಡರೆ, ಅದು ಬರಹದ ಯಶಸ್ಸನ್ನು ಸೂಚಿಸುತ್ತದೆ. ಹಾಗಾಗಿ ಅಂತರಂಗದ ತುಮುಲಕ್ಕೆ ಶಾಂತಿಯು ಬೇಕಾದರೆ, ಅದು ನಮ್ಮೊಳಗಿಂದಲೇ ಹೊಮ್ಮಬೇಕು ಎಂಬ ಸಂದೇಶವನ್ನು ಈ ಲೇಖನ ಎಲ್ಲರಿಗೂ ತಲುಪಿಸುವಲ್ಲಿ ಯಶಸ್ವಿಯಾಗಿದೆ. ಉತ್ತಮ ಚಿಂತನಾರ್ಹ ಲೇಖನ ಕೊಟ್ಟ ಶ್ರೀಮತಿ ಮಾಧುರಿ ಕೃಷ್ಣರವರಿಗೆ ಧನ್ಯವಾದಗಳು.

## ೧೫. 'ಪುಕ್ಕಟೆ ಸಲಹೆಗಳ ಸುಳಿಯಲ್ಲಿ' – ಲೇಖಕಿ: ಶ್ರೀಮತಿ ಗಾಯತ್ರಿ ಮೂರ್ತಿ

ಶ್ರೀಮತಿ ಗಾಯತ್ರಿ ಮೂರ್ತಿಯವರ ಈ ಲೇಖನವು "ಪುಕ್ಕಟೆ ಸಲಹೆಗಳನ್ನು" ಹೇಗೆ ನಾವೆಲ್ಲವೂ ದಿನ ನಿತ್ಯ ಕೊಡುತ್ತಿರುತ್ತೇವೆ ಎಂಬುದರ ಅನಾವರಣ ಮಾಡಿದೆ. ಪುಕ್ಕಟೆ ಸಲಹೆ ಎಂದರೆ ಯಾರು ಯಾರಿಗೆ ಬೇಕಾದರೂ ನೀಡಬಹುದಾದ ಸಲಹೆ ಎನ್ನುತ್ತಾ ಇದು ಅನಗತ್ಯ ಮತ್ತು ಕೆಲವೊಮ್ಮೆ ಹಾನಿಕಾರಕವೂ ಆಗಬಹುದು ಎನ್ನುವ ತಮ್ಮ ವೈಯಕ್ತಿಕ ಅನುಭವಗಳನ್ನು ಉದಾಹರಣೆಗಳಾಗಿ ನೀಡುತ್ತಾರೆ. ಲೇಖನವು ಪುಕ್ಕಟೆ ಸಲಹೆಗಳ ಸುಳಿಯಲ್ಲಿ ಸಿಕ್ಕಿಬೀಳುವುದರ ವಿಡಂಬನೆಯನ್ನು ಮಾಡುತ್ತದೆ. ಬರವಣಿಗೆಯಲ್ಲಿ ಲವಲವಿಕೆಯಿದೆ. ಲೇಖಕಿ ಶ್ರೀಮತಿ ಗಾಯತ್ರಿ ಮೂರ್ತಿಯವರಿಗೆ ಅಭಿನಂದನೆಗಳು.

(ಅಂದಹಾಗೆ ನಾವೆಲ್ಲ, ಭಾರತೀಯರು, ಅನ್ ಸಾಲಿಸಿಟೆಡ್ ಸಲಹೆ ಕೊಡುವುದರಲ್ಲಿ ಮುಂದಿದ್ದೇವೆ ಎಂಬ ವಿಷಯವನ್ನು ಯಾವುದೋ ದಿನಪತ್ರಿಕೆಯಲ್ಲಿ ಬಹಳ ಹಿಂದೆ ಓದಿದ್ದು ನೆನಪಾಯಿತು. ಈ ಲೇಖನ ಅದನ್ನು ಇನ್ನೊಮ್ಮೆ ದೃಢಪಡಿಸಿದೆ!)

## ೧೬. 'ದುಮ್ಮಾನ' – ಲೇಖಕಿ: ಶ್ರಿಮತಿ ರಾಧಿಕಾ ಗುಜ್ಜರ್

ಶ್ರೀಮತಿ ರಾಧಿಕಾ ಗುಜ್ಜರ್ ರವರು ಪ್ರಸ್ತುತಿಪಡಿಸಿದ ಕವನದ ಶೀರ್ಷಿಕೆ 'ದುಮ್ಮಾನ'. ಈ ಶೀರ್ಷಿಕೆಯಿಂದ ಬರುವ ಶಬ್ದವೇ ಈ ಕವನದ ಭಾವನಾತ್ಮಕ ತಳಹದಿಗೆ ದಿಕ್ಕು ನೀಡುತ್ತದೆ. ಅದರಂತೆ ಈ ಕವನ ನೆನಪು, ಭಾವನೆ ಮತ್ತು ಸಂಬಂಧಗಳ ಮೌನಗಾಥೆಯನ್ನು ಹೊತ್ತು ತಂದಿದೆ. ಹಾಗಾಗಿ ದುಮ್ಮಾನ ಹೊರಗಿನ ಮೌನ ಮಾತ್ರವಲ್ಲದೆ ಒಳಗಿನ ತಳಮಳ ಮತ್ತು ತೊಳಲಾಟವನ್ನು ತೋರಿಸುತ್ತದೆ. ಮರೆಯಾಗುತ್ತಿರುವ ನೆನಪುಗಳು, ಭಾವಪೂರ್ಣ ಸಂಬಂಧ, ಆಂತರಿಕ ಮೌನ ಮತ್ತು ನೆನಪಿನಲ್ಲಿ ಮಂಕಾಗುತ್ತಿರುವ ಹಳೆಯ ನೋವುಗಳನ್ನು ಹೊತ್ತು ಬಂದಿರುವ ಕವನ ಭಾವನಾತ್ಮಕವಾಗಿದೆ. ನನಗೆ ಇಷ್ಟವಾದ ಸಾಲು "ನನ್ನವಳೆಂಬ ಬೆಟ್ಟದಷ್ಟು ಅಕ್ಕರೆ". ಈ ಸಾಲಿನಿಂದ ಬರುವ ಶಬ್ದ ಆ ನೆನಪಿನ ವ್ಯಕ್ತಿಯ ಮೇಲೆ ಕವಯತ್ರಿಗೆ ಇದ್ದ ಆತ್ಮೀಯತೆಯನ್ನು ಸೂಚಿಸುತ್ತವೆ. ಉತ್ತಮ ಕವನ ಕೊಟ್ಟ ಲೇಖಕಿಗೆ ಧನ್ಯವಾದಗಳು.

## ೧೭. 'ತಂಜಾವೂರಿನ ಬೃಹದೀಶ್ವರ ದೇವಸ್ಥಾನ' – ಲೇಖಕ: ಶ್ರೀಯುತ ರವಿ ಕುಸಬಿ

ಶ್ರೀಯುತ ರವಿ ಕುಸಬಿಯವರು ತಂಜಾವೂರಿನ ಬೃಹದೀಶ್ವರ ದೇವಸ್ಥಾನದ ವಿಶೇಷತೆಯನ್ನು ತಮ್ಮ ಪ್ರವಾಸ ಕಥನದಲ್ಲಿ ತೆರೆದಿಟ್ಟಿದ್ದಾರೆ. ಲೇಖನದಲ್ಲಿ ದೇವಸ್ಥಾನ ಕಟ್ಟಿದ ಕಾಲ, ಆ ಸಮಯದಲ್ಲಿ ಆಡಳಿತದಲ್ಲಿದ್ದ ರಾಜರ ಬಗ್ಗೆ, ವಾಸ್ತುಶಿಲ್ಪದ ವಿಶೇಷ, ಇಂಜಿನಿಯರಿಂಗ್ ಮತ್ತು ಖಗೋಳಶಾಸ್ತ್ರದ ಅದ್ಭುತ ಸಂಯೋಜನೆಯ ವಿವರಗಳನ್ನು ತೆರೆದಿಡುತ್ತಾ ಓದುಗರಲ್ಲಿ ಸ್ಥಳವನ್ನು ನೋಡುವ ಕುತೂಹಲ ಹುಟ್ಟಿಸುತ್ತಾರೆ. ಯಾವುದೇ ಅಲಂಕಾರಿಕ ಭಾಷೆಗಳನ್ನು ಬಳಸದೆ ವಿಷಯವನ್ನು ನೇರವಾಗಿ ತೆರೆದಿಟ್ಟಿರುತ್ತಾರೆ. ಒಳ್ಳೆಯ ಪ್ರವಾಸ ಕಥನ ಕೊಟ್ಟಿರುವುದಕ್ಕೆ ಧನ್ಯವಾದಗಳು.

ಈ ಸಾರಿಯ ಸಾಹಿತ್ಯದ ದಾಸೋಹದಲ್ಲಿ ಪ್ರಸ್ತುತಿಪಡಿಸಿದ ಎಲ್ಲಾ ಬರಹಗಳು ವೈವಿಧ್ಯಮಯವಾಗಿದ್ದವು. ಅವೆಲ್ಲವನ್ನೂ ನಾನು ಓದಿ ಖುಷಿಪಟ್ಟಿದ್ದೇನೆ.

ನನಗೆ ದಾಸೋಹದ ಅಧ್ಯಕ್ಷತೆ ವಹಿಸಲು ಅವಕಾಶ ಮಾಡಿಕೊಟ್ಟ ಸಂಚಾಲಕ ಸಮಿತಿಯವರಿಗೆ ಧನ್ಯವಾದಗಳು.

ಜೈ ಹಿಂದ್, ಜೈ ಕರ್ನಾಟಕ.

***

## ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
## ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

# ಸಾಹಿತ್ಯ ದಾಸೋಹ

## ಅಂತರ್ಜಾಲ ಮುಖೇನ ನಡೆದ ಸಾಹಿತ್ಯ ದಾಸೋಹಗಳು ಮತ್ತು ಪ್ರಕಟಿತ ಸಾಹಿತ್ಯ ದಾಸೋಹ ಸಂಚಿಕೆಗಳ ಪಟ್ಟಿ

| ದಾಸೋಹದ ಸಂಖ್ಯೆ | ಸಂಚಿಕೆ ಸಂಖ್ಯೆ | ದಾಸೋಹದ ದಿನಾಂಕ | ಒಟ್ಟು ಪ್ರಸ್ತುತಿಗಳು | ಒಟ್ಟು ಪುಟಗಳು | ಅಧ್ಯಕ್ಷತೆ |
|---|---|---|---|---|---|
| 176 | ಸಂಚಿಕೆ ಇಲ್ಲ | 11.04.2020 | – | – | ಮಹಾಬಲ ಕೆ.ಎನ್. |
| 177 | 01 | 09.05.2020 | 25 | 63 | ಸೀತಾರಾಮು |
| 178 | 02 | 13.06.2020 | 19 | 61 | ಗೋನವಾರ ಕಿಶನ್ ರಾವ್ |
| 179 | 03 | 11.07.2020 | 24 | 49 | ಶ್ರೀನಿವಾಸ ಗಟ್ಟು |
| 180 | 04 | 08.08.2020 | 41 | 114 | ಡಾ. ಗೋವಿಂದ ಹೆಗಡೆ |
| 181 | ತಪ್ಪಿದ ಕ್ರಮ ಸಂಖ್ಯೆ 195/2ರಲ್ಲಿ (ನವೆಂಬರ್ 2021) ಸರಿಪಡಿಸಿದೆ | | | | |
| 182 | 05 | 12.09.2020 | 27 | 62 | ವಿಠ್ಠಲ ಎಸ್ ಇಜೇರಿ |
| 183 | 06 | 10.10.2020 | 17 | 34 | ಜಿ.ವಿ. ನಿರ್ಮಲ |
| 184 | 07 | 28.11.2020 | 27 | 70 | ಜಿ.ವಿ. ಅರುಣ |
| 185 | 08 | 12.12.2020 | 27 | 66 | ಎನ್. ಶಂಕರ ರಾವ್ |
| 186 | 09 | 09.01.2021 | 26 | 86 | ಶ್ರವಣಕುಮಾರಿ ಟಿ.ಎಸ್. |
| 187 | 10 | 13.02.2021 | 19 | 50 | ನಾಗರತ್ನ ಚಂದ್ರಶೇಖರ |
| 188 | 11 | 13.03.2021 | 21 | 48 | ರಾಧಿಕಾ ವಿ. ಗುಜ್ಜರ್ |
| 189 | 12 | 10.04.2021 | 18 | 73 | ಎಂ.ಜಿ.ವೆಂಕಟೇಶ ಮೂರ್ತಿ |
| 190 | 13 | 08.05.2021 | 20 | 127 | ಹು.ವಾ. ಶ್ರೀಪ್ರಕಾಶ್ |
| 191 | 14 | 12.06.2021 | 33 | 73 | ಶಾಂತಾ ನಾಗಮಂಗಲ |
| 192 | 15 | 10.07.2021 | 34 | 95 | ಕೆ.ಆರ್.ಎಸ್. ಮೂರ್ತಿ |
| 193 | 16 | 28.08.2021 | 23 | 23 | ಬಿ.ಆರ್. ರವೀಂದ್ರನಾಥ್ |
| 194 | 17 | 25.09.2021 | 25 | 65 | ಮನೋಹರ ಗೋಖಲೆ |
| 195 | 18 | 09.10.2021 | 23 | 61 | ಶೀಲಾ ಭಂಡಾರ್ಕರ್ |
| 195/2 | 19 | 13.11.2021 | 26 | 63 | ಗುರುರಾಜ ಶಾಸ್ತ್ರಿ |
| 196 | 20 | 11.12.2021 | 19 | 41 | ಕೆ.ಆರ್. ವೆಂಕಟೇಶ್ |
| 197 | 21 | 08.01.2022 | 24 | 74 | ಎಲ್. ಗಿರಿಜಾ ರಾಜ್ |
| 198 | 22 | 12.02.2022 | 30 | 87 | ಮಾಲತಿ ಶ್ರೀನಿವಾಸನ್ |
| 199 | 23 | 12.03.2022 | 22 | 72 | ರೇಣುಕಾ ದೇಸಾಯಿ |
| 200 | 24 | 24.04.2022 | 23 | 65 | ಬೆಂ.ಶ್ರೀ. ರವೀಂದ್ರ |

| ದಾಸೋಹದ ಸಂಖ್ಯೆ | ಸಂಚಿಕೆ ಸಂಖ್ಯೆ | ದಾಸೋಹದ ದಿನಾಂಕ | ಒಟ್ಟು ಪ್ರಸ್ತುತಿಗಳು | ಒಟ್ಟು ಪುಟಗಳು | ಅಧ್ಯಕ್ಷತೆ |
|---|---|---|---|---|---|
| 201 | 25 | 28.05.2022 | 22 | 50 | ಎನ್.ವಿ. ರಘುರಾಂ |
| 202 | 26 | 11.06.2022 | 25 | 68 | ಸರಸ್ವತಿ ನಟರಾಜ್ |
| 203 | 27 | 09.07.2022 | 23 | 67 | ರತ್ನಾ ಮೂರ್ತಿ |
| 204 | 28 | 13.08.2022 | 22 | 54 | ಡಾ. ಜಿ.ಎನ್. ಜಗನ್ನಾಥ್ |
| 205 | 29 | 24.09.2022 | 29 | 65 | ಧೀರೇಂದ್ರ ಎಸ್. |
| 206 | 30 | 08.10.2022 | 18 | 46 | ಶಾಂತಿ ವಾಸು |
| 207 | 31 | 12.11.2022 | 21 | 63 | ಸುನೀಲ್ ಹಳೆಯೂರು |
| 208 | 31 | 10.12.2022 | 20 | 65 | ಭ.ರಾ. ವಿಜಯಕುಮಾರ್ |
| 209 | 33 | 08.01.2023 | 20 | 81 | ಸುಜಾತಾ ರವೀಶ್ |
| 210 | 34 | 12.02.2023 | 32 | 89 | ಪೋಲೇನಹಳ್ಳಿ ರಮೇಶ್ |
| 211 | 35 | 25.03.2023 | 18 | 47 | ಕೆ.ಎನ್. ಭಗವಾನ್ |
| 212 | 36 | 08.04.2023 | 21 | 76 | ರವಿ ಕುಸಬಿ |
| 213 | 37 | 27.05.2023 | 22 | 85 | ಶ್ರೀಧರ ಬಾಣಾವರ |
| 214 | 38 | 24.06.2023 | 20 | 73 | ಎಂಎಚ್.ಸುವರ್ಣಲಕ್ಷ್ಮಿ |
| 215 | 39 | 22.07.2023 | 25 | 70 | ಸಿ.ಆರ್. ಕಮಲಾಕ್ಷಿ |
| 216 | 40 | 26.08.2023 | 23 | 63 | ಕೆ.ಎನ್. ಮಹಾಬಲ |
| 217 | 41 | 23.09.2023 | 21 | 60 | ಮಾಧುರಿ ಕೃಷ್ಣ |
| 218 | 42 | 22.10.2023 | 27 | 63 | ಮಾಲತಿ ಶ್ರೀನಿವಾಸನ್ |
| 219 | 43 | 11.11.2023 | 27 | 71 | ಡಾ. ಶುಭಶ್ರೀ ಪ್ರಸಾದ್ |
| 220 | 44 | 16.12.2023 | 30 | 78 | ವೆಂಕಟೇಶ ಕಾಮತ್ |
| 221 | 45 | 13.01.2024 | 30 | 68 | ಶೀಲಾ ಅರಕಲಗೂಡು |
| 222 | 46 | 10.02.2024 | 29 | 77 | ಡಾ. ಸತ್ಯವತಿ ಮೂರ್ತಿ |
| 223 | 47 | 09.03.2024 | 23 | 65 | ಜಿ.ಎನ್.ನರಸಿಂಹ ಮೂರ್ತಿ |
| 224 | 48 | 14.04.2024 | 20 | 54 | ಎಂ.ಜಿ.ವೆಂಕಟೇಶ ಮೂರ್ತಿ |
| 225 | 49 | 11.05.2024 | 26 | 91 | ಪೂರ್ಣಿಮಾ ಭಗವಾನ್ |
| 226 | 50 | 08.06.2024 | 29 | 101 | ಮಾನಸ ಕೆ.ಕೆ. |
| 227 | 51 | 14.07.2024 | 24 | 70 | ಸೀತಾರಾಮ ಕಟ್ಟಿ |
| 227 | 52 | 10.08.2024 | 28 | 67 | ಎಂ.ಆರ್.ಶ್ರೀರಂಗರಾಜನ್ |
| 229 | 53 | 14.09.2024 | 25 | 62 | ಎಲ್. ಗಿರಿಜಾ ರಾಜ್ |
| 230 | 54 | 20.10.2024 | 27 | 75 | ಎನ್. ಶಂಕರ ರಾವ್ |
| 231 | 55 | 09.11.2024 | 27 | 62 | ಜಿ.ವಿ. ನಿರ್ಮಲ |
| 232 | 56 | 04.12.2024 | 26 | 66 | ಕೆ.ಆರ್.ಎಸ್. ಮೂರ್ತಿ |
| 233 | 57 | 11.01.2025 | 25 | 68 | ಟಿ.ಆರ್. ಉಷಾರಾಣಿ |
| 234 | 58 | 08.02.2025 | 30 | 90 | ಜಿ.ವಿ. ಅರುಣ |
| 235 | 59 | 22.03.2025 | 19 | 52 | ಹೆಚ್. ಶ್ರೀಧರ ರಾವ್ |
| 236 | 60 | 12.04.2025 | 18 | 62 | ಎನ್.ವಿ. ರಘುರಾಂ |

# ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ,
1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 236 ನಡೆದ ದಿನಾಂಕ: 12 ಏಪ್ರಿಲ್ 2025
ಸಂಚಿಕೆಯ ಬಿಡುಗಡೆ ದಿನಾಂಕ: 10 ಮೇ 2025

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)

.